
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



GST ಹೆಚ್ಚಾದರೆ
ಮನೆಯಲ್ಲಿ ಅಡುಗೆ ಮಾಡಿ
ಎಂದ ಸಚಿವೆ
ನಿರ್ಮಲಾ ಸೀತಾರಾಮನ್

ಸಂಪುಟ 11 | ಸಂಚಿಕೆ 29 | ಪುಟ 16 | ಜುಲೈ 10-16, 2017 | ರೂ. 10/-

web: www.janashakthi.co.in | e-mail : js_weekly@yahoo.com



ಕಟ್ಟಡ ಕಾರ್ಮಿಕರು ರಾಜಕೀಯ ಶಕ್ತಿಯಾಗಬೇಕು




ಕಿಸಾನ್ ಮುಕ್ತಿ ಯಾತ್ರಾ ಆರಂಭ

ಜುಲೈ 10 : ರೈತ ದಲಿತ ಕೃಷಿಕೂಲಿಕಾರರ ಜಂಟಿ ಸಮಾವೇಶ



ಜಾತಿ ಭಂಡತನದ ವಿರುದ್ಧ 400 ಕಿಮಿ ಪಾದಯಾತ್ರೆ



ಪೇಜಾವರರ ಇಫ್ತರ್ 'ಹನುಮನ ನೆಗೆತ'ವೇ ?

ಪ.ಬಂಗಾಳ: ಕೋಮುಧ್ರುವೀಕರಣದಿಂದ ಹತ್ತಿ ಉರಿದ ಬದುರಿಯಾ

ಜಿಎಸ್‌ಟಿಯಿಂದ ಉದ್ಭವವಾಗುವ ಸಮಸ್ಯೆಗಳನ್ನು ಬಗೆಹರಿಸಿ, ಕಾರ್ಪೊರೇಟ್‌ಗಳು ಗಿಟ್ಟಿಸುವ ಬಕ್ಷೀಸುಗಳಿಗೆ ಸಾಮಾನ್ಯ ಜನರು ಬೆಲೆ ತೆರುವಂತಾಗಬಾರದು–ಸಿಪಿಐ(ಎಂ) ಆಗ್ರಹ

ಜುಲೈ 1 ರಿಂದ ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ)ಯನ್ನು ಆತುರಾತುರದಿಂದ ಜಾರಿ ಮಾಡಲಾಗುತ್ತಿದೆ. ಇದರಿಂದ ಹಲವು ಸಮಸ್ಯೆಗಳು ಉದ್ಭವವಾಗುತ್ತಿವೆ. ಇವನ್ನು ಬಗೆಹರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಹಣದುಬ್ಬರದ ಬೆದರಿಕೆ ಕಾಣಿಸುತ್ತಿದೆ. ಬಳಕೆ ಸರಕುಗಳ ಬೆಲೆಗಳಲ್ಲಿ ಸರ್ವತೋಮುಖ ಏರಿಕೆ ಆಗುವ ಸಂಭವವಿದೆ. ಹಲವು ಸರಕುಗಳಿಗೆ ಈಗಿರುವ ಒಟ್ಟು ಕೇಂದ್ರ ಮತ್ತು ರಾಜ್ಯ ತೆರಿಗೆಗಳಿಗಿಂತ ಕೆಳಗಿನ ದರಗಳನ್ನು ನಿಗದಿ ಮಾಡಿದ್ದರೂ ಹೀಗಾಗಬಹುದು. ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಕನಿಷ್ಟ 1ಲಕ್ಷ ಕೋಟಿ ರೂ.ಗಳ ಆದಾಯ ನಷ್ಟವಾಗಲಿದೆ ಎಂದು ಅಂದಾಜು ಮಾಡಲಾಗಿದೆ. ಇದು ಕಾರ್ಪೊರೆಟ್‌ಗಳು ಗಿಟ್ಟಿಸುವ ಬಕ್ಷೀಸು. ಅವರು ಕಡಿಮೆ ದರಗಳ ಪ್ರಯೋಜನವನ್ನು ಬಳಕೆದಾರರಿಗೆ ವರ್ಗಾಯಿಸುವುದಿಲ್ಲ.

ಜಿಎಸ್‌ಟಿ ಕಾಯ್ದೆಯಲ್ಲಿ ಲಾಭಕೋರತನ ನಿರೋಧ ಅಂಶವಿದೆ. ಕಡಿಮೆ ತೆರಿಗೆ ದರದ ಪ್ರಯೋಜನವನ್ನು ಬಳಕೆದಾರರಿಗೆ ಅದಕ್ಕನುಗುಣವಾದ ಬೆಲೆ ಇಳಿಕೆಗಳಿಂದ ವರ್ಗಾಯಿಸುವಂತೆ ಮಾಡಲೆಂದು ಈ ಆಂಶವನ್ನು ಸೇರಿಸಲಾಗಿದೆ. ಆದರೆ ಸರಕಾರ ಈ ಅಂಶವನ್ನು ಪರಿಣಾಮಕಾರಿಯಾಗಿ ಬಳಸಲು ಹಿಂದೇಟು ಹಾಕುತ್ತದೆ. ಅದಿನ್ನೂ ಈ ಲಾಭಕೋರತನ–ನಿರೋಧಕ ವಿಧಿಯ ಅಡಿಯಲ್ಲಿ ನಿಯಮಗಳನ್ನು ರೂಪಿಸಿಲ್ಲ ಎಂಬ ಸಂಗತಿಯತ್ತ ಸಿಪಿಐ(ಎಂ) ಗಮನ ಸೆಳೆದಿದೆ. ತೆರಿಗೆ ರಚನೆಯಲ್ಲಿ ಸ್ಪಷ್ಟತೆಯ ಕೊರತೆಯನ್ನು ಬಳಸಿಕೊಂಡು ಬೆಲೆಗಳನ್ನು ಏರಿಸುವ ಪ್ರಯತ್ನಗಳನ್ನು ನಡೆಸುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದೆ.

ಕೇಂದ್ರ ಸರಕಾರ ಈಗಿರುವ ಒಟ್ಟು ತೆರಿಗೆಯ ಅಡಿಯಲ್ಲಿ ಮತ್ತು ಜಿಎಸ್‌ಟಿಯ ಅಡಿಯಲ್ಲಿ ಸರಕುಗಳ ಬೆಲೆಗಳ ದು ವಿವರವಾದ ಪಟ್ಟಿಯನ್ನು ಪ್ರಕಟಿಸಬೇಕು ಮತ್ತು ಎಂಆರ್‌ಪಿ(ಗರಿಷ್ಟ ಚಿಲ್ಲರೆ ಬೆಲೆ)ಯನ್ನು ಕಡಿಮೆ ಮಾಡಲು ಮಧ್ಯಪ್ರವೇಶಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಜಿಎಸ್‌ಟಿ ತೆರಿಗೆ ದರಗಳು ಕೆಲವು ವಲಯಗಳನ್ನು ಮತ್ತು ಸರಕುಗಳನ್ನು ಪ್ರತಿಕೂಲವಾಗಿ ತಟ್ಟುತ್ತವೆ. ಇಡೀ ಸಣ್ಣಪ್ರಮಾಣದ ವಲಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಏಕೆಂದರೆ 75ಲಕ್ಷ ರೂ.ಗಳಿಗಿಂತ ಹೆಚ್ಚು ವಹಿವಾಟು ಇರುವ ಘಟಕಗಳು ಈಗ ಪೂರ್ಣ ತೆರಿಗೆ ಕಟ್ಟಬೇಕು. ಇದುವರೆಗೆ 1.5 ಕೋಟಿ ರೂ.ಗಳಿಗಿಂತ ಕಡಿಮೆಯ ಎಲ್ಲ ಘಟಕಗಳಿಗೂ ವಿನಾಯ್ತಿ ಇತ್ತು.

ಸಣ್ಣ ಉದ್ದಿಮೆಗಳ ಬದಲಾಗಿ ದೊಡ್ಡ ಉದ್ದಿಮೆಗಳ ಪರವಾಗಿ ಕೆಲಸ ಮಾಡುವ ಹಲವಾರು ಅಸಂಗತತೆಗಳಿವೆ. ಕೇಂದ್ರ ಸರಕಾರ ಮತ್ತು ಜಿಎಸ್‌ಟಿ ಮಂಡಳಿ ತಕ್ಷಣವೇ ಈ ಪ್ರಶ್ನೆಗಳ ಪುನರವಲೋಕನ ಮಾಡಿ ಈ ಅಸಂಗತತೆಗಳನ್ನು ತೆಗೆಯಬೇಕು. ಯಾವುದೇ ರೀತಿಯಲ್ಲಿ ಕಾರ್ಪೊರೇಟ್‌ಗಳು ಗಿಟ್ಟಿಸುವ ಬಕ್ಷೀಸುಗಳಿಗೆ ಸಾಮಾನ್ಯ ಜನರು ಬೆಲೆ ತೆರುವಂತಾಗಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಚ್ಚರಿಸಿದೆ.

ಮೋದಿ ಸರಕಾರ ಬಹಳ ಆತುರದಿಂದ ಜಿಎಸ್‌ಟಿಯನ್ನು ತಂದಿದೆ. ಇದು ಸಣ್ಣ ಉದ್ದಿಮೆಗಳು , ವ್ಯಾಪಾರಿಗಳು ಮತ್ತು ಅಂಗಡಿಯವರಿಗೆ ಹಲವಾರು ಸಮಸ್ಯೆಗಳನ್ನು ಉಂಟು ಮಾಡುತ್ತಿದೆ. ಈ ಹೊಸ ತೆರಿಗೆ ರಚನೆಯ ಅನುಷ್ಠಾನಕ್ಕೆ ಸಾಕಷ್ಟು ಸಮಯವನ್ನು ಕೊಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಇಸ್ರೇಲಿನೊಂದಿಗೆ 'ವ್ಯೂಹಾತ್ಮಕ ಭಾಗೀದಾರಿಕೆ'ಯ ಪ್ರಕಟಣೆ: ಪ್ಯಾಲೆಸ್ತೀನೀ ಪ್ರಭುತ್ವದ ಚಕಾರವಿಲ್ಲ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕೆ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಇಸ್ರೇಲ್ ಭೇಟಿ ಇಸ್ರೇಲ್ ಕುರಿತಂತೆ ಭಾರತದ ದೀರ್ಘಕಾಲದ ನಿಲುವಿನಲ್ಲಿ ಬಿರುಕಿನ ಸಂಕೇತವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ಇಸ್ರೇಲ್ ಪ್ಯಾಲೆಸ್ತೀನೀ ಪ್ರದೇಶಗಳನ್ನು ಆಕ್ರಮಿಸಿಕೊಂಡಿರುವ ಶಕ್ತಿ ಎಂಬುದು ಭಾರತದ ಬಹಳ ಕಾಲದ ಕಣ್ಣೋಟ ಎಂಬುದನ್ನು ಸಿಪಿಐ(ಎಂ) ನೆನಪಿಸಿದೆ.

ಇಸ್ರೇಲಿನೊಂದಿಗೆ ಜಂಟಿ ಹೇಳಿಕೆಯಲ್ಲಿ ಒಂದು 'ವ್ಯೂಹಾತ್ಮಕ ಭಾಗೀದಾರಿಕೆ'ಯ ಪ್ರಕಟಣೆಯಿದೆ. ಇದು ವ್ಯೂಹಾತ್ಮಕ ಮೈತ್ರಿಯಾಗಿದ್ದು, ಪ್ಯಾಲೆಸ್ತೀನಿ ಹೋರಾಟಕ್ಕೆ ಬೆಂಬಲವನ್ನು ಕೈಬಿಟ್ಟಂತೆಯೇ ಆಗಿದೆ. ಮೋದಿಯವರು ರಮಲ್ಲಾ ಮತ್ತು ಪ್ಯಾಲೆಸ್ತೀನೀ ಪ್ರಾಧಿಕಾರವನ್ನು ಭೇಟಿಯಾಗಲು ಹೋಗದಿರುವುದು ಇದನ್ನು ಇನ್ನಷ್ಟು ಬಲಪಡಿಸಿದೆ. ಈ ಭೇಟಿಯಾದ್ಯಂತ ಭಾರತೀಯ ಪ್ರಧಾನ ಮಂತ್ರಿಗಳು ಒಂದು ಪ್ಯಾಲೆಸ್ತೀನೀ ಪ್ರಭುತ್ವದ ಪ್ರಶ್ನೆಯ ಬಗ್ಗೆ ಚಕಾರವೆತ್ತಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಏರ್ ಇಂಡಿಯ ಖಾಸಗೀಕರಣ: ಸಾರ್ವಜನಿಕ ಹಣದ ಉಳಿತಾಯಕ್ಕಲ್ಲ, ರಾಷ್ಟ್ರೀಯ ಆಸ್ತಿಯ ಅಗ್ಗದ ಮಾರಾಟಕ್ಕೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೋದಿ ಸರಕಾರ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಏರ್ ಇಂಡಿಯ ವನ್ನು ಖಾಸಗೀಕರಿಸಲು ನಿರ್ಧರಿಸಿದೆ. ಕೇಂದ್ರ ಸಂಪುಟ ಏರ್ ಇಂಡಿಯ ಮತ್ತು ಅದರ ಐದು ಉಪಸಂಸ್ಥೆಗಳ ಶೇರುಗಳನ್ನು ಮಾರಬೇಕೆಂಬ ನೀತಿ ಆಯೋಗದ ಶಿಫಾರಸಿನ ಸೂತ್ರಕ್ಕೆ ಒಪ್ಪಿಗೆ ನೀಡಿದೆ. ಮೋದಿ ಸರಕಾರದ ನಿರ್ಧಾರವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ನಿರ್ಧಾರವನ್ನು 2008ರಿಂದ ಸತತವಾಗಿ ನಷ್ಟ ಅನುಭವಿಸುತ್ತಿದ್ದ ಏರ್ ಇಂಡಿಯ ಈಗ ಲಾಭಗಳಿಸಲಾರಂಭಿಸಿದ ಮೇಲೆ ಮಾಡಲಾಗಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಗಮನ ಸೆಳೆದಿದೆ. 2015–16ರಲ್ಲಿ ಅದು 105 ಕೋಟಿರೂ. ಕಾರ್ಯನಿರ್ವಹಣೆಯ ಲಾಭ ದಾಖಲಿಸಿತು. 2016–17ರಲ್ಲಿ ಇದು 300 ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ.

ವಾಸ್ತವವಾಗಿ ಏರ್‌ಇಂಡಿಯವನ್ನು ಕುಂಠಿತಗೊಳಿಸಿದ್ದು, ಅದರ ಮೇಲೆ ಸಾಲದ ಭಾರೀ ಹೊರೆ ಬೀಳುವಂತೆ ಮಾಡಿದ್ದು ಕೇಂದ್ರದಲ್ಲಿನ ಸರಕಾರಗಳ ಪ್ರಮಾದ ಭರಿತ ಲೆಕ್ಕಾಚಾರಗಳಿಂದ ಮತ್ತು ಕೆಲವು ತಪ್ಪು ನಿರ್ಧಾರಗಳಿಂದಾಗಿಯೇ. ಈಗ ಆ ತಪ್ಪುಗಳಿಗೆ ಆ ಸಂಸ್ಥೆಯನ್ನೇ ಬಲಿಪಶುವಾಗಿ ಮಾಡಿ ಖಾಸಗೀಕರಿಸುವ ಪ್ರಯತ್ನ ಮಾಡಲಾಗುತ್ತಿದೆ.

ಕೇಂದ್ರದ ಸರಕಾರಗಳ ತಪ್ಪು ಧೋರಣೆಗಳಿಂದಾಗಿ ಉಂಟಾಗಿರುವ 30,000 ಕೋಟಿ ರೂ.ಗಳ ಸಾಲಹೊರೆಯನ್ನು ಮನ್ನಾ ಮಾಡಿ ಇದನ್ನು ಖರೀದಿಸಬಹುದಾದ ಖಾಸಗಿಯವರಿಗೆ ಸರಕಾರ ಒಂದು ಬಕ್ಷೀಸನ್ನೂ ಕೊಡುತ್ತಿದೆ. ಆದ್ದರಿಂದ ಏರ್‌ಇಂಡಿಯದ ಖಾಸಗೀಕರಣ ಈ ಕ್ರಮದ ಬೆಂಬಲಿಗರು ವಾದಿಸುವಂತೆ ಸಾರ್ವಜನಿಕ ಹಣವನ್ನು ಉಳಿಸಲಿಕ್ಕಾಗಿ ಅಲ್ಲ, ಬದಲಾಗಿ ದೇಶದ ಖಜಾನೆಗೆ ವಂಚಿಸಿ ರಾಷ್ಟ್ರೀಯ ಆಸ್ತಿಗಳನ್ನು ದೇಶಿ–ವಿದೇಶಿ ಖಾಸಗಿ ಕುಳಗಳಿಗೆ ಅತ್ಯಂತ ಅಗ್ಗದಲ್ಲಿ ಮಾರಲಿಕ್ಕಾಗಿ ಎಂದು ಅಭಿಪ್ರಾಯ ಪಟ್ಟಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಏರ್ ಇಂಡಿಯದ ಮಾರಾಟ ಮೋದಿ ಸರಕಾರದ ಒಟ್ಟಾರೆ ಖಾಸಗೀಕರಣದ ಧಾವಂತದ ಒಂದು ಭಾಗ, ಇದು ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾದದ್ದು, ಇದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಹೇಳಿದೆ

ಗೋರಕ್ಷಣೆಯ ಹೆಸರಲ್ಲಿ ಹಿಂಸಾಚಾರ ಭೀಕರಗೊಂಡಿದ್ದರೂ ಸರಕಾರಗಳ ಮೆದು ಧೋರಣೆ– ಮಧ್ಯಪ್ರವೇಶಿಸಿ ಬಲವಾದ ಸಂದೇಶ ನೀಡುವಂತೆ ಗೃಹಮಂತ್ರಿಗಳಿಗೆ ಸಿಪಿಐ(ಎಂ) ಮನವಿ ಪತ್ರ

ಜೂನ್ 4ರಂದು ಸಿಪಿಐ(ಎಂ) ನಿಯೋಗವೊಂದು ಕೇಂದ್ರ ಗೃಹಮಂತ್ರಿ ರಾಜನಾಥ್ ಸಿಂಗ್‌ರವನ್ನು ಭೇಟಿಯಾಗಿ ಗೋರಕ್ಷಣೆಯ ಹೆಸರಲ್ಲಿ ಮುಸ್ಲಿಂ, ದಲಿತ ಮತ್ತು ಆದಿವಾಸಿ ಸಮುದಾಯಗಳವರನ್ನು ಬಡಿದು ಸಾಯಿಸುವ ವರೆಗಿನ ಹಿಂಸಾಚಾರ ಮತ್ತು ಸುಳ್ಳು ಕೇಸುಗಳು ಹೆಚ್ಚುತ್ತಿದ್ದು ಈ ಬಗ್ಗೆ ಕೇಂದ್ರ ಗೃಹ ಮಂತ್ರಾಲಯದ ಮಧ್ಯಪ್ರವೇಶ ಅಗತ್ಯವಾಗಿದೆ ಎಂದು ವಿವರಿಸುವ ಒಂದು ಮನವಿ ಪತ್ರವನ್ನು ಸಲ್ಲಿಸಿತು. ಇದರಲ್ಲಿ ದೇಶದ ರಾಜಧಾನಿಯ ಸುತ್ತಮುತ್ತಲು ನಡೆದಿರುವ ಐದು ನಿರ್ದಿಷ್ಟ ಪ್ರಕರಣಗಳ ವಿವರಗಳನ್ನು ಕೊಡಲಾಗಿದೆ.

ಗೋರಕ್ಷಕರೆನ್ನುವವವರು ಬಡಿದು ಸಾಯಿಸಿದ ಇಖ್ಲಾಕ್ ಖಾನ್ ಮಗ ಮತ್ತು ಪೆಹ್ಲೂ ಖಾನ್ ಮಗ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ದಿಲ್ಲಿ ಮತ್ತು ಹರ್ಯಾಣ ರಾಜ್ಯ ಕಾರ್ಯದರ್ಶಿಗಳಾದ ಕೆ ಎಂ ತಿವಾರಿ ಮತ್ತು ಸುರಿಂದರ್ ಮಲಿಕ್ ಮತ್ತಿತರ ರಾಜ್ಯ ಮುಖಂಡರುಗಳಿದ್ದ ಈ ನಿಯೋಗದ ಜತೆಗಿದ್ದರು. **ಗೃಹಮಂತ್ರಿಗಳು ಮನವಿ ಪತ್ರದಲ್ಲಿ ಎತ್ತಿರುವ ಪ್ರಶ್ನೆಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಆದರೆ ನಾಗರಿಕರಿಗೆ ರಕ್ಷಣೆ ಕೊಡಲು ಸರಕಾರ ಏನು ಕ್ರಮ ಕೈಗೊಳ್ಳುತ್ತಿದೆ ಎಂದು ಕೇಳಿದಾಗ ವಿವರಿಸಲು ತಡವರಿಸಿದರು, ಇದು ರಾಜ್ಯ ಸರಕಾರಗಳ ವಿಷಯ ಎಂದರು.**

ಸಂಬಂಧಪಟ್ಟ ರಾಜ್ಯ ಸರಕಾರಗಳು ಇಂತಹ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂಬುದು ನಿಜವಾದರೂ ಕೇಂದ್ರದಲ್ಲಿ ಗೃಹ ವ್ಯವಹಾರಗಳ ಮಂತ್ರಿಗಳ ಬಲವಾದ ಮಧ್ಯಪ್ರವೇಶ ಪ್ರಕರಣಗಳಲ್ಲಿ ಅಗತ್ಯ ಎಂದು ಮನವಿ ಪತ್ರ ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದೆ. ದಿಲ್ಲಿಯ ಜಂತರ್ ಮಂತರ್‌ನಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶ ಮತ್ತು ಹರ್ಯಾಣದ ಸಿಪಿಐ(ಎಂ) ರಾಜ್ಯಸಮಿತಿಗಳು ಸಂಘಟಿಸಿದ ಪ್ರತಿಭಟನಾ ಧರಣಿಯಲ್ಲಿ ಈ ಪ್ರಕರಣಗಳಲ್ಲಿ ತೊಂದರೆಗೊಳಗಾದ ಕುಟುಂಬಗಳ ಸದಸ್ಯರೂ ನ್ಯಾಯ ಸಿಗಬಹುದೆಂಬ ನಿರೀಕ್ಷೆಯಿಂದ ಭಾಗವಹಿಸಿದ್ದಾರೆಂಬ ಸಂಗತಿಯನ್ನು ಮನವಿ ಪತ್ರ ಗೃಹಮಂತ್ರಿಗಳ ಗಮನಕ್ಕೆ ತಂದಿದೆ.

ಮನವಿ ಪತ್ರ ಪಟ್ಟಿ ಮಾಡಿದ ಐದು ಪ್ರಕರಣಗಳು ಹೀಗಿವೆ:

1. 15 ವರ್ಷದ ಜುನೈದನನ್ನು ಲೋಕಲ್ ಟ್ರೇನಲ್ಲಿ ಬಡಿದು ಸಾಯಿಸಿದ ಪ್ರಕರಣದಲ್ಲಿ ಮುಖ್ಯ ಆಪಾದಿತರನ್ನು ಪೋಲೀಸರು ಇನ್ನೂ ಬಂಧಿಸಿಲ್ಲ ಎಂಬುದು ಆಘಾತಕಾರಿ. ಬದಲಾಗಿ ಪೋಲೀಸರು ಮಾಡಿರುವ ಕೆಲವು ಬಂಧನಗಳ ವಿರುದ್ಧವೂ ಸುತ್ತಲಿನ ಹಳ್ಳಿಗರನ್ನು ಉದ್ರೇಕಿಸಲು ಈ ಭೀಕರ

ಪುಟ 11 ಕ್ಕೆ

ರೈತರ ದೇಶವ್ಯಾಪಿ ಐಕ್ಯ ಹೋರಾಟ–ಮಂದಸೌರ್‌ನಿಂದ ಕಿಸಾನ್ ಮುಕ್ತಿ ಯಾತ್ರಾದೊಂದಿಗೆ ಆರಂಭ

ಕಾರ್ಪೊರೇಟ್ ಮುಷ್ಟಿಯಿಂದ ರೈತಾಪಿಗಳನ್ನು ರಕ್ಷಿಸಿ!
ಮಾನವ ಕುಲವನ್ನು ಉಳಿಸಿ! ದೇಶವನ್ನು ಉಳಿಸಿ!

ಈ ಘೋಷಣೆಗಳೊಂದಿಗೆ ಜುಲೈ 6ರಂದು, ರೈತ–ವಿರೋಧಿ, ಕಾರ್ಪೊರೇಟ್–ಪರ ಧೋರಣೆಗಳ ವಿರುದ್ಧ ರೈತರ ಹೋರಾಟದಲ್ಲಿ ಪೋಲಿಸ್ ಗುಂಡುಗಳು ಆರು ರೈತರನ್ನು ಬಲಿ ತೆಗೆದುಕೊಂಡ ಮಂದಸೌರ್‌ನಿಂದ 162 ರೈತ ಸಂಘಟನೆಗಳು ಒಟ್ಟಾಗಿ ಯೋಜಿಸಿರುವ ಕಿಸಾನ್ ಮುಕ್ತಿ ಯಾತ್ರಾ ಬಿಜೆಪಿ ರಾಜ್ಯ ಸರಕಾರ ಒಡ್ಡಿದ ಅಡ್ಡಿ–ಆತಂಕಗಳ ನಡುವೆಯೇ ಆರಂಭವಾಗಿದೆ.

ಇದನ್ನು ವಿಫಲಗೊಳಿಸಲು ಮಧ್ಯಪ್ರದೇಶದ ಬಿಜೆಪಿ ಸರಕಾರ ಆ ರಾಜ್ಯದ ಹಿರಿಯ ರೈತ ಮುಖಂಡ, ಜನತಾ ಆಂದೋಲನಗಳ ರಾಷ್ಟ್ರೀಯ ಮೈತ್ರಿಕೂಟ (ಎನ್‌ಎಪಿಎಂ)ದ ರಾಷ್ಟ್ರೀಯ ಸಂಯೋಜ–ಕರು ಮತ್ತು ಭೂಮಿ ಅಧಿಕಾರ್ ಆಂದೋಲನ್‌ದ ಒಬ್ಬ ಮುಖಂಡರೂ ಆಗಿರುವ ಡಾ. ಸುನೀಲಂ ಅವರನ್ನು ಬಂಧಿಸಿತು.

ಆದರೂ ಸ್ವರಾಜ್ಯ ಇಂಡಿಯಾದ ಮುಖಂಡ ಯೋಗೇಂದ್ರ ಯಾದವ್, ನರ್ಮದಾ ಬಚಾವ್ ಆಂದೋಲನದ ಮೇಧಾ ಪಾಟ್ಕರ್, ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ

ಪುಟ 11 ಕ್ಕೆ



ಸಂಪಾದಕೀಯ

ಪೇಜಾವರ ಇಫ್ತರ್ ಪಾರ್ಟಿ "ಹನುಮನ ನೆಗೆತ"ವೇ?

ಪೇಜಾವರ ಸ್ವಾಮೀಜಿ ಮುಸ್ಲಿಮರನ್ನು ಆಹ್ವಾನಿಸಿ ಉಡುಪಿ ಶ್ರೀಕೃಷ್ಣ ಮಠದಲ್ಲಿ ಇಫ್ತಾರ್ ಕೂಟ ಏರ್ಪಡಿಸಿದ್ದು ಮತ್ತು ಆ ಸಂದರ್ಭದಲ್ಲಿ ಮಠದೊಳಗೆ ನಮಾಜ್ ಮಾಡಲು ಅವಕಾಶ ನೀಡಿದ್ದು, ವಿವಿಧ ರೀತಿಯ ಪ್ರತಿಕ್ರಿಯೆಗಳಿಗೆ ಹಾಗೂ ಚರ್ಚೆಗೆ ಗ್ರಾಸವಾಗಿದೆ. ಈ ಪ್ರತಿಕ್ರಿಯೆಗಳನ್ನು ಸ್ಥೂಲವಾಗಿ ಮೂರು ವಿಧಗಳಾಗಿ ವಿಂಗಡಿಸಬಹುದು. "ಹಿಂದುತ್ವ" ಬಣದ ವ್ಯಕ್ತಿಗಳು, ಸಂಘಟನೆಗಳು, ಬೆಂಬಲಿಗರು ಪೇಜಾವರ ಸ್ವಾಮೀಜಿಯವರನ್ನು ಖಂಡಿಸಿದ್ದಾರೆ. ಪ್ರತಿಭಟಿಸಿದ್ದಾರೆ. ಇದು ಒಂದು "ವಿರೋಧ"ದ ಪ್ರತಿಕ್ರಿಯೆ. ಪೇಜಾವರ ಸ್ವಾಮೀಜಿ ಅವರ ಹೊಸ ನಡೆಯನ್ನು ಸ್ವಾಗತಿಸುತ್ತಲೇ ಮತ್ತು ಹಿಂದುತ್ವ ವಿರೋಧವನ್ನು ಖಂಡಿಸುತ್ತಲೇ, ಅವರ ಇತರ ಹಿಂದಿನ ಮತ್ತು ಇತ್ತೀಚಿನ ನಡೆಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಾ ಈ ನಡೆ ನೈಜವೇ. ಇದು ಹೊಸ ರಾಜಕೀಯ ಕಪಟ ನಾಟಕವೇ ಎಂದು ಕೆಲವರು ತೀವ್ರ ಅನುಮಾನ ವ್ಯಕ್ತಪಡಿಸಿದ್ದಾರೆ. ಇದು ಒಂದು ಎಚ್ಚರಿಕೆಯ "ಅನುಮಾನ"ದ ಪ್ರತಿಕ್ರಿಯೆ. ಈ ಎರಡು ನಿಲುವುಗಳಲ್ಲಿ ಆಶ್ಚರ್ಯಕರವಾದದ್ದು ಏನೂ ಇಲ್ಲ.

ಬಹುಶಃ ಗಮನಾರ್ಹ ಹೊಸ ಬೆಳವಣಿಗೆ ಎಂದರೆ ಇದೊಂದು ಮಹತ್ವದ ಹೊಸ ಸಕಾರಾತ್ಮಕ ಬೆಳವಣಿಗೆಯೆಂದು ಗ್ರಹಿಸಿದ ಪೇಜಾವರ ಸ್ವಾಮೀಜಿ ಅವರ ಹೊಸ ನಡೆಗೆ "ಅಸಂದಿಗ್ಧ ಸ್ವಾಗತ" ನೀಡಿದ ಮೂರನೇ ಬಗೆಯ ಪ್ರತಿಕ್ರಿಯೆ. ಇದರ ಕೆಲವು ಸ್ಯಾಂಪಲುಗಳು. ಒಬ್ಬರು "ಉಡುಪಿಯ ಕೋಮು ಸೌಹಾರ್ದವನ್ನು ಇಫ್ತಾರ್ ಕೂಟದ ಮೂಲಕ ನೆನಪಿಸಿ ಪೇಜಾವರ ಸ್ವಾಮೀಜಿ ದೇವರು ಮೆಚ್ಚುವ ಮಾನವ ಪ್ರೀತಿಯ ಕೆಲಸ ಮಾಡಿದ್ದಾರೆ." ಮತ್ತು "ಆ ಊರಿನ ನಿಜವಾದ ಚರಿತ್ರೆಯನ್ನು ಜ್ಞಾಪಿಸಿ ಕೊಟ್ಟಿದ್ದಾರೆ" ಎಂದಿದ್ದಾರೆ. ಇನ್ನೊಬ್ಬರು ಇದು "ನಿಜಕ್ಕೂ ಒಂದು ದೊಡ್ಡ ಹೆಜ್ಜೆ. ಇದರಿಂದಾಗಿ ತಾನು ಎದುರಿಸಬೇಕಾದ ವಿರೋಧಗಳ ಎಲ್ಲ ಅರಿವಿದ್ದೂ ತನ್ನ ಆತ್ಮಸಾಕ್ಷಿಗೆ ಸರಿಯಾಗಿ ನಡೆದುಕೊಂಡ ಅವರ ರೀತಿ ನಾಡಿಗೇ ಒಂದು ಮಾದರಿ? ಮಠಕ್ಕೂ ಮುಸ್ಲಿಂ ಸಮುದಾಯಕ್ಕೂ ಲಾಗಾಯ್ತಿನಿಂದ ಇದ್ದ ನಂಟಿನ ಪರಂಪರೆಯನ್ನು ನೆನಪಿಸಿಕೊಂಡಿದ್ದಾರೆ? ಸಾಮಾಜಿಕ ಸ್ನೇಹ ಸೌಹಾರ್ದದ ಬಾಳುವೆಗಾಗಿ ನಡೆದ ಈ ಹೊಸ ಪರಿಯ ಪೀಠಿಕೆ ಕಂಡು ಅದನ್ನು ಹಂಬಲಿಸುವ ಎಲ್ಲರ ಮನ ತುಂಬಿದೆ. ಕಣ್ಣು ಕಂಬನಿಗೂಡಿದೆ." ಎಂದಿದ್ದಾರೆ. ಮಗದೊಬ್ಬರು "ಪೇಜಾವರ ಶ್ರೀಗಳು ಕರಾವಳಿ ಪ್ರದೇಶದ ಸಾಮಾಜಿಕ ಸಹಜೀವನದ ನೆನಪುಗಳನ್ನು ಇಟ್ಟುಕೊಂಡವರು. ಅವರ ವ್ಯಕ್ತಿತ್ವದಲ್ಲಿರುವ ಮಾನವೀಯ ಕಳಕಳಿ ಈ ಬಗೆಯ ಸೌಹಾರ್ದ ಕೂಟವನ್ನು ಏರ್ಪಡಿಸುವಂತೆ ಪ್ರಚೋದಿಸಿದೆ" ಎಂದಿದ್ದಾರೆ. ಮತ್ತೊಬ್ಬರಂತೂ "ಮಠದ ಸಂಪ್ರದಾಯ, ನಡವಳಿಕೆಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸುವ ಹೊಣೆಗಾರಿಕೆ ಹೊತ್ತ" "ಕರ್ಮಠ ಪರಂಪರೆಯಲ್ಲೇ ಬಂದ ಪೇಜಾವರರ ಈಗಿನ ನಡೆ ಒಂದು ಹನುಮ ನೆಗೆತವೇ ಸರಿ!" ಎಂದು ಹರ್ಷೋದ್ಗಾರ ಮಾಡಿದ್ದಾರೆ.



ಇವರುಗಳು ತಮ್ಮ ಅನಿಸಿಕೆಗಳನ್ನು "ಅಸಂದಿಗ್ಧ ಸ್ವಾಗತ"ಕ್ಕೆ ನಿಲ್ಲಿಸದೆ, ಎಚ್ಚರಿಕೆಯ "ಅನುಮಾನ"ದ ಪ್ರತಿಕ್ರಿಯೆ ನೀಡಿದವರನ್ನು "ಈ ಸೌಹಾರ್ದ ಕೂಟ ಒಂದು ಪ್ರಜಾತಾಂತ್ರಿಕ ಸಂಕೇತ. ಈ ಸಂಕೇತವನ್ನು ಗೌರವಿಸಿ ಅದರ ಕಳಕಳಿಗೆ ಮಣಿಯಬೇಕೇ ಹೊರತು ಕ್ಷುಲ್ಲಕರಂತೆ ವರ್ತಿಸಬಾರದು", "ಪೇಜಾವರರ ನಡೆಯನ್ನು ಟೀಕಿಸುವುದು, ಲೇವಡಿ ಮಾಡುವುದು ಸುಲಭ. ಆದರೆ ಅವರ ನಡೆ ಸಮಾಜದ ಕಣ್ಣನ್ನು ಕಿಂಚಿತ್ತಾದರೂ ತೆರೆಸುವಂಥದ್ದು. ಅದನ್ನು ಮುಕ್ತವಾಗಿ ಸ್ವಾಗತಿಸುವ ಔದಾರ್ಯ ತೋರಬೇಕಿದೆ", ಎಂಬಿತ್ಯಾದಿಯಾಗಿ ಟೀಕಿಸಿದ್ದಾರೆ.

ಕೋಮು ದಳ್ಳುರಿಯಲ್ಲಿ ಸೌಹಾರ್ದತೆ ಸಹಬಾಳ್ವೆ ಸುಟ್ಟು ಕರಕಲಾಗುತ್ತಿರುವ, ಭಾರತ, ಕರ್ನಾಟಕ ಮತ್ತು ಕರಾವಳಿಯಲ್ಲಿ ಕವಿದಿರುವ ಕರಾಳ ಕತ್ತಲಲ್ಲಿ ಈ ಬಗ್ಗೆ ಆತಂಕ ಕಾಳಜಿ ಹೊಂದಿರುವ ಬಹುಸಂಖ್ಯಾತರಿಗೆ ಪೇಜಾವರರ ಇಫ್ತರ್ ಕೂಟ ಆಶಾಕಿರಣದಂತೆ ಕಂಡಿದ್ದರೆ ಆಶ್ಚರ್ಯವೇನಿಲ್ಲ. ಪೇಜಾವರರ ಇಫ್ತರ್ ಕೂಟವನ್ನು ಕೋಮುವಾದಿ ಧೋರಣೆಯಿಂದ ವಿರೋಧಿಸುವ ಭಜರಂಗ ದಳ, ಶ್ರೀರಾಮಸೇನೆಯ ಪ್ರತಿಭಟನೆಗಳಿಗೆ, ವ್ಯಾಪಕ ಬೆಂಬಲ ಸಿಗದಿರುವುದು, ಮಾತ್ರವಲ್ಲ ವಿರೋಧ ಖಂಡನೆ ವ್ಯಕ್ತವಾಗಿರುವುದು ಸಮಾಧಾನದ ವಿಷಯ. ಸಕಾರಾತ್ಮಕ ಬೆಳವಣಿಗೆ. ಅದರಲ್ಲೂ ಸಾಮಾನ್ಯವಾಗಿ ತಟಸ್ಥರಾಗಿರುವ ಮೌನವಾಗಿರುವ ಹಲವು ಪ್ರಜ್ಞಾವಂತರು ಇಫ್ತರ್ ಕೂಟ ಬೆಂಬಲಿಸಿ ಭಜರಂಗ ದಳ, ಶ್ರೀರಾಮಸೇನೆಯ ವಿರೋಧ ಖಂಡಿಸಿರುವುದು ಗಮನಾರ್ಹವೇ. ಆದರೆ ಇವರುಗಳು ಗ್ರಹಿಸಿದಂತೆ ಪೇಜಾವರ ಇಫ್ತರ್ ಪಾರ್ಟಿ "ಹನುಮನ ನೆಗೆತ"ವೇ? ನೆಗೆತ ಬಿಡಿ, ನೈಜವಾದದ್ದೇ? ಅದು ಬಿಡಿ ಭಜರಂಗ ದಳ, ಶ್ರೀರಾಮಸೇನೆಯ "ವಿರೋಧ" ನೈಜವೇ ಎಂದೂ ಪರಿಶೀಲಿಸಬೇಕಾಗಿದೆ.

ಇದಕ್ಕಾಗಿ ಪೇಜಾವರ ಸ್ವಾಮಿಜಿ ಅವರ ಹಿಂದಿನ ಮತ್ತು ಇತ್ತೀಚಿನ ನಡೆಗಳನ್ನು ಗಮನಿಸೋಣ. ಈಗಲೂ ಅವರು ಸಂಘ ಪರಿವಾರದ ಭಾಗವಾಗಿರುವ ವಿಶ್ವ ಹಿಂದೂ ಪರಿಷತ್ತಿನ ಪದಾಧಿಕಾರಿಗಳು. ಅವರು ಬಾಬ್ರಿ ಮಸೀದಿ ಉರುಳಿಸುವ ಚಳುವಳಿಯ ಪ್ರಮುಖ ನೇತಾರರಾಗಿದ್ದರು ಎಂಬುದು ಎಲ್ಲರಿಗೂ ಗೊತ್ತು. ಬಾಬ್ರಿ ಮಸೀದಿ ಧ್ವಂಸ ಮತ್ತು ನಂತರದ ಸತತ ಸಂಘಟಿತ ಮುಸ್ಲಿಂ–ದ್ವೇಷದ ಅಭಿಯಾನದ ಫಲವೇ ಇಂದಿನ ಕರಾಳ ಸ್ಥಿ ತಿ. ಈಗ "ಬಾಬ್ರಿ ಮಸೀದಿ ಧ್ವಂಸಗೊಳಿಸದಂತೆ ತಡೆಯಲು ಶಕ್ತಿಮೀರಿ ಪ್ರಯತ್ನಿಸಿದೆ" ಎಂಬ ಅವರ ಹೇಳಿಕೆಗೆ ಪುಷ್ಟಿ ಕೊಡುವ ಯಾವುದೇ ಪುರಾವೆ ಇಲ್ಲ. ಅವರ ಹೇಳಿಕೆ ನಿಜವಲ್ಲ ಎಂದು ಸಿದ್ಧ ಪಡಿಸಲು ಬೇಕಾದಷ್ಟು ಪುರಾವೆಗಳಿವೆ. ಮಾತ್ರವಲ್ಲ, ಅವರ ಹೇಳಿಕೆ ಒಪ್ಪಿಕೊಳ್ಳುವ ಭೋಳೆತನ ತೋರಿಸಿದರೂ ಈಗಲೂ "ರಾಮಮಂದಿರ ಅಲ್ಲೇ ಕಟ್ಟುವುದು ನನ್ನ ಕನಸು" ಎಂಬ ಅವರ ಹೇಳಿಕೆಯೇ ಬಾಬ್ರಿ ಮಸೀದಿ ಧ್ವಂಸಕ್ಕೆ ಸಮರ್ಥನೆ ಅಲ್ಲವೇ?

"ಸೌಹಾರ್ದತೆ ಮತ್ತು ಸಹಬಾಳ್ವೆ"ಗಳ ಬಗ್ಗೆ ಇತ್ತೀಚೆಗೆ ಸ್ವಾಮಿಜಿಗೆ "ಜ್ಞಾನೋದಯ" ಆಗಿದೆ ಎಂದು ಕೊಂಡರೂ, ಈಗಲೂ ಅವರು ಭಾಗವಾಗಿರುವ ಸಂಘ ಪರಿವಾರದ ನೇತೃತ್ವದಲ್ಲೇ ನಡೆಯುತ್ತಿರುವ ಕಲ್ಲಡ್ಕ ಕೋಮು ದಳ್ಳುರಿ ಬಗ್ಗೆ ಏಕೆ ಮೌನ ವಹಿಸಿದ್ದಾರೆ? ಇಫ್ತರ್ ಕೂಟದ ದಿನವೇ ದೆಹಲಿಯ ಬಳಿ ಸಂಘಟಿತ ಹಿಂಸಾಚಾರಕ್ಕೆ ಬಲಿಯಾದ ಜುನೈದ್ ಬಗ್ಗೆ ಏಕೆ ಈ ಗಡಚಿಕ್ಕುವ ಮೌನ? ಇಫ್ತರ್ ಕೂಟದ ಮುಂದುವರಿಕೆಯಾಗಿ ಕನಿಷ್ಟ ಈ ಹಿಂಸಾಚಾರ ನಿಲ್ಲಬೇಕು ಎಂದು ಕರೆ ಯಾಕೆ ಕೊಡುತ್ತಿಲ್ಲ? ಇದನ್ನು ಎಚ್ಚರಿಕೆಯ ಅನುಮಾನದಿಂದ ನೋಡುತ್ತಿರುವವರು ಮಾತ್ರ ಹೇಳುತ್ತಿಲ್ಲ.

"ನಮಗೆ ಮುಸ್ಲಿಮರು ವಿರೋಧಿಗಳಲ್ಲ. ಈ ಕೆಲಸವನ್ನು ಶ್ರೀಗಳು ಐವತ್ತು ವರ್ಷಗಳ ಹಿಂದೆಯೇ ಮಾಡಿದ್ದರೆ ಈಗ ಹಿಂದು ಮುಸ್ಲಿಮರ ನಡುವೆ ಇರುವ ದ್ವೇಷಕಾರುವ ಸ್ಥಿತಿ ಇರುತ್ತಿರಲಿಲ್ಲ. ನಮ್ಮ ಸುತ್ತ ಮುತ್ತ ಮುಸ್ಲಿಮರಿದ್ದಾರೆ. ನಾವೂ ಕೂಡ ಮುಸ್ಲಿಮರ ಜತೆ ಉತ್ತಮ ಭಾಂದವ್ಯ ಬಯಸುತ್ತೇವೆ. ನಮಗೂ ಇಫ್ತಾರ್ ಇಫ್ತಾರ್ ಕೂಟ ಮಾಡುವ ಆಸೆ ಇದೆ. ಆದರೆ, ಈಗ ಅಂತಹ ವಾತಾವರಣ ಇಲ್ಲ. ಪರಸ್ಪರ ಅಪನಂಬಿಕೆ, ದ್ವೇಷ ಇದೆ. ಇದಕ್ಕೆಲ್ಲ ಕಾರಣ ನಮಗೆ ಮಾರ್ಗದರ್ಶನ ಮಾಡಿದ ಶ್ರೀಗಳು. ಈಗ ಶ್ರೀಗಳು ಇಫ್ತಾರ್ ಕೂಟ ಮಾಡಿ ನಮ್ಮನ್ನು ದಾರಿ ತಪ್ಪಿಸಿದ್ದಾರೆ. ನಾವು ಅವರನ್ನು ನಂಬಿ ಮೋಸಹೋಗಿದ್ದೇವೆ." ಎನ್ನುತ್ತಾರೆ ಶ್ರೀ ರಾಮ ಸೇನೆಯ ಪ್ರಧಾನ ಕಾರ್ಯದರ್ಶಿ. ಮತ್ತು ಮಂಗಳೂರಿನ ಬಜರಂಗ ದಳದ ಸ್ಥಾಪಕ ಮುಖಂಡರಾದ ಪ್ರವೀಣ್ ವಾಲ್ಕೆ. ಇದರರ್ಥ ಪೇಜಾವರ ಸ್ವಾಮಿಜಿ ಕರೆ ಕೊಟ್ಟರೆ ಕರಾವಳಿಯಲ್ಲಿ ಸೌಹಾರ್ದ ನೆಲೆಸಬಹುದು ಎಂದಲ್ಲವೇ? ಇದಕ್ಕೆ ಅವರು ಯಾಕೆ ಮನಸ್ಸು ಮಾಡುತ್ತಿಲ್ಲ? ಇದಕ್ಕೆ ಉತ್ತರ ಹುಡುಕಲು ಇನ್ನೊಂದು ಬೆಳವಣಿಗೆಯನ್ನು ಗಮನಿಸಬೇಕು.

ಉತ್ತರ ಪ್ರದೇಶದಲ್ಲಿ ಆದಿತ್ಯನಾಥ ಸರಕಾರ ಬಂದ ನಂತರ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ತಯಾರಿ ಭರದಿಂದ ಸಾಗಿದೆ. ಮಂದಿರದ ವಿನ್ಯಾಸ ತಯಾರಾಗಿದೆ. ಕಟ್ಟಡ ಸಾಮಗ್ರಿಗಳು ಶೇಖರಣೆ–ಯಾಗುತ್ತಿದೆ ಎಂಬ ವರದಿಗಳು ಬಂದಿವೆ. ಬಿಜೆಪಿ ಸಂಸದ ಮತ್ತು ಇನೊಬ್ಬ ಕಠ್ಠರ್ 'ಯತಿವರ್ಯ' ಸಾಕ್ಷಿ ಮಹಾರಾಜ್ ಸದ್ಯದಲ್ಲೇ ಉಡುಪಿಯಲ್ಲಿ ಸಭೆ ಸೇರಲಿರುವ ಧರ್ಮ ಸಂಸತ್ತಿನಲ್ಲಿ ರಾಮಮಂದಿರ ಕಟ್ಟುವ ಬಗ್ಗೆ ನಿರ್ಣಯ ಕೈಗೊಳ್ಳುವುದು. ನವೆಂಬರ್ ನೊಳಗೆ ರಾಮಮಂದಿರ ಕಟ್ಟುವ ಕೆಲಸ ಆರಂಭವಾಗುವುದು ಎಂದು ಹೇಳಿದ್ದಾರೆ. ಪೇಜಾವರ ಸ್ವಾಮಿಜಿ ಸಂಘ ಪರಿವಾರ ಪ್ರಣೀತ ಧರ್ಮ ಸಂಸತ್ತಿನ ಸದಸ್ಯರು ಕೂಡಾ. ಇದರ ಬಗ್ಗೆ ಪೇಜಾವರ ಸ್ವಾಮಿಜಿಯನ್ನು ಕೇಳಿದಾಗ ಅದು ಸಾಕ್ಷಿ ಮಹಾರಾಜ್ "ವೈಯಕ್ತಿಕ ಅಭಿಪ್ರಾಯ" ಎಂದಿದ್ದಾರೆ. ಅದನ್ನು ನಿರಾಕರಿಸಿಲ್ಲ. "ವೈಯಕ್ತಿಕ ಅಭಿಪ್ರಾಯ" ಧರ್ಮ ಸಂಸತ್ತಿನ ನಿರ್ಣಯವಾಗುವುದು ಬಹಳ ಸುಲಭವೆಂದು ಎಲ್ಲರಿಗೂ ಗೊತ್ತು.

ಸುಪ್ರೀಂ ಕೋರ್ಟು ಅಯೋಧ್ಯೆಳ ವಿವಾದವನ್ನು ಮೀಡಿಯೇಶನ್ ಮೂಲಕ ಬಗೆಹರಿಸಲು ಸಲಹೆ ನೀಡಿದೆ. ಅದಕ್ಕೆ ಮುಸ್ಲಿಮರನ್ನು ಒಪ್ಪಿಸುವ, "ಸೌಹಾರ್ದಯುತ ಸಹಬಾಳ್ವೆ"ಗಾಗಿ ಅವರೇ "ಸ್ವ–ಇಚ್ಛೆ"ಯಿಂದ ಬಾಬರಿ ಮಸೀದಿ ಪ್ರದೇಶವನ್ನು ಬಿಟ್ಟು ಕೊಡಲು "ಒತ್ತಡ" ಹಾಕಲು ತಯಾರಿ ನಡೆದಿದೆ. ಅಗತ್ಯ ಬಿದ್ದರೆ ಪ್ರದೇಶವನ್ನು "ವಶಪಡಿಸಿಕೊಳ್ಳಲೂ" ಯೋಜನೆ ಹಾಕಲಾಗಿದೆ. ಇದಕ್ಕೆ ಮುಸ್ಲಿಮರನ್ನು ತಯಾರು ಗೊಳಿಸುವ ಜವಾಬ್ದಾರಿಯನ್ನು ಸಂಘ ಪರಿವಾರ ಪೇಜಾವರ ಸ್ವಾಮಿಜಿಗೆ ಕೊಟ್ಟಿದೆ. ಈ ನಿಟ್ಟಿನಲ್ಲಿ ಪ್ರಯತ್ನಗಳ ಆರಂಭವೇ ಉಡುಪಿಯ ಇಫ್ತರ್ ಕೂಟ. ಉಡುಪಿ ಕೃಷ್ಣ ಮಠ ಕಟ್ಟಲು ಮುಸ್ಲಿಮರೇ ಭೂಮಿ ನೀಡಿದ್ದು (ಹಿಂದೆ ಯಾವಾಗಲೂ ಸಾರ್ವಜನಿಕವಾಗಿ ಹೇಳದಿದ್ದವರು) ಎಂದು ಅವರು ಪದೇ ಪದೇ ಹೇಳುತ್ತಿರುವುದು ಇದೇ ಹಿನ್ನೆಲೆಯಲ್ಲಿ. ಎಂಬುದು ಒಂದು ಥಿಯರಿ.

'ಉಡುಪಿ ಚಲೋ' ನಡೆದಾಗ ಮಠದ ರಕ್ಷಣೆಗೆ ನಿಂತರೆಂದು ಮುಸ್ಲಿಮರ ಒಂದು ಗುಂಪಿಗೆ ಮಠದಲ್ಲಿ ಇಫ್ತಾರ್ ಉಡುಗೊರೆ ನೀಡಲಾಗಿದೆ. ಆದ್ದರಿಂದಲೇ "ಇಫ್ತಾರ್ ನಿಂದ, ಗೋಭಕ್ಷಕರಿಂದ ಮಠ ಅಪವಿತ್ರಗೊಂಡಿತು" ಎಂಬ ವಾದವನ್ನು ತಳ್ಳಿಹಾಕಲಾಗಿದೆ. ಶುದ್ದೀಕರಣದ ಬೇಡಿಕೆಯನ್ನು ತಿರಸ್ಕರಿಸಲಾಗಿದೆ. ಆದರೆ ದಲಿತರ ಉಡುಪಿ ಚಲೋ ನಡೆದಾಗ ಪೇಜಾವರ ಶ್ರೀಗಳ ಶಿಷ್ಯರು, ಬ್ರಿಗೇಡ್'ಗಳು ಉಡುಪಿ ಅಪವಿತ್ರ ಆಯಿತೆಂದು ಹುಯಿಲೆಬ್ಬಿಸಿ ಶುದ್ದೀಕರಣ ನಡೆಸಿದ್ದರು. 'ಉಡುಪಿ ಚಲೋ' ಮಠದ ವಿರುದ್ದ ನಡೆದ ಕಾರ್ಯಕ್ರಮವಾಗಿರಲಿಲ್ಲ. ಮೆರವಣಿಗೆ ನಡೆದದ್ದು ಮಠದ ದಾರಿಯಲ್ಲೂ ಅಲ್ಲ ಎಂದು ಈ ಥಿಯರಿಯ ಪ್ರತಿಪಾದಕರು ಹೇಳುತ್ತಾರೆ.

ಪೇಜಾವರ ಸ್ವಾಮಿಜಿಯ ಹಿಂದಿನ ಮತ್ತು ಇತ್ತೀಚಿನ ನಡೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಹಿಂದೆ ಹೇಳಿದ "ಹನುಮನ ನೆಗೆತ" ನಿರೂಪಣೆಗಿಂತ, ಈ ಥಿಯರಿ ಸತ್ಯಕ್ಕೆ ಹೆಚ್ಚು ಹತ್ತಿರವಿರುವಂತೆ ಕಾಣುತ್ತದೆ. ಮಾತ್ರವಲ್ಲ, ಒಬ್ಬ ಹಳೆಯ 'ಕಟ್ಟರ್ ನಾಯಕ' ರಾತ್ರೋರಾತ್ರಿ 'ಮೆದು ನಾಯಕ'ನಾಗುವುದು, ಹೊಸ 'ಕಟ್ಟರ್ ನಾಯಕ' ಉದಯವಾಗುವುದು, ಸಂಘ ಪರಿವಾರದ ರಾಜಕೀಯ ನಡೆಯ ಮಾಸ್ಟರ್ ಪ್ಲಾನುಗಳ ತಂತ್ರಗಳಲ್ಲಿ ಒಂದು. ಈ ತಂತ್ರದ ಭಾಗವಾಗಿಯೇ ವಾಜಪೇಯಿ 'ರಾಜಧರ್ಮ' ಪಾಲಿಸುವ 'ಮೆದು ನಾಯಕ'ನಾದ್ದು, ಅಡ್ವಾಣಿ "ರಥಯಾತ್ರೆ"ಯ 'ಕಟ್ಟರ್ ನಾಯಕ'ನಾದ್ದು. ಆ ಮೇಲೆ ಅಡ್ವಾಣಿ ಜಿನ್ನಾ ಮೆಚ್ಚುವ 'ಮೆದು ನಾಯಕ'ನಾದ್ದು, ಮೋದಿ "ಹಮ್ ಪಾಂಚ್, ಹಮಾರಾ ಪಚ್ಚೀಸ್' ಎಂದು ಬೆಂಕಿ ಉಗುಳುವ 'ಕಟ್ಟರ್ ನಾಯಕ'ನಾದ್ದು. ಈಗಾಗಲೇ ಮುಂದಿನ ಕಟ್ಟರ್ ನಾಯಕ' ಪಾತ್ರಕ್ಕೆ ಆದಿತ್ಯನಾಥ ಯೋಗಿ ಬಣ್ಣ ಹಚ್ಚುತ್ತಿದ್ದಾರೆ. ಇದೇ ರೀತಿಯ ಕಟ್ಟರ್–ಮೆದು ನಾಯಕ ಯತಿವರ್ಯರಲ್ಲೂ ತರುವ ಸಂಘ ಪರಿವಾರದ ಮಾಸ್ಟರ್ ಪ್ಲಾನಿನಲ್ಲಿ ಪೇಜಾವರ ಸ್ವಾಮಿಜಿ ಹೊಸ 'ಮೆದು ನಾಯಕ'. ಹೊಸ ಕಠ್ಠರ್ ನಾಯಕ ಸಾಕ್ಷಿ ಮಹಾರಾಜ್.

ಒಂದು ಕಡೆ ದಲಿತರ–ಮುಸ್ಲಿಮರ ಮೇಲೆ ಹಿಂದೆಂದೂ ಕಂಡು ಕೇಳರಿಯದ ದಮನ, ಎಲ್ಲಾ ಜನರ ಮೇಲೆ ನವ–ಉದಾರವಾದಿ ನೀತಿಗಳ ಉಗ್ರ ಪ್ರಹಾರ. ಇದರ ಫಲವಾಗಿ ಜನರ ಆಕ್ರೋಶ ಬೇರೆಡೆಗೆ ತಿರುಗಿಸಲು ಇನ್ನೊಂದು ಕಡೆ ನೋಟು ನಿಷೇಧ, ಜಿ.ಎಸ್.ಟಿ. ಮುಂತಾದ ಬೊಗಳೆ ಕಾರ್ಯಕ್ರಮಗಳು. ಮುಲಾಮು ಹಚ್ಚಲು ದಲಿತ ರಾಷ್ಟ್ರಪತಿ, ಮುಸ್ಲಿಮರ ಜತೆ ಸೌಹಾರ್ದ ಸಹಬಾಳ್ವೆ, ಆ ಮೂಲಕ "ರಾಮಮಂದಿರ ಅಲ್ಲೇ ಕಟ್ಟುವೆವು"? ಎಂಬ ಒಂದೇ ಕಲ್ಲಿನಿಂದ ಹಲವು ಹಕ್ಕಿಗಳನ್ನು ಹೊಡೆಯುವ ಹುನ್ನಾರ – ಈ ಸ್ಥೂಲ ಚಿತ್ರದ ಹಿಂದೆ ಇಟ್ಟು ನೋಡಿದರೆ ಪೇಜಾವರ ಇಫ್ತರ್ ಕೂಟದ ನಿಜಸ್ವರೂಪ ತಿಳಿಯುತ್ತದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಮತ್ತು ಆ ಮೇಲೆ ಬರುವ 2019ರ ಲೋಕಸಭಾ ಚುನಾವಣೆಗೂ ಇದು ತಯಾರಿ.

ಪೇಜಾವರ ಇಫ್ತರ್ ಕೂಟಕ್ಕೆ " "ಅಸಂದಿಗ್ಧ ಸ್ವಾಗತ" ನೀಡಿದ, ಅದಕ್ಕೆ ಎಚ್ಚರಿಕೆಯ ಅನುಮಾನ" ವ್ಯಕ್ತ ಪಡಿಸಿದವರನ್ನು ಟೀಕಿಸಿದ, ಹಲವರು ಪ್ರಾಮಾಣಿಕವಾಗಿ ಗ್ರಹಿಸಿದಂತೆ ಅದು "ಹನುಮನ ನೆಗೆತ" ಖಂಡಿತ ಅಲ್ಲ. ಸಂಘ ಪರಿವಾರದ ಮಾಸ್ಟರ್ ಪ್ಲಾನಿನಂತೆ ಪೇಜಾವರ ಸ್ವಾಮಿಜಿ ಹಳೆಯ 'ಕಟ್ಟರ್ ನಾಯಕ' ರಾತ್ರೋರಾತ್ರಿ 'ಮೆದು ನಾಯಕ'ನಾಗುವ ಪ್ರಕ್ರಿಯೆಯ ಆರಂಭ. ಇದನ್ನು ಪ್ರಜ್ಞಾವಂತರಿಗೆ, ಜನತೆಗೆ ಅರ್ಥ ಮಾಡಿಸುವ ರಾಜಕೀಯ ಜವಾಬ್ದಾರಿ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಮೇಲಿದೆ.

■

ಮಂಗಳೂರು ಜಾಥಾ

ಜಿಎಸ್‌ಟಿ ಹೆಸರಿನಲ್ಲಿ ಮತ್ತೆ ಜನತೆಯ ಸುಲಿಗೆ : ಬಜಾಲ್

ಬಣ್ಣ ಬಣ್ಣದ ಘೋಷಣೆಗಳನ್ನು ನೀಡಿ ದೇಶದ ಜನರನ್ನು ಮರಳು ಮಾಡಿ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರವು ಪ್ರತೀ ಕ್ಷಣಕ್ಕೂ ಜನವಿರೋಧಿ ನೀತಿಗಳನ್ನು ಜಾರಿಗೊಳಿಸುವ ಮೂಲಕ ಜನರ ಬದುಕಿಗೆ ಮಾರಕ ಹೊಡೆತ ನೀಡಿದೆ. ಅಧಿಕಾರ ಬಂದ 100 ದಿನದೊಳಗೆ ವಿದೇಶದಲ್ಲಿರುವ ಕಪ್ಪು ಹಣವನ್ನು ತಂದು ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ರೂ. ಹಾಕುವುದಾಗಿ ಭರವಸೆ ನೀಡಿದ ನರೇಂದ್ರ ಮೋದಿ, ಒಂದು ಸಾವಿರ ದಿನಗಳು ಕಳೆದರೂ ಆ ಬಗ್ಗೆ ಚಕಾರವೆತ್ತುತ್ತಿಲ್ಲ. ಜನಧನ್ ಯೋಜನೆಯ ಮೂಲಕ ಜನರನ್ನು ಹಾಡುಹಗಲಲ್ಲೇ ಮೋಸಗೊಳಿಸಲಾಗಿದೆ. ಸ್ವಚ್ಛ ಭಾರತ್ ಎಂಬ ಭಾವನಾತ್ಮಕ ವಿಚಾರವನ್ನು ಜನರಲ್ಲಿ ಮೂಡಿಸಿ ಎಲ್ಲರ ಕೈಯಲ್ಲೂ ಪೊರಕೆಯನ್ನು ಹಿಡಿಸಿ ಪ್ರತಿಯೊಬ್ಬರ ತಲೆಗೆ ಸ್ವಚ್ಛ ಭಾರತ್ ತೆರಿಗೆ ವಿಧಿಸಿದ್ದು, ಬಳಿಕ ರೈತರ ಹೆಸರಲ್ಲಿ ಕೃಷಿ ಕಲ್ಯಾಣ ತೆರಿಗೆಯನ್ನು ಕೂಡ ವಿಧಿಸಲಾಯಿತು. ಈಗ ಜಿಎಸ್‌ಟಿ ಹೆಸರಿನಲ್ಲಿ ಮತ್ತೆ ಜನತೆಯನ್ನು ಸುಲಿಗೆ ಮಾಡಲು ನರೇಂದ್ರ ಮೋದಿ ಸರಕಾರ ತುದಿಗಾಲಲ್ಲಿ ನಿಂತಿದೆ. ಹೀಗೆ ನಿರಂತರವಾಗಿ ತೆರಿಗೆ ವಿಧಿಸಿ ಜನರನ್ನು ಸಂಕಷ್ಟಕ್ಕೆ ದೂಡಿದ ಕೇಂದ್ರ ಸರಕಾರವು ನಿಜಕ್ಕೂ ತೆರಿಗೆ ಸರಕಾರವಾಗಿದೆ ಎಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್‌ರವರು ವ್ಯಂಗ್ಯವಾಡಿದರು.



ಅವರು ಜುಲೈ 5 ರಂದು ಸಿಪಿಐ(ಎಂ) ಮಂಗಳೂರು ನಗರ ಕೇಂದ್ರ ವಿಭಾಗ ಸಮಿತಿ ನೇತೃತ್ವದಲ್ಲಿ ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಪ್ರಚಾರಾಂದೋಲನದ ಭಾಗವಾಗಿ ಮಂಗಳೂರು ನಗರದಾದ್ಯಂತ ಜರುಗಿದ ವಾಹನ ಪ್ರಚಾರ ಜಾಥಾವನ್ನು ನಗರದ ಸೆಂಟ್ರಲ್ ಮಾರ್ಕೆಟ್ ಬಳಿಯಲ್ಲಿ ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, ಬೆಲೆ ಏರಿಕೆಯನ್ನು ತಡೆಗಟ್ಟುವುದಾಗಿ ಆಶ್ವಾಸನೆಯನ್ನು ನೀಡಿದ ಕೇಂದ್ರ ಸರ್ಕಾರ ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಿಪರೀತವಾಗಿ ಬೆಲೆ ಏರಿಕೆ ಮಾಡಿದೆ. ಜಿಎಸ್‌ಟಿಯಿಂದಾಗಿ ಮತ್ತೆ ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿದೆ. ಗೋಹತ್ಯೆ ನಿಷೇಧದ ಹೆಸರಿನಲ್ಲಿ ಮುಸ್ಲಿಮ್ ಅಲ್ಪಸಂಖ್ಯಾತರ ಮೇಲೆ ಅವ್ಯಾಹತವಾಗಿ ದಾಳಿಗಳು ನಡೆಯುತ್ತಿದೆ. ದಲಿತರ ಮೇಲೆ ಹಲ್ಲೆ, ದೌರ್ಜನ್ಯಗಳು ವಿಪರೀತವಾಗಿ ಹೆಚ್ಚುತ್ತಿದೆ ಎಂದು ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯರಾದ ಯೋಗೀಶ್ ಜಪ್ಪಿನಮೊಗರುರವರು, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಹೇಳಿದ ಕೇಂದ್ರ ಸರಕಾರವು ಇರುವ ಉದ್ಯೋಗಗಳನ್ನೇ ಕಿತ್ತುಕೊಳ್ಳುತ್ತಿದೆ. ಉತ್ತರ ಪ್ರದೇಶದಲ್ಲಿ ಕಸಾಯಿಖಾನೆಗಳನ್ನು ಮುಚ್ಚುವ ಹೆಸರಿನಲ್ಲಿ 25 ಲಕ್ಷ ಉದ್ಯೋಗಗಳನ್ನು ನಾಶ ಪಡಿಸಲಾಗಿದೆ ಎಂದು ಹೇಳಿದರು.

ಬಳಿಕ ಜಾಥಾವು ಕೃಷ್ಣಭವನ, ಬಲ್ಮಠ, ಕಂಕನಾಡಿ, ಜೆಪ್ಪು, ಬೋಳಾರ, ಕುದ್ರೋಳಿ, ಬಂದರು, ಕಾರ್‌ಸ್ಟ್ರೀಟ್ ಸೇರಿದಂತೆ 15 ಕಡೆಗಳಲ್ಲಿ ಕಾರ್ಯಕ್ರಮವನ್ನು ನೀಡಿ ಕೊನೆಗೆ ನಗರದ ಸರ್ವಿಸ್ ಬಸ್‌ಸ್ಟ್ಯಾಂಡ್ ಬಳಿಯಲ್ಲಿ ಸಮಾರೋಪಗೊಂಡಿತು. ಸಮಾರೋಪ ಭಾಷಣವನ್ನು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಮಾತನಾಡುತ್ತಾ, ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬೇಕಾದ ಕೇಂದ್ರ ಸರಕಾರವು ರೈತ ಸಮುದಾಯವನ್ನು ಕೀಳಾಗಿ ಕಾಣುತ್ತಿದೆ. ಇದರಿಂದಾಗಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ನಂತರ ದೇಶದಲ್ಲಿ ರೈತರ ಆತ್ಮಹತ್ಯೆಗಳು ಶೇ. 30ರಷ್ಟು ಹೆಚ್ಚಿದೆ ಎಂದು ಹೇಳಿದರು. ಜಾಥಾದ ನೇತೃತ್ವವನ್ನು ಸಿಪಿಐ(ಎಂ) ಮಂಗಳೂರು ಮುಖಂಡರಾದ ಭಾರತಿ ಬೋಳಾರ್, ನಾಗೇಶ್ ಕೋಟ್ಯಾನ್, ಸಂತೋಷ್ ಆರ್.ಎಸ್., ಪವನ್, ಗಣೇಶ್ ಮುಂತಾದವರು ವಹಿಸಿದ್ದರು.

ಯೋಗೀಶ್ ಜಪ್ಪಿನಮೊಗರು

ಅಲೋಶಿಯಸ್ ಕಾಲೇಜ್ ರಸ್ತೆಯ ಹೆಸರು ಬದಲಾವಣೆಯಿಂದ ಸುಂದರರಾಮ್ ಶೆಟ್ಟಿಯವರಿಗೆ ಅವಮಾನ : ಬಜಾಲ್



ನಗರದ ಹೃದಯಭಾಗದಲ್ಲಿರುವ 137 ವರ್ಷಗಳ ಇತಿಹಾಸವಿರುವ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ದೇಶವಿದೇಶಗಳಲ್ಲಿ ಗೌರವಾನ್ವಿತ ಬದುಕು ಸಾಗಿಸುತ್ತಿದ್ದಾರೆ. ಮಾತ್ರವಲ್ಲದೆ ಕಲಾವಿದರು, ಕ್ರೀಡಾಪಟುಗಳು, ವಿಜ್ಞಾನಿಗಳು, ನ್ಯಾಯಧೀಶರು, ವೈದ್ಯರು, ವಕೀಲರು, ಪೊಲೀಸ್ ಅಧಿಕಾರಿಗಳು, ಇಂಜಿನಿಯರ್‌ಗಳು ಸೇರಿದಂತೆ ಗಣ್ಯಾತಿಗಣ್ಯರನ್ನು ಸೃಷ್ಟಿಸಿ ಸಮಾಜಕ್ಕೆ ಅರ್ಪಿಸಿದೆ. ಅಲೋಶಿಯಸ್ ಕಾಲೇಜ್ ಚಾಪಲ್ ಜಗತ್ಪ್ರಸಿದ್ಧವಾಗಿದ್ದು, ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿಸುವಂತಿವೆ. ಇಂತಹ ಕಾಲೇಜಿನ ಮುಂಭಾಗದ ರಸ್ತೆಗೆ ಸಂತ ಅಲೋಶಿಯಸ್ ಕಾಲೇಜು ಎಂದು ಹೆಸರನ್ನಿಡುವುದು ಪ್ರತಿಷ್ಠೆಯ ಪ್ರಶ್ನೆಯಲ್ಲ, ಗೌರವದ ವಿಷಯವಾಗಿದೆ. ಅದನ್ನು ಗಣನೆಗೆ ತೆಗೆದುಕೊಳ್ಳದೇ ಏಕಾಏಕಿಯಾಗಿ ಆರ್ಥಿಕ ಕ್ಷೇತ್ರದಲ್ಲಿ ಮೇರುಪರ್ವತದಂತೆ ಕಂಗೊಳಿಸುವ ಮುಲ್ಕಿ ಸುಂದರರಾಮ್ ಶೆಟ್ಟಿಯವರ ಹೆಸರನ್ನು ಇಟ್ಟು ಶಿಕ್ಷಣ ಸಂಸ್ಥೆಗೆ ಅವಮಾನ ಮಾಡಿರುವುದಲ್ಲದೆ ವಿನಾಃ ಕಾರಣ ವಿವಾದವನ್ನು ಸೃಷ್ಟಿಸಿ ಸುಂದರರಾಮ್ ಶೆಟ್ಟಿಯವರಿಗೂ ಕೂಡಾ ಅವಮಾನ ಮಾಡಲಾಗಿದೆ ಎಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್‌ರವರು ಮಂಗಳೂರು ಮಹಾನಗರ ಪಾಲಿಕೆಯನ್ನು ತರಾಟೆಗೆ ತೆಗೆದುಕೊಂಡರು.

ಅವರು ಇಂದು (ತಾ. 01–07–2017) ನಗರದ ಬಾವುಟಗುಡ್ಡೆಯಲ್ಲಿ 40ನೇ ಕೋರ್ಟ್ ವಾರ್ಡ್ ಅಭಿವೃದ್ಧಿ ಸಮಿತಿಯ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಸಂತ ಅಲೋಶಿಯಸ್ ಕಾಲೇಜ್ ರಸ್ತೆಯ ಹೆಸರನ್ನು ಬದಲಾವಣೆ ಮಾಡಿದ ಮನಪಾದ ವಿರುದ್ಧ ಜರುಗಿದ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, ಕಳೆದ ಹಲವಾರು ವರ್ಷಗಳಿಂದ ಮನೆಮಾತಾಗಿರುವ ಸಂತ ಅಲೋಶಿಯಸ್ ಕಾಲೇಜು ರಸ್ತೆಯ ಹೆಸರನ್ನು ಏಕಾಏಕೀ ಬದಲಾವಣೆ ಮಾಡುವುದರಲ್ಲಿ ನಿಜಕ್ಕೂ ಭಾರೀ ಷಡ್ಯಂತ್ರವೊಂದು ಅಡಗಿದೆ. ಅಲ್ಪಸಂಖ್ಯಾತರ ರಕ್ಷಕರೆಂದು ಪೋಸ್ ಕೊಡುವ, ಅವರ ಮತಗಳಿಂದಲೇ ಗೆದ್ದಿರುವ ಕಾರ್ಪೊರೇಟರ್ ವಿನಯರಾಜ್, ಶಾಸಕರಾದ ಜೆ.ಆರ್. ಲೋಬೊರವರು ದಿವ್ಯಮೌನ ವಹಿಸಿರುವುದು ಕ್ರೈಸ್ತ ಸಮುದಾಯಕ್ಕೆ ಹಾಗೂ ನಾಗರಿಕ ಸಮಾಜಕ್ಕೆ ಎಸಗಿದ ದ್ರೋಹವಾಗಿದೆ. ಇದಕ್ಕೆ ಸಂಬಂಧಿಸಿ ಸರ್ಕಾರದ ಆದೇಶವನ್ನು ಕೂಡಲೇ ಹಿಂಪಡೆಯದಿದ್ದಲ್ಲಿ ರಸ್ತೆ ತಡೆ, ಮುತ್ತಿಗೆ, ಕಪ್ಪುಬಾವುಟ ಪ್ರದರ್ಶನದಂತಹ ತೀಕ್ಷ್ಣ ರೀತಿಯ ಹೋರಾಟವನ್ನು ನಡೆಸಬೇಕಾದೀತು ಎಂದು ಎಚ್ಚರಿಕೆ ನೀಡಿದರು.

ಸಾಮಾಜಿಕ ಹೋರಾಟಗಾರರಾದ ಎಂ.ಜಿ. ಹೆಗ್ಡೆ, ಆಲಿ ಹಸನ್‌ರವರು ಮಾತನಾಡಿ, ಕೋಮುಸೂಕ್ಷ್ಮ ಪ್ರದೇಶವಾದ ಮಂಗಳೂರಿನಲ್ಲಿ ರಸ್ತೆಯ ಹೆಸರು ಬದಲಾವಣೆಯ ವಿಚಾರದಲ್ಲಿ ಕ್ರಿಶ್ಚಿಯನ್ ಹಾಗೂ ಬಂಟ ಸಮುದಾಯದ ಮಧ್ಯೆ ದ್ವೇಷ ಬಿತ್ತಲು ಹವಣಿಸುತ್ತಿರುವ ಕಾಂಗ್ರೆಸ್ ಆಡಳಿತದ ವಿರುದ್ಧ ಕಿಡಿ ಕಾರಿದರು. ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾಧ್ಯಕ್ಷರಾದ ನಿತಿನ್ ಕುತ್ತಾರ್, ಸಂತ ಅಲೋಶಿಯಸ್ ಕಾಲೇಜ್ ವಿದ್ಯಾರ್ಥಿ ಸಂಘದ ಮುಖಂಡರಾದ ರೋಶನ್, ಅಮನ್ ಅಹ್ಮದ್, ಕೋರ್ಟ್ ವಾರ್ಡ್ ಅಭಿವೃದ್ಧಿ ಸಮಿತಿಯ ಮುಖಂಡರಾದ ಸಂತೋಷ್ ಕುಮಾರ್ ಆರ್.ಎಸ್., ಸಿಐಟಿಯು ಜಿಲ್ಲಾ ನಾಯಕರಾದ ಯೋಗೀಶ್ ಜಪ್ಪಿನಮೊಗರು, ಮುಂತಾದವರು ಮಾತನಾಡಿದರು.

ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ವಸಂತ ಆಚಾರಿ, ಬಿ.ಕೆ. ಇಮ್ತಿಯಾಜ್, ಸಂತೋಷ್ ಶಕ್ತಿನಗರ, ಪ್ರೇಮ್‌ನಾಥ್, ಮಹಮ್ಮದ್ ಅನ್ಸಾರ್, ರಿತೇಶ್ ಬಜಾಲ್, ಸ್ಟ್ಯಾನ್ಲಿ ನೊರೊನ್ಹಾ, ಯೋಗೇಂದ್ರ,ಯಾದವ ಮರೋಳಿ, ರಾಮಭಟ್, ಕ್ವೀನಿ ಪರ್ಸಿ ಆನಂದ್, ಭಾರತಿ ಬೋಳಾರ್, ಸುಂದರ ಸಾಲ್ಯಾನ್, ದಿನೇಶ್ ಶೆಟ್ಟಿ, ಜೈಸನ್ ಡಿ'ಸೋಜ, ಯೋಗೀಶ್ ದೇವಾಡಿಗ ಮುಂತಾದವರು ಭಾಗವಹಿಸಿದ್ದರು.

ಸಂತೋಷ್ ಕುಮಾರ್ ಆರ್.ಎಸ್.

ಮದ್ಯದಂಗಡಿ ಪರವಾನಿಗೆ ನೀಡದಂತೆ ಡಿ.ವೈ.ಎಫ್.ಐ ಆಗ್ರಹ

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಷ್ಟ್ರೀಯ ಹೆದ್ದಾರಿ ಸುತ್ತಮುತ್ತಲಿನ ಮದ್ಯದಂಗಡಿಗಳು ಬಾಗಿಲು ಮುಚ್ಚಿದ್ದು ಈಗ ಬಾರ್ ಮಾಲೀಕರು ಹೊಸ ಸ್ಥಳಗಳನ್ನು ಹುಡುಕಾಟದಲ್ಲಿ ತೊಡಗಿದ್ದಾರೆ. ಜನವಸತಿ ಪ್ರದೇಶಗಳಲ್ಲಿ ಮದ್ಯದಂಗಡಿಗಳು ತಲೆಯೆತ್ತುವ ಆತಂಕ ನಾಗರಿಕರಲ್ಲಿ ಮೂಡಿದೆ. ಮಂಗಳೂರಿನ ಇತರ ಪ್ರದೇಶಗಳಂತೆ ಕೂಳೂರು ಪರಿಸರದ ಮದ್ಯದಂಗಡಿಗಳು ಮುಚ್ಚಿದ್ದು ಅವುಗಳನ್ನು ಕೂಳೂರು ಕವೂರು ಪಂಜಿಮೊಗರು ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಾರಂಭಿಸುವ ಪ್ರಯತ್ನಗಳು ಪ್ರಾರಂಭವಾಗಿದೆ. ಪಂಜಿಮೊಗರು ಪ್ರದೇಶದಲ್ಲಿ ಜನವಸತಿ, ಶಿಕ್ಷಣ, ಧಾರ್ಮಿಕ ಕೇಂದ್ರಗಳಿದ್ದು ಯವುದೇ ಕಾರಣ–ಕ್ಕೂ ಮದ್ಯದಂಗಡಿ ತೆರೆಯಲು ಪರವಾನಿಗೆ ನೀಡಬಾರದೆಂದು ಒತ್ತಾಯಿಸಿ ಸಾರ್ವಜನಿಕರ ಪರವಾಗಿ ಡಿ.ವೈ.ಎಫ್.ಐ ಪಂಜಿಮೊಗರು ಘಟಕ ನಿಯೋಗ ಮನವಿಯನ್ನು ಮೇಯರ್, ಕಮೀಷನರ್, ಆರೋಗ್ಯಾಧಿಕಾರಿ ಹಾಗೂ ಕಾವೂರು ಠಾಣೆಗೆ ನೀಡಲಾಯಿತು.

ಇಲ್ಲಿ ಈಗಾಗಲೇ ಇರುವ ಒಂದು ಬಾರಿನಿಂದ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಗುತ್ತಿದ್ದು ಇನ್ನೂ ಮದ್ಯದಂಗಡಿಗಳು ಇತ್ತ ಬಂದರೆ ಮತ್ತೆ ಕಿರಿ ಕಿರಿ ಉಂಟಾದಂತಾಗುತ್ತದೆ. ಈಗಾಗಲೇ ಇರುವ ಬಾರ್ ತಾತ್ಕಾಲಿಕವೆಂದು ಪ್ರಾರಂಭವಾಗಿದ್ದು ಈಗ ಖಾಯಂ ಆಗುವ ಲಕ್ಷಣ ಕಾಣುತ್ತಿದೆ. ಇಲ್ಲಿಗೆ ಬರುವ ಗ್ರಾಹಕರು ರಸ್ತೆಯಲ್ಲಿಯೇ ವಾಹನ ನಿಲುಗಡೆ ಮಾಡುವುದರಿಂದ ವಿಮಾನ ನಿಲ್ದಾಣ ರಸ್ತೆಯ ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತಿದೆ. ಅಲ್ಲದೇ ಕುಡಿದು ಗಲಾಟೆ, ಕಿರಿ ಕಿರಿ ದಿನ ನಿತ್ಯದ ಗೋಳಾಗಿದೆ. ಹೀಗಾಗಿ ಈಗಿರುವ ಬಾರ್ ಪರವಾನಿಗೆ ಪರಿಶೀಲಿಸಬೇಕು ಹಾಗೂ ಹೊಸ ಬಾರ್, ವೈನ್ ಶಾಪ್‌ಗಳಿಗೆ ಅವಕಾಶ ನೀಡಬಾರದೆಂದು ಒತ್ತಾಯಿಸಲಾಯಿತು. ಮೇಯರ್‌ರವರು ಹೊಸ ಮದ್ಯದಂಗಡಿಗಳಿಗೆ ಅವಕಾಶ ನೀಡುವುದಿಲ್ಲ ಎಂಬ ಭರವಸೆಯನ್ನು ನೀಡಿದರು.

ನಗರ ಪಾಲಿಕೆ ಈ ಪ್ರದೇಶದಲ್ಲಿ ಮದ್ಯದಂಗಡಿಗಳಿಗೆ ಅವಕಾಶ ನೀಡಬಾರದು ಈ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಲಯಿತು.

ಡಿ.ವೈ.ಎಫ್.ಐ ನಿಯೋಗದಲ್ಲಿ ಪಂಜಿಮೊಗರು ಘಟಕದ ಮುಖಂಡರದ ನೌಶಾದ್, ಅನಿಲ್, ಚರಣ್, ಖಲೀಲ್, ರೊನಲ್ಡ್, ಸಂತೋಷ್ ಇದ್ದರು.

ಉಚಿತ ಶಿಕ್ಷಣ, ಉಚಿತ ಬಸ್ ಪಾಸ್ ಗಾಗಿ ಎಸ್.ಎಫ್.ಐ ನಿಂದ ಪ್ರತಿಭಟನೆ



ಎಲ್ಲ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವರೆಗೂ ಉಚಿತ ಬಸ್ ಪಾಸ್ ನೀಡಲು ಒತ್ತಾಯಿಸಿ ಜುಲೈ 7ರಂದು ಸರ್ಕಾರಿ ಬಸ್ ನಲ್ಲಿ ಟಿಕೆಟ್ ರಹಿತ ಉಚಿತ ಪ್ರಯಾಣ ಮಾಡಲು, ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕರೆಗೆ ಓಗೊಟ್ಟು ರಾಜ್ಯಾದ್ಯಂತ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಬಳ್ಳಾರಿ, ಕೊಪ್ಪಳ, ರಾಯಚೂರು, ಹಾವೇರಿ, ಕೋಲಾರ, ಹಾಸನ, ಉ.ಕನ್ನಡ, ಮೈಸೂರು, ದಾವಣಗೆರೆ ಗಳಿಂದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ.

ವಿದ್ಯಾರ್ಥಿಗಳು ಹೆಚ್ಚಿನ ನಗರಗಳಲ್ಲಿ ಟಿಕೆಟ್ ರಹಿತ ಉಚಿತ ಪ್ರಯಾಣ ಮಾಡುವ ಅಥವಾ ಬಸ್‌ಗಳನ್ನು ಬಂದ್ ಮಾಡುವ ಮೂಲಕ ಅಥವಾ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸುವ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಸಾರಿಗೆ ಇಲಾಖೆಯ ಅಥವಾ ಇತರ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಯವರಿಗೆ ಮನವಿ ಪತ್ರ ಸಲ್ಲಿಸಿದರು.

ಎಸ್‌ಎಫ್‌ಐ) ರಾಜ್ಯಾದ್ಯಂತ ಈಗಾಗಲೇ ಕಳೆದ ಹಲವು ವರ್ಷಗಳಿಂದ ರಾಜ್ಯದ್ಯಾಂತ ಉಚಿತ ಬಸ್ ಪಾಸ್ ಹಾಗೂ ಉಚಿತ ಶಿಕ್ಷಣಕಾಗ್ಕಿ ಹೋರಾಟ ನಡೆಸುತ್ತಾ ಬಂದಿದೆ. ಕಳೆದ ಒಂದು ತಿಂಗಳಿಂದ ಪ್ರತಿಭಟನೆಯನ್ನು ನಡೆಸುತ್ತಾ ಬಂದಿದೆ, ಬಜೆಟ್‌ಗೆ ಮುನ್ನಾ ಹಾಗೂ ಬಜೆಟ್ ನಂತರ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮನ್ನಾ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆಗಳನ್ನು ನಡೆಸುತ್ತಾ ಬಂದಿದೆ. ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಹಾಗೂ ಇತರೆ ಸೌಲಭ್ಯಗಳನ್ನು ಕೊಡುವುದರ ಬದಲಾಗಿ ಪ್ರವೇಶಾತಿ ಶುಲ್ಕಗಳ ಏರಿಕೆಗೆ ಹೊರಟಿದೆ. ಮತ್ತೊಂದೆಡೆ ಎಸ್‌ಸಿ\ಎಸ್‌ಟಿ ವಿದ್ಯಾರ್ಥಿಗಳಿಗೆ ಮಾತ್ರ ಉಚಿತ ಬಸ್ ಪಸ್ ನೀಡುವುದಾಗಿ ಘೋಷಣೆ ಮಾಡಿರುವುದರಿಂದ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮಧ್ಯೆ ಜಾತಿ ವೈಮಸ್ಸನ್ನು ಉಂಟು ಮಾಡಲು ಹೊರಟಿರುವುದನ್ನು ಮನವಿಯಲ್ಲಿ ಖಂಡಿಸಲಾಗಿದೆ.

ಕರ್ನಾಟಕ ರಾಜ್ಯ ಸರ್ಕಾರ ಎಸ್‌ಸಿ\ಎಸ್‌ಟಿ ವಿದ್ಯಾರ್ಥಿಗಳಿಗೆ ಉಚಿತ ಪಾಸ್‌ನ್ನು ರಿಯಾಯಿತಿ ದರದಲ್ಲಿ ಬಸ್‌ಪಾಸ್ ನೀಡುವ ತಿರ್ಮಾನವನ್ನು ಎಸ್‌ಎಫ್‌ಐ ಸ್ವಾಗತಿಸುತ್ತದೆ. ಆದರೂ ಇತರೆ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸುವಂತಹ ಸಂದೇಶವನ್ನು ರಾಜ್ಯ ಸರ್ಕಾರ ನೀಡಬಾರದು. ಯಾವುದೇ ಸರ್ಕಾರ ಆದರೂ ಕೂಡಾ ವಿದ್ಯಾರ್ಥಿ ಸಮುದಾಯದ ಮಧ್ಯೆ ತಾರತಮ್ಯ ಹುಟ್ಟು ಹಾಕುವ ಪ್ರವೃತ್ತಿಯನ್ನು ತಡೆಯಬೇಕು. ವಿದ್ಯಾರ್ಥಿ ಸಮುದಾಯಕ್ಕೆ ದೂರಕಬೇಕಾದ ಎಲ್ಲ ಸೌಲಭ್ಯ ಸವಲತ್ತುಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೂ ದೂರಕುವಂತೆ ಮಾಡಬೇಕು ಆದ್ದರಿಂದ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದ ವರೆಗೂ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ನೀಡಬೇಕೆಂದು ಮನವಿಯಲ್ಲಿ ಎಸ್‌ಎಫ್‌ಐ ಆಗ್ರಹಿಸಿದೆ.





ಗೋವಿನ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುವುದು ನಿಲ್ಲಿಸಿ



ದೇಶಾದ್ಯಂತ ಗೋವಿನ ಹೆಸರಿನಲ್ಲಿ ಮುಸ್ಲಿಂ, ದಲಿತ ಮತ್ತು ಕ್ರಿಶ್ಚಿಯನ್ನರನ್ನು ಹಿಂದುಪರ ಸಂಘಟನೆಗಳು ಹಲ್ಲೆ ಮಾಡಿ ಕೊಲೆಮಾಡಲಾಗುತ್ತಿದ್ದು ಇದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ ಮತ್ತು ಅಮಾನವೀಯ ಘಟನೆಗಳು ಇದನ್ನು ಜಾತ್ಯಾತೀತ, ಮನುಷ್ಯತ್ವಪರ ಇರುವವರೆಲ್ಲ ಖಂಡಿಸಬೇಕು ಎಂದು ಸಿಪಿಐಎಂನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಮಾತನಾಡಿದರು. ಇಂದು ನಗರದ ಹೇಮಾವತಿ ಪ್ರತಿಮೆಯ ಮುಂಬಾಗ ಎಲ್ಲ ಪ್ರಗತಿಪರ ಸಂಘಟನೆಗಳು ಆಯೋಜಿಸಿದ್ದ "ನಾಟ್ ಇನ್ ಮೈ ನೇಮ್" ನನ್ನ ಹೆಸರಲ್ಲಿ ಬೇಡ, ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಕೇಂದ್ರದಲ್ಲಿ ನರೇಂದ್ರ ಮೋಧಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದಲಿತ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ ರಕ್ಷಣೆಯೇ ಇಲ್ಲದಂತಾಗಿದೆ. ನಾವು ಯಾವ ಆಹಾರವನ್ನು ತಿನ್ನಬೇಕೆನ್ನುವುದನ್ನು ನಿರ್ಧರಿಸುವ ಹಕ್ಕು ಯಾರಿಗೂ ಇಲ್ಲ. ಇದು ಸಂವಿಧಾನ ವಿರೋಧಿ ಆಲೋಚನೆಯಾಗಿದೆ ಎಂದರು.

ಕಳೆದ 22 ತಿಂಗಳಲ್ಲಿ ದೇಶದಲ್ಲಿ 17 ಕಡೆ ಗೋವಿನ ಹೆಸರಿನಲ್ಲಿ ದಲಿತ ಮತ್ತು ಮುಸ್ಲಿಂರ ಹತ್ಯೆಗಳು ನಡೆದಿವೆ. ಒಂದೆಡೆ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ಕುರಿತು ಜನತೆ ಪ್ರತಿರೊಧವನ್ನು ಒಡ್ಡುತ್ತಿರುವ ಈ ಸಂಧರ್ಭದಲ್ಲಿ ಜನರನ್ನು ದಾರಿ ತಪ್ಪಿಸಿ ಭಾವನಾತ್ಮಕ ವಿಚಾರಗಳ ಮೇಲೆ ರಾಜಕೀಯ ಮಾಡುವ ಸಂಘಪರಿವಾರದ ಹುನ್ನಾರವನ್ನು ಬಯಲಿಗೆಳೆಯಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎಚ್.ಆರ್.ನವೀನ್‌ಕುಮಾರ್ ಮಾತನಾಡುತ್ತಾ ಹೇಳಿದರು.

ಪ್ರತಿಭಟನೆಯಲ್ಲಿ ಆಜಾದ್ ಟಿಪ್ಪು ಸಂಘರ್ಷ ಸಮಿತಿಯ ಅಧ್ಯಕ್ಷರಾದ ಮುಭಾಷಿರ್ ಅಹಮದ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಎ.ರಾಘವೇಂದ್ರ, ಡಿಹೆಚ್‌ಎಸ್‌ನ ಜಿಲ್ಲಾ ಸಂಚಾಲಕರಾದ ಪೃಥ್ವಿ ಎಂ.ಜಿ ಮತ್ತು ಎಸ್‌ಎಫ್‌ಐನ ಜಿಲ್ಲಾ ಅಧ್ಯಕ್ಷರಾದ ಮಹೇಶ್ ಇದ್ದರು.

"ತಿಂಗಳ ಪ್ಯಾಡ್ ಮ್ಯಾಲನೂ ರೊಕ್ಕ ತಿನ್ತಾರ"



ಸ್ಯಾನಿಟರಿ ನ್ಯಾಪ್ಕಿನ್ ಗಳ ಮೇಲೆ ಶೇ. 12 ಜಿ.ಎಸ್.ಟಿ. ತೆರಿಗೆ ಹಾಕಿದ್ದು ದೇಶಾದ್ಯಂತ ಮಹಿಳೆಯರ ಆಕ್ರೋಶಕ್ಕೆ ಕಾರಣವಾಗಿದೆ. ಇದರ ವಿರುದ್ಧ ಕಲಬುರಗಿ ಬೀದಿಯಲ್ಲಿ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಮುಂದೆ ಯುವತಿಯರು, ವಿದ್ಯಾರ್ಥಿನಿಯರು ದನಿಯೆತ್ತರಿಸಿ ಕೈಯೆತ್ತಿ ಧಿಕ್ಕಾರ "ಕೇಂದ್ರ ಸರಕಾರದ ಜಿಎಸ್ಟಿ ನೀತಿಗೆ...." ಹೇಳಿದರು. ಪ್ರತಿಭಟನೆಯನ್ನು ಜನವಾದಿ ಮಹಿಳಾ ಸಂಘಟನೆ, ಪ್ರಜ್ಞಾ ಕಾನೂನು ಸಲಹಾ ಸಮಿತಿ ಸಂಘಟಿಸಿತ್ತು. ಪ್ರತಿಭಟನೆಯ ನಂತರ ಕೇಂದ್ರ ಹಣಕಾಸು ಸಚಿವರಿಗೆ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿದ ಮನವಿ ಪತ್ರದಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಗಳ ಮೇಲೆ ಶೇ. 12 ಜಿ.ಎಸ್.ಟಿ. ತೆರಿಗೆಯನ್ನು ತಕ್ಷಣ ಹಿಂತೆಗೆಯಬೇಕು. ಇಲ್ಲವೆ ಉಗ್ರ ಹೋರಾಟ ಎದುರಿಸಲು ತಯಾರಾಗಬೇಕು ಎಂದು ಎಚ್ಚರಿಕೆ ನೀಡಲಾಗಿದೆ.

ಭಾರತದಲ್ಲಿ ಶೇಕಡ 71 ರಷ್ಟು ಜನತೆಯ ಜೀವನದ ಆದಾಯವು ಕೇವಲ 20 ರೂಪಾಯಿ ಎಂಬುದು ಕೇಂದ್ರ ಸರಕಾರದ ಸಮೀಕ್ಷೆಯಾಗಿದೆ. ಇವರಲ್ಲಿ ಅರ್ಧದಷ್ಟು ಮಹಿಳೆಯರು ಎಂಬುದನ್ನು ಮರೆಯಬಾರದು. ಯುವತಿಯರು ತಿಂಗಳ ಋತುಸ್ರಾವದ ಹೊತ್ತಿನಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಬಳಸುವುದು ಆರೋಗ್ಯದ ದೃಷ್ಟಿಯಿಂದ ಅನಿವಾರ್ಯವಾಗಿದೆ. ಆದ್ದರಿಂದ ಉತ್ತಮ ಗುಣಮಟ್ಟದ ಸ್ಯಾನಿಟರಿ ನ್ಯಾಪ್ಕಿನ್ ಗಳನ್ನು ಉಚಿತವಾಗಿ ವಿತರಿಸಬೇಕು ಎಂಬುದು ಮಹಿಳಾ ಸಂಘಟನೆಗಳ ಒತ್ತಾಯವಾಗಿದೆ. ಕರ್ನಾಟಕದ ಸರಕಾರಿ ಹೈಸ್ಕೂಲುಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ. ಅಗತ್ಯವಿರುವ ಎಲ್ಲ ಮಹಿಳೆಯರಿಗೂ ಉತ್ತಮ ಗುಣಮಟ್ಟದ ಸ್ಯಾನಿಟರಿ ನ್ಯಾಪ್ಕಿನ್ ಉಚಿತವಾಗಿ ವಿತರಿಸಬೇಕು. ಮತ್ತು ಈ ಕ್ರಮವು ದೇಶದಾದ್ಯಂತ ಜಾರಿಯಾಗಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಕೇಂದ್ರ ಸರಕಾರವು ಜಿಎಸ್‌ಟಿ ಜಾರಿಗೊಳಿಸುವ ಕಾರ್ಪೋರೆಟ್ ಕಣ್ಣೊಟದ ಹಿನ್ನೆಲೆಯಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಸಹ ಐಶಾರಾಮಿ ಪಟ್ಟಿಗೆ ತಳ್ಳಿ ಶೇ.12ರಷ್ಟು ತೆರಿಗೆ ಹೇರಿರುವುದನ್ನು ಮನವಿಯಲ್ಲಿ ತೀವ್ರವಾಗಿ ಖಂಡಿಸಲಾಗಿದೆ. ಮಹಿಳೆಯರ ಸಂಕಟ ಸಮಸ್ಯೆಗಳನ್ನು ಅರಿತುಕೊಳ್ಳಲು ತಾಯ್ತನದ ಜರೂರಿ ಇರುತ್ತದೆ. ಆದರೆ ನಮ್ಮ ದೇಶದ ಪ್ರದಾನ ಮಂತ್ರಿಗಳಾದ ನರೇಂದ್ರ ಮೋದಿಯವರಿಗಾಗಲಿ ಹಣಕಾಸು ಸಚಿವ ಅರುಣ ಜೇಟ್ಲಿಯವರಿಗಾಗಲಿ ತಾಯ್ತನ ದೂರ ಉಳಿಯಿತು ಕನಿಷ್ಠ ಕಾಮನ್ ಸೆನ್ಸ್ ಸಹ ಇಲ್ಲವೆಂಬುದಕ್ಕೆ ನ್ಯಾಪ್ಕಿನ್ ಮೇಲೆ ಹೇರಿದ 12% ತೆರಿಗೆ ಸಾಕ್ಷಿಯಾಗಿದೆ. ಬಡ ಮಹಿಳೆಯರು, ಕೆಳಮದ್ಯಮ ವರ್ಗದ ಮಹಿಳೆಯರು, ಕಾಲೇಜು ವಿದ್ಯಾರ್ಥಿನಿಯರು ದುಬಾರಿ ಹಣ ತೆರಲು ಹೇಗೆ ಸಾಧ್ಯ? ಹಿಂದೆ ಸಹ ದುಬಾರಿ ಹಣ ತೆ–ತ್ತು ಕೊಳ್ಳುವುದು ಕಷ್ಟದ್ದಾಗಿರುವುದರಿಂದ ಉಚಿತ ವಿತರಣೆಗೆ ಆಗ್ರಹಿಸಲಾಗಿತ್ತು. ಆದರೀಗ ಇನ್ನಷ್ಟು ತೆರಿಗೆ ಹಾಕುವ ಮೂಲಕ ಕನಿಷ್ಠ ಮಟ್ಟಿಗಾದರೂ ಮಹಿಳಾ ಸಂವೇದನೆಯಿಲ್ಲದ ಸರಕಾರ ತಾನೆಂಬುದು ಸಬೂತು ಮಾಡಿದಂತಾಗಿದೆ. ಬಿಜೆಪಿ ಪಕ್ಷದಲ್ಲಿರುವ ಮಹಿಳೆಯರು ಈ ಕುರಿತು ಮೌನವಾಗಿರುವುದು ಖಂಡನಾರ್ಹವಾದದ್ದು. ತೆರಿಗೆ ಕೊಡಲಾಗದಿದ್ದರೆ ಮನೆಯಲ್ಲಿ ಅಡುಗೆ ಮಾಡಿಕೊಂಡು ಉಣ್ಣಿ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದು ನೋಡಿದರೆ ನ್ಯಾಪ್ಕಿನ್ ವಿಷಯಕ್ಕೂ ಇಂತಹದೇ ಅಮಾನವೀಯ ನಿಲುವು ಹೊಂದಿದ್ದಾರೆ ಎಂದಂತೆ ಎಂದು ಮನವಿಯಲ್ಲಿ ಟೀಕಿಸಲಾಗಿದೆ.

ಜಗಕೆ ತಂದ ಜನನಿಯ ಅಸ್ಮಿತೆ ಘನತೆಗೆ ಧಕ್ಕೆ ತರುತ್ತಿರುವ ಕೇಂದ್ರ ಸರಕಾರದ ತೆರಿಗೆ ನೀತಿ ಖಂಡನಾರ್ಹ. ಅಭಿವೃದ್ಧಿ ವಿರೋಧಿಯಾದ ಅಮಾನವೀಯ ತೆರಿಗೆ ಪದ್ಧತಿಯನ್ನು ಕೂಡಲೇ ಕೈಬಿಡಬೇಕು. ನ್ಯಾಪ್ಕಿನ್ ಮೇಲಿನ 12% ತೆರಿಗೆಯನ್ನು ಹಿಂಪಡೆಯಬೇಕು. ಮತ್ತು ಉಚಿತವಾಗಿ ದೇಶದಾದ್ಯಂತ ಉತ್ತಮ ಗುಣಮಟ್ಟದ ನ್ಯಾಪ್ಕಿನ್ ವಿತರಿಸಬೇಕೆಂದು ಎಂದು ಮನವಿ ಆಗ್ರಹಿಸಿದೆ. ಆಗ್ರಹಿಸುತ್ತೇವೆ.

ಒಬ್ಬ ಮಹಿಳೆ ಹೇಳ್ತಿದ್ದಳು "ನಮ್ ತಿಂಗಳ ಪ್ಯಾಡ್ ಮ್ಯಾಲನೂ ಇವ್ರಿಗಿ ರೊಕ್ಕ ತಿನ್ಲಾಕ್ ಸಾಕಾಗವಲ್ದು.. ಹೊಟ್ಟಿಗಿ ಏನ್ ತಿಂತಾರಾ?"
ವಿದ್ಯಾರ್ಥಿನಿ ಹಿಂಗ ಹೇಳಿದಳು, "ಕೇಂದ್ರ ಸರಕಾರದೋರು ಬೇಟಿ ಬಚಾವೊ ಬೇಟಿ ಪಢಾವೊ ಅಚಿತ ಸುಳ್ಳ ಸಾಚಿರ್ೂರ. ಖರೆ ಕಾಳಜಿ ಇದ್ರ ಸ್ಯಾನಿಟರಿ ನ್ಯಾಪ್ಕಿನ್ ಮ್ಯಾಲ ಟ್ಯಾಕ್ಸ್ ಹಾಕಲಿಕ್ ಹ್ಯಾಂಗ್ ಸಾಧ್ಯ ಇತ್ತು? ಅವರ ಮಾತೃ ಭಕ್ತಿ ದೇಶ ಭಕ್ತಿ ಎಲ್ಲ ಬೋಗಸ್ ಮಂದಿಗಿ ಮಳ್ಳ ಮಾಡಾದು ಇನ್ ಮುಂದ ಸಾಧ್ಯ ಇಲ್ಲ ಸ್ಯಾನಿಟರಿ ಪ್ಯಾಡ್ ಮ್ಯಾಲಿನ್ ಟ್ಯಾಕ್ಸ್ ತೆಗಿಬೇಕು. ಉತ್ತಮ ಗುಣಮಟ್ಟದ್ದು ಪ್ಯಾಡ್ ಎಲ್ಲ ಹೆಣ್ಮಕ್ಕಳಿಗಿ ವಿತರಿಸಬೇಕು. ಇಲ್ಲಾಂದ್ರ ದೇಶ ಅಂಬಾದು ಹೋರಾಟದ ಅಂಗಳ ಆಗ್ತದ.."

ಜುಲೈ 10 : ರೈತರು, ದಲಿತರು, ಕೃಷಿ ಕಾರ್ಮಿಕರ ಬೃಹತ್ ಸಮಾವೇಶ

ರೈತರು, ದಲಿತರು, ಕೃಷಿ ಕಾರ್ಮಿಕರ ಸಂಪೂರ್ಣ ಸಾಲಾ ಮನ್ನಾಕ್ಕಾಗಿ, ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಆಧಾರಿತ ಕನಿಷ್ಟ ಬೆಂಬಲ ಬೆಲೆ ನಿಗದಿಗಾಗಿ, ಹಾಗೂ ಕೃಷಿಕರ ಪರವಾದ ಬೆಳೆ ವಿಮೆ ನೀತಿಗಾಗಿ ಒತ್ತಾಯಿಸಲು ರಾಜ್ಯ ಮಟ್ಟದ ಬೃಹತ್ ಸಮಾವೇಶವನ್ನು ಜುಲೈ 10 ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರಿನ ಶಿಕ್ಷಕರ ಸದನದಲ್ಲಿ ಹಮ್ಮಿಕೊಳ್ಳಲಾಗಿದೆ. ಇದನ್ನು ರೈತ, ಕೃಷಿ ಕೂಲಿಕಾರ, ದಲಿತ ಸಂಘಟನೆಗಳ ಒಕ್ಕೂಟ ಸಂಘಟಿಸುತ್ತಿದೆ. ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ರೈತ ಕಾರ್ಮಿಕರ ಸಂಘ, 14 ದಲಿತ ಸಂಘಟನೆಗಳ ರಾಜ್ಯ ಸಮನ್ವಯ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಈ ಒಕ್ಕೂಟದಲ್ಲಿ ಇವೆ. ಒಕ್ಕೂಟ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಸಮಾವೇಶ ಮೂರು ಪ್ರಮುಖ ಹಕ್ಕೊತ್ತಾಯಗಳನ್ನು ರೂಪಿಸಿ ಅದರ ಜಾರಿಗಾಗಿ ಕೈಕೊಳ್ಳಬೇಕಾದ ಮುಂದಿನ ಹೋರಾಟದ ರೂಪುರೇಷೆಗಳನ್ನು ನಿರ್ಧರಿಸಲಿದೆ. ಸಂಕಷ್ಟದಲ್ಲಿರುವ ದಲಿತರು, ಕೃಷಿಕರು ಹಾಗೂ ರೈತರ ಬದುಕನ್ನು ರಕ್ಷಿಸಲು ಪ್ರಪ್ರಥಮವಾಗಿ ರಾಜ್ಯ ಮಟ್ಟದ ಜಂಟಿ ಬೃಹತ್ ಹೋರಾಟವನ್ನು ಸಂಘಟಿಸಲು ಕೈಜೋಡಿಸಿ ಪಕ್ಷಾತೀತವಾದ ಈ ಚಳುವಳಿಯನ್ನು ಯಶಸ್ವಿಗೊಳಿಸಬೇಕೆಂದು ಒಕ್ಕೂಟ ಕೋರಿದೆ.

ರಾಜ್ಯದ ರೈತ, ದಲಿತರು ಹಾಗೂ ಕೃಷಿ ಕಾರ್ಮಿಕರನ್ನು ಸಾಲ ಮುಕ್ತರನ್ನಾಗಿ ಮಾಡಿ:

ರಾಜ್ಯದ ರೈತರು, ದಲಿತರು ಹಾಗು ಕೃಷಿಕಾರ್ಮಿಕರು ಸತತ 3–4 ವರ್ಷಗಳಿಂದ ಬರಗಾಲವನ್ನು ಎದುರಿಸುತ್ತಿದ್ದಾರೆ. ಈ ಸಾಲಿನ ಬರಗಾಲವು ಸುಮಾರು 40 ವರ್ಷಗಳ ಹಿಂದಿನ ಬರಗಾಲದ ಭೀಕರತೆಯನ್ನು ಮೀರಿಸಿದೆ. ಬ್ಯಾಂಕ್, ಖಾಸಗಿಯವರಿಂದ ತಂದಿರುವ ಸಾಲಗಳಲ್ಲದೆ ತನ್ನ ಬಳಿಯಿರುವ ಬಂಡವಾಳ, ಶ್ರಮವನ್ನು ಕಳೆದುಕೊಂಡು ಕೃಷಿಕರು ಅಸಹಾಯಕತೆಯಿಂದ ನರಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಲಿತರು, ಕೃಷಿಕರು ಮತ್ತು ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕೆಂದು ಒಕ್ಕೂಟ ಒತ್ತಾಯಿಸಿದೆ.

ಖಾಸಗಿ ಸಾಲಗಳಲ್ಲದೆ ಬ್ಯಾಂಕುಗಳ ಮೂಲಕ ಪಡೆದಿರುವ ಎಲ್ಲಾ ರೀತಿಯ ಕೃಷಿ ಸಾಲದ ಒಟ್ಟು ಮೊತ್ತ 1.16 ಲಕ್ಷ ಕೋಟಿಗಳಿಗೂ ಮೀರಿದೆ. ಇದರಲ್ಲಿ ಸಹಕಾರಿ ಕ್ಷೇತ್ರದ 10.7 ಸಾವಿರ ಕೋಟಿ ರೂಗಳು ಸೇರಿ ರಾಷ್ಟ್ರೀಕೃತ ಬ್ಯಾಂಕು, ಖಾಸಗಿ ಬ್ಯಾಂಕ್‌ಗಳ ಅಲ್ಪಾವಧಿ ಸಾಲಗಳಾದ ಸುಮಾರು 52 ಸಾವಿರ ಕೋಟಿ ರೂ.ಗಳನ್ನು ಸಂಪೂರ್ಣ ಮನ್ನಾ ಮಾಡಬೇಕೆಂದು ಒಕ್ಕೂಟ ಒತ್ತಾಯಿಸಿದೆ..

ಈ ನಡುವೆ ಪ್ರತಿ ಕುಟುಂಬದ ಸಾಲದಲ್ಲಿ ಗರಿಷ್ಟ 50 ಸಾವಿರ ರೂಗಳಂತೆ 22.27 ಲಕ್ಷ ಕುಟುಂಬಗಳ ಒಟ್ಟು 8165 ಕೋಟಿ ರೂಗಳ ಸಹಕಾರಿ ಕ್ಷೇತ್ರದ ಸಾಲವನ್ನು ಮನ್ನಾ ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಒಕ್ಕೂಟ ಸ್ವಾಗತಿಸಿದೆ. ಆದರೆ ಸಾಲದ ಉಳಿದ ಹಣವನ್ನು ಪಾವತಿಸಿದರೆ ಈ 50 ಸಾವಿರ ರೂ. ಮನ್ನಾದಂತಹ ಶರತ್ತುಗಳನ್ನು ತೆಗೆಯಬೇಕಲ್ಲದೆ, ಉಳಿದ 2578 ಕೋಟಿ ರೂಗಳನ್ನು ಮನ್ನಾ ಮಾಡಬೇಕೆಂದು ಒಕ್ಕೂಟ ಒತ್ತಾಯಿಸಿದೆ.

ಅಲ್ಲದೆ ಭಾರತದಲ್ಲಿ ಮುಖ್ಯವಾಗಿ ಶೇ 80 ರಷ್ಟು ರೈತರು, ದಲಿತರು ಮತ್ತು ಕೃಷಿಕಾರ್ಮಿಕರು ಕೇಂದ್ರ ಸರ್ಕಾರ ಸ್ವಾಮ್ಯದ ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕುಗಳಲ್ಲಿ ಪಡೆದಿರುವ 42 ಸಾವಿರ ಕೋಟಿ ರೂಗಳ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಬೇಕೆಂದು ಒಕ್ಕೂಟ ಆಗ್ರಹಿಸಿದೆ.

ಬರಗಾಲದಿಂದ ತೀವ್ರಗೊಂಡಿರುವ ಕೃಷಿ ಬಿಕ್ಕಟ್ಟಿನ ಫಲವಾಗಿ ಹತ್ತಾರು ಸಾವಿರಗಟ್ಟಲೆ ರೈತರು ಆತ್ಮಹತ್ಯೆಗೆ ಗುರಿಯಾಗುತ್ತಿರುವಾಗ, ಕೂಲಿ ಕೆಲಸಗಳನ್ನು ಕಳೆದುಕೊಂಡು ದೊಡ್ಡ ಸಂಖ್ಯೆಯ ದಲಿತರು, ಕೂಲಿಕಾರರು ನಗರಗಳಿಗೆ ವಲಸೆ ಹೋಗುತ್ತಿರುವ ಸಂದರ್ಭದಲ್ಲಿಯೂ “ಸಾಲಾ ಮನ್ನಾಕ್ಕೂ ನಮಗೂ ಸಂಭಂದವಿಲ್ಲ” “ಸಾಲಮನ್ನಾ ಮಾಡಿದ ರಾಜ್ಯ ಸರ್ಕಾರಕ್ಕೆ ಬಿಡುಗಾಸಿನ ಹಣಕಾಸಿನ ಸಹಾಯವನ್ನೂ ನೀಡುವುದಿಲ್ಲ” ಎನ್ನುವ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಸಚಿವರ ಹೇಳಿಕೆಗಳನ್ನು ಒಕ್ಕೂಟ ಖಂಡಿಸಿದೆ..

ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳಲ್ಲಿ ದೇಶದಲ್ಲಿ ಸೂಪರ್ ಲಾಭವನ್ನು ಮಾಡುತ್ತಿರುವ ಬಂಡವಾಳಗಾರರಿಗೆ, ಕಾರ್ಪೋರೇಟ್ ಕಂಪನಿಗಳಿಗೆ ಸುಮಾರು 12 ಲಕ್ಷ ಕೋಟಿ ರೂಗಳಷ್ಟು ತೆರಿಗೆ ವಿನಾಯಿತಿ ಹಾಗೂ ಸಾಲ ಮನ್ನಾ ಮಾಡಿರುವಾಗ ಇವರುಗಳು ಆಡುತ್ತಿರುವ ಮಾತಿಗೆ ಅರ್ಥವೇ ಇಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಕೃತ ಮತ್ತು ಖಾಸಗೀ ಸಾಲಗಳನ್ನು ಮನ್ನಾ ಮಾಡಬೇಕೆಂದು ಒಕ್ಕೂಟ ಆಗ್ರಹಿಸಿದೆ.

ಇನ್ನೂ ಹಲವು ದಶಕಗಳ ಹೋರಾಟ ಮತ್ತು ಒತ್ತಡಗಳ ಕಾರಣಗಳಿಂದ ಕೃಷಿ ಸಾಲವಾಗಿ ವಾರ್ಷಿಕ 9–10 ಲಕ್ಷ ಕೋಟಿ ರೂಗಳನ್ನು ನೀಡುತ್ತಿದ್ದರೂ ದೇಶದ ಬಹುದೊಡ್ಡ ಸಂಖ್ಯೆ ದಲಿತರು, ಬಡವರು ಬ್ಯಾಂಕುಗಳ ಹತ್ತಿರ ಸಹ ಸುಳಿಯಲು ಸಾಧ್ಯವಾಗುತ್ತಿಲ್ಲ. ಇವರುಗಳ ಸಂಖ್ಯೆ ನಮ್ಮ ರಾಜ್ಯದಲ್ಲಿ ಸುಮಾರು ಶೇ 50 ಕ್ಕಿಂತ ಹೆಚ್ಚಿದೆ. ಇವರು ಅನಿವಾರ್ಯವಾಗಿ ವಾರ್ಷಿಕ ಶೇ 24 ರಿಂದ 60 ರಷ್ಟು ಬಡ್ಡಿಗೆ ಖಾಸಗಿ ಸಾಲಗಳನ್ನು ಪಡೆದು ಕೃಷಿ ನಡೆಸುತ್ತಿದ್ದಾರೆ. ಇವರ ಸಂಕಷ್ಟ ಹೇಳತೀರದು. ಇಂತಹವರುಗಳ ಸಾಲ ಮನ್ನಾಕ್ಕೂ “ಡೆಟ್ ರಿಲೀಫ್ ಆಕ್ಟ್” ಮಾದರಿಯ ಕಾಯಿದೆಯನ್ನು ರೂಪಿಸಬೇಕೆಂದು ಒಕ್ಕೂಟ ಆಗ್ರಹಿಸಿದೆ.

ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಆಧಾರಿತ ಬೆಂಬಲ ಬೆಲೆ ನಿಗದಿಗಾಗಿ :

ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ಸಿಗದೆ ರೈತರು ದಿವಾಳಿಯಾಗುತ್ತಿದ್ದಾರೆ. ವಿಶ್ವ ವ್ಯಾಪಾರಿ ಸಂಘಟನೆ (ಡಬ್ಲ್ಯುಟಿಓ) ನಿರ್ದೇಶಿತ ಮಾರುಕಟ್ಟೆ ದಾಳಿಗಳು ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿವೆ. ಇಂತಹ ನೀತಿಗಳಿಂದ ವಿದೇಶಗಳಿಂದ ಬೇಕಾಬಿಟ್ಟಿ ಆಮದಾಗುತ್ತಿರುವ ಕಾರಣದಿಂದ ದೇಶೀಯ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿಯುತ್ತಿವೆ. ಇಂತಹ ನೀತಿಗಳಿಂದಲೇ ಬಿಜೆಪಿ ಕೇಂದ್ರ ಸರ್ಕಾರದ ಆಡಳಿತದ ಅವಧಿಯಲ್ಲಿ 50 ಸಾವಿರಕ್ಕಿಂತ ಹೆಚ್ಚಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ದಾರುಣ ಸ್ಥಿತಿ ನಿರ್ಮಾಣವಾಗಿದೆ. ಉದಾಹರಣೆಗೆ ಕಲ್ಬುರ್ಗಿ, ಬೀದರ್, ಬಿಜಾಪುರ ಜಿಲ್ಲೆಗಳಲ್ಲಿ ವಿಪರೀತ ತೊಗರಿ ಬೆಳೆದಿದ್ದರೂ ದೊಡ್ಡ ರೀತಿಯ ಆಮದಿನಿಂದಾಗಿ ರೈತರಿಗೆ ಬೆಲೆ ಸಿಗದೆ ಪರದಾಡುವಂತಾಗಿದೆ. ಇಂತಹ ನೀತಿಗಳಿಂದ ವಾರ್ಷಿಕ ಲಕ್ಷ ಲಕ್ಷ ಕೋಟಿ ರೂಗಳು ನಷ್ಟವಾಗುತ್ತಿವೆ. ಪ್ರತಿಯೊಂದು ಕೈಗಾರಿಕಾ ಉತ್ಪಾದನೆಗಳಿಗೂ ಲಾಭದಾಯಕ ಬೆಲೆ ನಿಗದಿಯಾಗುತ್ತಿದ್ದರೂ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡದಿರುವುದೇ ರೈತರ ಆತ್ಮಹತ್ಯೆಗಳಿಗೆ ಮುಖ್ಯ ಕಾರಣವೆಂದು, ಇದನ್ನು ತಪ್ಪಿಸಲು ಸಾಧ್ಯವಾಗಬೇಕಾದರೆ “ಉತ್ಪಾಧನಾ ವೆಚ್ಚದ ಜೊತೆಗೆ ಶೇ 50 ರಷ್ಟು ಲಾಭವನ್ನು ಸೇರಿಸಿ ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡುವ ಸೂತ್ರವನ್ನು ಜಾರಿಗೆ ತರಬೇಕೆಂದು ವಿಶ್ವವಿಖ್ಯಾತ ಕೃಷಿತಜ್ಞ ಡಾ.ಎಂ.ಎಸ್.ಸ್ವಾಮಿನಾಥನ್‌ರವರು ವರಧಿಯನ್ನು ನೀಡಿದ್ದಾರೆ. ಇದನ್ನು ಕೂಡಲೇ ಜಾರಿಮಾಡಬೇಕೆಂದು ಒಕ್ಕೂಟ ಒತ್ತಾಯಿಸಿದೆ.

2022 ಕ್ಕೆ ಅಂದರೆ ಭಾರತ ದೇಶ ತನ್ನ 75 ನೇ ಸ್ವಾತಂತ್ರ್ಯೋತ್ಸವವನ್ನು ಆಚರಣೆ ಮಾಡುವ ಸಂದರ್ಭಕ್ಕೆ ಕೃಷಿಕರ ಆಧಾಯವನ್ನು ದ್ವಿಗುಣ ಗೊಳಿಸುವ ಯೋಜನೆಯನ್ನು ಪ್ರಧಾನ ಮಂತ್ರಿಗಳು ಘೋಷಿಸಿದ್ದಾರೆ. ಉತ್ಪಾಧನಾ ವೆಚ್ಚಕ್ಕಿಂತ ತೀರ ಕಡಿಮೆ ಬೆಂಬಲ ಬೆಲೆ ನಿಗದಿಮಾಡುವ ಸಿಎಸಿಪಿ ಯಂತಹ ವ್ಯವಸ್ಥೆಯನ್ನಿಟ್ಟುಕೊಂಡು ರೈತರ ಆಧಾಯವನ್ನು ಹೆಚ್ಚಿಸಲು ಸಾಧ್ಯವಿಲ್ಲ. ಬದಲಿಗೆ ಈಗಿನ ಪ್ರಧಾನ ಮಂತ್ರಿಗಳು ಚುನಾವಣಾ ಪೂರ್ವ ನೂರಾರು ಬಹಿರಂಗ ಸಭೆಗಳಲ್ಲಿ, ತಾನು ಅಧಿಕಾರಕ್ಕೆ ಬಂದರೆ ಡಾ.ಎಂಎಸ್.ಸ್ವಾಮಿನಾಥನ್ ವರದಿಯಂತೆ ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡಬೇಕೆನ್ನುವ ಸೂತ್ರವನ್ನು ಜಾರಿ ಮಾಡುವುದಾಗಿ ಪುಂಖಾನು ಪುಂಖವಾಗಿ ಭಾಷಣ ಮಾಡಿ ಅಧಿಕಾರಕ್ಕೆ ಬಂದ ಮೇಲೆ ಇದರ ಜಾರಿ ಸಾಧ್ಯವಿಲ್ಲವೆಂದು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ಕೂಡಲೇ ವಾಪಸ್ ಪಡೆದು ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಆಧಾರಿಸಿದ ಕನಿಷ್ಟ ಬೆಂಬಲ ಬೆಲೆ ಸೂತ್ರವನ್ನು ಜಾರಿಗೆ ತರುವುದಲ್ಲದೆ ಈ ಕನಿಷ್ಟ ಬೆಂಬಲ ಬೆಲೆ ಸೂತ್ರಕ್ಕೆ ಶಾಸನ ಬದ್ದ ಸ್ವರೂಪವನ್ನೂ ನೀಡಬೇಕೆಂದು ಒಕ್ಕೂಟ ಒತ್ತಾಯಿಸಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಕೃಷಿಕನ ಪರವಾದ ಬೆಳೆ ವಿಮೆ ನೀತಿ ಜಾರಿಯಾಗಲಿ:

ಅಬ್ಬರದ ಪ್ರಚಾರದೊಂದಿಗೆ ಜಾರಿಗೆ ತರಲಾಗಿರುವ “ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ”ಯ ಮೂಲಕ ಕಾರ್ಪೋರೇಟ್ ಕಂಪನಿಗಳು ಕೃಷಿಕರ ಕಂತಿನ ಹಣವನ್ನು ಲೂಟಿ ಮಾಡುತ್ತಿವೆ. ಫಸಲ್ ಬಿಮಾ ಯೋಜನೆಯ ಹೆಸರಿನಲ್ಲಿ ದೇಶದ ರೈತ–ರಿಂದ ಸಂಗ್ರಹವಾದ ಒಟ್ಟು ಹಣ 21.5 ಸಾವಿರ ಕೋಟಿ ರೂಗಳು, ಬೆಳೆ ನಷ್ಟದ ಪರಿಹಾರಕ್ಕಾಗಿ ಕೃಷಿಕರು ಸಲ್ಲಿಸಿದ್ದ ಕ್ಲೈಮುಗಳ ಒಟ್ಟು ಮೊತ್ತ 4270.55 ಕೋಟಿ ರೂಗಳು. ಆದರೆ ರೈತರಿಗೆ ಸಿಕ್ಕಿದ ಪರಿಹಾರ ಹಣ ಕೇವಲ 714.14 ಕೋಟಿ ರೂಗಳು ಅಂದರೆ ಶೇಖಡ 3.31 ರಷ್ಟು ಮಾತ್ರ. ಉಳಿದ ಹಣವನ್ನು ಕಾರ್ಪೋರೇಟ್ ಕಂಪನಿಗಳು ಹಗಲು ದರೋಡೆ ಮಾಡಿವೆ. ರಾಜ್ಯದ ಚಿತ್ರಣ ಇದಕ್ಕಿಂತ ಭಿನ್ನವಾಗೇನಿಲ್ಲ. ಇದಕ್ಕೆ ಕಾರಣ ಈ ಯೋಜನೆಯ ಜಾರಿಗಾಗಿ ರೂಪಿಸಿರುವ ಮಾರ್ಗದರ್ಶಿ ಸೂತ್ರಗಳು. ಇವುಗಳನ್ನು ಸಂಪೂರ್ಣವಾಗಿ ಕೃಷಿಕನ ಪರವಾಗಿ ಪುನರ್‌ರೂಪಿಸಲೇ ಬೇಕು. ಬೆಳೆ ನಷ್ಟಕ್ಕೆ ಗುರಿಯಾಗುವ ಪ್ರತೀ ಕೃಷಿಕನಿಗೂ ಹಾಗೂ ಎಲ್ಲಾ ಬೆಳೆಗಳಿಗೂ ಪರಿಹಾರ ಸಿಗುವಂತೆ ಮಾರ್ಗದರ್ಶಿ ಸೂತ್ರವನ್ನು ರೂಪಿಸಬೇಕು ಎಂದು ಒಕ್ಕೂಟ ಒತ್ತಾಯಿಸಿದೆ.

ಇಂತಹ ಒಂದು ಬೃಹತ್ ಚಳುವಳಿಗೆ ಮುಂದಾಗುತ್ತಿರುವ ಸಂದರ್ಭದಲ್ಲಿ ವಾರಗಟ್ಟಲೆ ಯಶಸ್ವೀ ಸಮರಧೀರ ಹೋರಾಟ ನಡೆಸಿ ಪ್ರತಿಯೊಬ್ಬ ರೈತ ಕುಟುಂಬಕ್ಕೆ 1.5 ಲಕ್ಷದ ವರೆಗಿನ ಸಾಲಾ ಮನ್ನಾ ಮಾಡಿಸಿಕೊಂಡ ಮಹಾರಾಷ್ಟ್ರದ ರೈತರ ಚಳುವಳಿ ಹಾಗು 6 ರೈತರನ್ನು ಗುಂಡಿಟ್ಟು ಕೊಂದ ಬಿಜೆಪಿಯ ಮಧ್ಯಪ್ರದೇಶದ ರಾಜ್ಯ ಸರ್ಕಾರವನ್ನು ನಡುಗಿಸುವಂತಹ ಹೋರಾಟವನ್ನು ನಡೆಸಿದ ರೈತರ ಸ್ಪೂರ್ತಿ ಮತ್ತು ಪರಂಪರೆಯನ್ನು ಎತ್ತಿಹಿಡಿದು ಮುನ್ನಡೆಯನ್ನು ಸಾಧಿಸುವುದಾಗಿ ಒಕ್ಕೂಟ ಪಣ ತೊಟ್ಟಿದೆ.



ಹೊಟೆಲಿನಲ್ಲಿ ಜಿ.ಎಸ್.ಟಿ. ಕೊಡಲು
ತಯಾರಿಲ್ಲದಿದ್ದರೆ
ಮನೆಯಲ್ಲಿ ಅಡುಗೆ ಮಾಡಿ ಊಟ ಮಾಡಿ
– ನಿರ್ಮಲಾ ಸೀತಾರಾಮನ್

2016 – ಬಿಜೆಪಿ ನಾವು ಏನು ತಿನ್ನಬೇಕು
ಎಂದು ನಿರ್ಧರಿಸಿದರು
2017 – ಬಿಜೆಪಿ ನಾವು ಎಲ್ಲಿ ತಿನ್ನಬೇಕು
ಎಂದು ನಿರ್ಧರಿಸಿದರು


ಜಿ.ಎಸ್.ಟಿ. ಕೊಡಲು ತಯಾರಿಲ್ಲದಿದ್ದರೆ
ಋತುಸ್ರಾವ ನಿಲ್ಲಿಸಿ ಅಂತೀರಾ ಮೇಡಂ !
– ಸುಷ್ಮಾ ರಾವ್

ಇಸ್ರೇಲ್‌ಗೆ ಮೋದಿ ಭೇಟಿ: ಕೇಡುಂಟು ಮಾಡುವ ಒಂದು ಮೈತ್ರಿ

ಮೋದಿಯವರ ಇಸ್ರೇಲ್ ಪ್ರವಾಸವು ಭಾರತ ಅನುಸರಿಸುತ್ತಿರುವ ವಿದೇಶಾಂಗ ನೀತಿಯಲ್ಲಿನ ಸ್ಥಿತ್ಯಂತರದ ಚರಮ ಬಿಂದು. ಇಸ್ರೇಲ್ ಜೊತೆ ಒಂದು ವ್ಯೂಹಾತ್ಮಕ ಸಂಬಂಧವನ್ನು ಬೆಸೆಯುವುದು ಮತ್ತು ಪ್ಯಾಲೇಸ್ತೀನ್ ಗುರಿ ಈಡೇರಿಕೆಗೆ ಭಾರತದ ಬದ್ಧತೆಯನ್ನು ನಿರಂತರವಾಗಿ ದುರ್ಬಲಗೊಳಿಸುವುದು– ಇದು ಅನೇಕ ವರ್ಷಗಳಿಂದ ಬೆಳೆದು ಬಂದಿದೆ. ಜಂಟಿ ಹೇಳಿಕೆಯಲ್ಲಿ ಘೋಷಿಸಲಾಗಿರುವ 'ವ್ಯೂಹಾತ್ಮಕ ಭಾಗೀದಾರಿಕೆ' ಇದುವರೆಗೆ ಮುಚ್ಚಿಡಲಾಗಿದ್ದ ಈ ಮೈತ್ರಿಯ ಬಹಿರಂಗ ಘೋಷಣೆಯಾಗಿದೆ. ಅದು ಮೋದಿ ಸರಕಾರದಡಿಯಲ್ಲಿ ವಿದೇಶಾಂಗ ನೀತಿಯಲ್ಲಿ ಆಗಿರುವ ಬಲಪಂಥೀಯ ಪಲ್ಲಟದ ಭಾಗವಾಗಿದೆ.



ಪ್ರಕಾಶ ಕಾರಟ್



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಪ್ರಧಾನಿ ನರೇಂದ್ರ ಮೋದಿಯವರ ಇಸ್ರೇಲ್ ಭೇಟಿ ಸಾಂಕೇತಿಕವಲ್ಲ, ಅದಕ್ಕಿಂತ ಬಹಳ ಹೆಚ್ಚಿನದ್ದು. ಇದು ಭಾರತದ ಪ್ರಧಾನಿಯೊಬ್ಬರ ಪ್ರಪ್ರಥಮ ಇಸ್ರೇಲ್ ಭೇಟಿ ಮಾತ್ರವೇ ಅಲ್ಲದೆ, ಒಬ್ಬ ಅತ್ಯುನ್ನತ ಭಾರತೀಯ ನಾಯಕ ಇಸ್ರೇಲ್‌ಗೆ ಭೇಟಿ ನೀಡಿದರೂ ರಮಲ್ಲಾ ಮತ್ತು ಪ್ಯಾಲೇಸ್ತೀನಿ ಪ್ರದೇಶಗಳಿಗೆ ಹೋಗದಿರುವ ಸಂದರ್ಭವೂ ಹೌದು.

ಮೋದಿಯವರ ಇಸ್ರೇಲ್ ಪ್ರವಾಸವು ಭಾರತ ಅನುಸರಿಸುತ್ತಿರುವ ವಿದೇಶಾಂಗ ನೀತಿಯಲ್ಲಿನ ಸ್ಥಿತ್ಯಂತರದ ಚರಮ ಬಿಂದು. ಇಸ್ರೇಲ್ ಜೊತೆ ಒಂದು ವ್ಯೂಹಾತ್ಮಕ ಸಂಬಂಧವನ್ನು ಬೆಸೆಯುವುದು ಮತ್ತು ಪ್ಯಾಲೇಸ್ತೀನ್ ಗುರಿ ಈಡೇರಿಕೆಗೆ ಭಾರತದ ಬದ್ಧತೆಯನ್ನು ನಿರಂತರವಾಗಿ ದುರ್ಬಲಗೊಳಿಸುವುದು– ಇದು ಅನೇಕ ವರ್ಷಗಳಿಂದ ಬೆಳೆದು ಬಂದಿದೆ. ಜಂಟಿ ಹೇಳಿಕೆಯಲ್ಲಿ ಘೋಷಿಸಲಾಗಿರುವ 'ವ್ಯೂಹಾತ್ಮಕ ಭಾಗೀದಾರಿಕೆ' ಇದುವರೆಗೆ ಮುಚ್ಚಿಡಲಾಗಿದ್ದ ಈ ಮೈತ್ರಿಯ ಬಹಿರಂಗ ಘೋಷಣೆಯಾಗಿದೆ.

ಈ ವ್ಯೂಹಾತ್ಮಕ ಮೈತ್ರಿಯ ಕೇಂದ್ರದಲ್ಲಿ ಇರುವುದು ಪ್ಯಾಲೆಸ್ತೀನಿನ ಮೇಲೆ ವಸಾಹತುಶಾಹಿ ಆಕ್ರಮಣ ಮತ್ತು ಪ್ಯಾಲೆಸ್ತೀನಿ ಜನತೆಯ ಮೇಲಿನ ದಬ್ಬಾಳಿಕೆಯನ್ನು ಗಟ್ಟಿಗೊಳಿಸುವ ಇಸ್ರೇಲ್ ಜೊತೆಗಿನ ಮಿಲಿಟರಿ ಮತ್ತು ಭದ್ರತಾ ಶಾಮೀಲು. ಇದು ಈ ವಲಯದಲ್ಲಿ ಅಮೆರಿಕ ಸಾಮ್ರಾಜ್ಯಶಾಹಿಯ ಸಾಧನವಾಗಿ ವರ್ತಿಸುವ ಇಸ್ರೇಲ್ ಪಾತ್ರಕ್ಕೆ ನೆರವು ನೀಡುವ ಒಂದು ಮೈತ್ರಿಯೂ ಆಗಿದೆ. ಮೋದಿ ಭೇಟಿ ಇಸ್ರೇಲ್ ಜೊತೆ 1992ರಲ್ಲಿ ಭಾರತ ರಾಜತಾಂತ್ರಿಕ ಸಂಬಂಧವನ್ನು ಸ್ಥಾಪಿಸಿದ 25ನೇ ವರ್ಷಾಚರಣೆಯ ಸಂದರ್ಭದಲ್ಲಿ ಬಂದಿದೆ. 1992ರಿಂದಲೂ ಇಸ್ರೇಲ್ ಜೊತೆ ಭದ್ರತೆ ಮತ್ತು ರಕ್ಷಣಾ ಸಂಬಂಧಗಳು ಅಂದಂದಿನ ಸರಕಾರಗಳ ಅಡಿಯಲ್ಲಿ ಕ್ರಮೇಣವಾಗಿ ವೃದ್ಧಿಸುತ್ತಾ ಬಂದಿವೆ. ಆದರೆ ಇದನ್ನು ಆಳಗೊಳಿಸಿರುವುದು ಮತ್ತು ಅದ–ಕ್ಕೊಂದು ಸೈದ್ಧಾಂತಿಕ ರಚನೆ ನೀಡಿರುವುದು ಬಿಜೆಪಿ ನೇತೃತ್ವದ ಸರಕಾರಗಳ ಆಡಳಿತಾವಧಿಯಲ್ಲಿಯೇ.

ಇಸ್ರೇಲ್ 1990ರ ದಶಕದ ಮಧ್ಯಭಾಗದಿಂದ ಭಾರತಕ್ಕೆ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಾಮಗ್ರಿಗಳನ್ನು ಪೂರೈಸುವ ಒಂದು ಪ್ರಮುಖ ದೇಶವಾಗಿದೆ. ಕಳೆದ ದಶಕದಲ್ಲಿ, ಇಸ್ರೇಲ್ ಭಾರತಕ್ಕೆ ಅತಿ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಮಾರಾಟ ಮಾಡುವ ದೇಶವಾಗಿತ್ತು. ತದನಂತರ ಅಮೆರಿಕ ಆ ಸ್ಥಾನವನ್ನು ಪಡೆಯಿತು. 2017 ಎಪ್ರಿಲ್‌ನಲ್ಲಿ ಇಸ್ರೇಲ್‌ನ ವೈಮಾನಿಕ ಕೈಗಾರಿಕೆಗಳಿಂದ 2.6 ಬಿಲಿಯನ್ ಡಾಲರ್ ಮೊತ್ತದ ಶಾರ್ಟ್ ರೇಂಜ್ ಮತ್ತು ಲಾಂಗ್ ರೇಂಜ್ ಬರಾಕ್–8 ಕ್ಷಿಪಣಿಗಳನ್ನು ಖರೀದಿಸಲು ಭಾರತ ಗುತ್ತಿಗೆ ನೀಡಿದೆ. ಕಣ್ಗಾವಲು ಡ್ರೋನ್‌ಗಳನ್ನು ಖರೀದಿಸುವ ಯೋಜನೆಯೂ ಇದೆ. ಇಸ್ರೋ ರಾಕೆಟ್‌ಗಳ ಮೂಲಕ ಇಸ್ರೇಲ್‌ನ ಬೇಹುಗಾರಿಕೆ ಉಪಗ್ರಹಗಳ ಉಡಾವಣೆಯನ್ನು ಭಾರತ ಮಾಡಿದೆ. ಆಂತರಿಕ ಭದ್ರತಾ ವಿಷಯಗಳಲ್ಲಿ ಇಸ್ರೇಲಿ ಭದ್ರತಾ ತಜ್ಞರು ಭಾರತಕ್ಕೆ ಸಲಹೆಗಳನ್ನು ನೀಡುತ್ತಿದ್ದಾರೆ.

ಬಲಪಂಥೀಯ ಪ್ರಾಣ–ಸ್ನೇಹಿತರು

ಬಿಜೆಪಿ ಹಿಂದುತ್ವವಾದಿ ಕಣ್ಣೋಟವು ಝಿಯೋನಿಸಂ ಎಂಬ ಜನಾಂಗೀಯ–ರಾಷ್ಟ್ರೀಯವಾದಿ ತೊರೆಯೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದೆ. ಇಸ್ರೇಲ್‌ನ ಆಳುವ ಬಲಪಂಥೀಯ ಲಿಕುಡ್ ಪಕ್ಷ ಮತ್ತು ಪ್ರಧಾನಿ ಬೆಂಜಮಿನ್ ನೆತಾನ್ಯಾಹು ಬಿಜೆಪಿ ಹಾಗೂ ನರೇಂದ್ರ ಮೋದಿಯವರ ಸೈದ್ಧಾಂತಿಕ ಪ್ರಾಣ–ಸ್ನೇಹಿತರು.. ಪ್ಯಾಲೆಸ್ತೀನಿ ಜನರನ್ನು ಬಗ್ಗು ಬಡಿದ ಹಾಗೂ ಅರಬ್ ರಾಷ್ಟ್ರಗಳನ್ನು ಎದುರುಹಾಕಿಕೊಂಡ ರೀತಿಗಾಗಿ ಆರ್‌ಎಸ್‌ಎಸ್ ಮತ್ತು ಬಿಜೆಪಿಗಳು ಇಸ್ರೇಲ್‌ಅನ್ನು ಆರಾಧಿಸುತ್ತವೆ. ತಮ್ಮ ಮುಸ್ಲಿಂ–ವಿರೋಧಿ ಧೋರಣೆಯಿಂದಾಗಿ ಅವುಗಳು ಇಸ್ರೇಲ್‌ಅನ್ನು ಅನುಕರಿಸುವಂತೆ ಮಾಡಿವೆ. ಹಾಗೆ ಮಾಡಬೇಕೆಂದು ವಿ.ಡಿ. ಸಾವರ್ಕರ್ 1952ರಲ್ಲೇ ಭಾರತಕ್ಕೆ ಕರೆ ನೀಡಿದ್ದರು. ವಾಜಪೇಯಿ ಸರಕಾರದ ಅವಧಿಯಲ್ಲಿ 2000ರಲ್ಲಿ ಅಂದಿನ ಗೃಹ ಸಚಿವರಾಗಿ ಎಲ್.ಕೆ. ಆಡ್ವಾಣಿ ಬೇಹುಗಾರಿಕೆ ಮತ್ತು ಭದ್ರತಾ ಸಂಬಂಧ ಕುದುರಿಸಲೆಂದು ಇಸ್ರೇಲ್‌ಗೆ ಭೇಟಿ ನೀಡಿದ್ದರು. ಉಗ್ರ ಬಲಪಂಥೀಯ ಏರಿಯಲ್ ಶರೋನ್ ಭಾರತಕ್ಕೆ ಭೇಟಿ ನೀಡಿದ ಮೊದಲ ಇಸ್ರೇಲಿ ಪ್ರಧಾನಿ. ಮಿಲಿಟರಿ ಮತ್ತು ಭಯೋತ್ಪಾದನೆ–ನಿಗ್ರಹ ಕ್ರಮಗಳ ಸಂಬಂಧ ವೃದ್ಧಿಸಲೆಂದು ಅವರು 2003ರಲ್ಲಿ ಭಾರತಕ್ಕೆ ಬಂದಿದ್ದರು.

ಇಸ್ರೇಲ್ ಜೊತೆ ಬಹಿರಂಗವಾಗಿ ಗುರುತಿಸಿಕೊಳ್ಳುವ ಹಾಗೂ ಪ್ಯಾಲೆಸ್ತೀನಿಯರಿಗೆ ಬರೀ ಬಾಯ್ಮಾತಿನ ಬೆಂಬಲ ವ್ಯಕ್ತಪಡಿಸುವ ಮೂಲಕ ಪ್ಯಾಲೆಸ್ತೀನಿ ಜನತೆಯ ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ತಾತ್ವಿಕ ಬೆಂಬಲ ನೀಡುವ ಭಾರತದ ದೀರ್ಘ ಕಾಲದ ನೀತಿಯನ್ನು ಮೋದಿ ಸರಕಾರವು ಕಸದ ಬುಟ್ಟಿಗೆ ತಳ್ಳಿದೆ.

ಅಣಕು ಜನತಂತ್ರಕ್ಕೆ ಶ್ಲಾಘನೆ

ಇಸ್ರೇಲ್ ಜನತಾಂತ್ರಿಕ ವ್ಯವಸ್ಥೆಯನ್ನು ಮೋದಿ ಶ್ಲಾಘಿಸಿದ್ದಾರೆ. ಆದರೆ ವಾಸ್ತವವಾಗಿ ಇಸ್ರೇಲ್‌ನಲ್ಲಿ ಅಸ್ತಿತ್ವದಲ್ಲಿರುವುದು ಜನತಂತ್ರದ ಅಣಕವಾಗಿದೆ. ಇಸ್ರೇಲಿ ಪ್ರಭುತ್ವದ ಮೂಲ ಭೌಗೋಳಿಕ ಗಡಿಗಳೊಳಗೆ ವಾಸಿಸುವ ಹಾಗೂ ಇಸ್ರೇಲ್‌ನ ಜನಸಂಖ್ಯೆಯ ಶೇಕಡಾ 21 ರಷ್ಟಾಗುವ 1.7 ಮಿಲಿಯ ಅರಬ್ ಜನರು ಅಲ್ಲಿ ಎರಡನೇ ದರ್ಜೆಯ ನಾಗರಿಕರಾಗಿದ್ದಾರೆ. ಇಸ್ರೇಲ್ ಒಂದು ಯೆಹೂದಿ ರಾಷ್ಟ್ರ ಎಂದು ಅಧಿಕೃತವಾಗಿ ಘೋಷಣೆಯಾಗುವಾಗ ಅವರ ಸ್ಥಾನಮಾನ ಇನ್ನೂ ಕೆಳಕ್ಕಿಳಿಯುವ ಸಂಭವವಿದೆ.

ಆಕ್ರಮಿತ ಪಶ್ಚಿಮ ದಂಡೆ ಮತ್ತು ಗಾಜಾದಲ್ಲಿ ವಾಸಿಸುವ 4.6 ಮಿಲಿಯ ಪ್ಯಾಲೆಸ್ತೀನಿಯರಿಗೆ ವಸ್ತುಶಃ ಅದೊಂದು ಜನಾಂಗದ್ವೇಷಿ ರಾಷ್ಟ್ರವಾಗಿದೆ. ಅವರ ಜಮೀನುಗಳನ್ನು ಕಸಿದುಕೊಳ್ಳಲಾಗಿದೆ. ಪಶ್ಚಿಮ ದಂಡೆಯಲ್ಲಿ ಪ್ಯಾಲೆಸ್ತೀನಿಯರಿಗೆ ಸೇರಿದ ಅತ್ಯುತ್ತಮ ಜಮೀನುಗಳುಮತ್ತು ಸಂಪನ್ಮೂಲಗಳಲ್ಲಿ ಯೆಹೂದಿಗಳ ವಸತಿಗಳು ತಲೆಯೆತ್ತಿವೆ. ಎಂಟು ಮೀಟರ್ ಎತ್ತರದ ಗೋಡೆಗಳು ಪ್ಯಾಲೆಸ್ತೀನಿ ನಗರವಾಸಿಗಳನ್ನು ಅವರದ್ದೇ ನೆಲದಿಂದ ಪ್ರತ್ಯೇಕಿಸಿವೆ. ಗಾಜಾ ಅಂತೂ ನಿರಂತರವಾಗಿ ಆಕ್ರಮಣಕ್ಕೆ ಒಳಗಾಗಿದ್ದು ಅಲ್ಲಿನ ಜನರು ವಿದ್ಯುಚ್ಛಕ್ತಿಯಿಂದಲೂ ವಂಚಿತರಾಗಿದ್ದಾರೆ. 1967ರ ಯುದ್ಧದ ನಂತರ, ಕಳೆದ 50 ವರ್ಷಗಳಿಂದಲೂ ಇಸ್ರೇಲ್ ಕ್ರೂರವಾಗಿ ವಸಾಹತುಶಾಹಿ ಆಕ್ರಮಣ ಮಾಡಿರುವುದೇ ಕಟು ವಾಸ್ತವ.

ಭಯೋತ್ಪಾದನೆ ವಿರುದ್ಧ ಜಂಟಿ–ಯಾಗಿ ಹೋರಾಡಲು ಉಭಯ ಕಡೆಯವರು ಪಣ ತೊಟ್ಟಿದ್ದಾರೆ. ಇಸ್ರೇಲ್ ಪ್ರಕಾರವಂತೂ ಅತಿಕ್ರಮಣದ ವಿರುದ್ಧ ಹೋರಾಡುತ್ತಿರುವ ಪ್ಯಾಲೆಸ್ತೀನಿ ಸಂಘಟನೆಗಳು ಹಾಗೂ ಲೆಬನಾನ್‌ನಲ್ಲಿ ಹೆಜ್ಬೊಲ್ಲಾ ಇವರೇ ಭಯೋತ್ಪಾದಕರು. ಪಶ್ಚಿಮ ಏಷ್ಯಾದಲ್ಲಿ ಭಯೋತ್ಪಾದನೆಗೆ ಇರಾನ್ ಪ್ರಮುಖ ಮೂಲ ಎಂಬುದು ನೇತ್ಯಾನಾಹು ಅಂಬೋಣ. ಮೋದಿ ಪ್ರಕಾರ, ಲಷ್ಕರ್–ಎ–ತೊಯ್ಬಾ ಮತ್ತು ಪ್ರಭುತ್ವ ದಮನದ ವಿರುದ್ಧ ಪ್ರತಿಭಟಿಸುತ್ತಿರುವ ಕಾಶ್ಮೀರಿ ಯುವಜನರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಮೋದಿ ಕಣ್ಣಲ್ಲಿ ಅವರಿಬ್ಬರೂ ಭಯೋತ್ಪಾದಕರೇ.

ಮೋದಿ ಭೇಟಿ ವೇಳೆ ಸಹಿ ಹಾಕಲಾದ ಏಳು ಒಪ್ಪಂದಗಳಲ್ಲಿ ಒಂದು ನೀರಿನ ನಿರ್ವಹಣೆಗೆ ಸಂಬಂಧಿಸಿದ್ದು. ನೀರಿನ ಕೊರತೆಯನ್ನು ನಿಭಾಯಿಸಲು ಪರಿಹಾರಗಳನ್ನು ಕಂಡುಕೊಳ್ಳುವ ಮತ್ತು ಅಲ್ಪ ಜಲಸಂಪನ್ಮೂಲವನ್ನು ವಿವೇಕಯುತವಾಗಿ ಬಳಸುವ ಇಸ್ರೇಲ್‌ನ ಸಾಮರ್ಥ್ಯದ ಬಗ್ಗೆ ಬಹಳವಾಗಿ ಹೇಳಲಾಗುತ್ತದೆ. ಭಾರತದಲ್ಲಿ ಮುಖ್ಯವಾಹಿನಿಯ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಈ ಬಗ್ಗೆ ಪ್ರಚಾರ ಮಾಡಲಾಗುತ್ತಿದೆ. ಆದರೆ ಇದಕ್ಕಾಗಿ ಆಕ್ರಮಿತ ಪಶ್ಚಿಮ ದಂಡೆ ಮತ್ತು ಗಾಜಾದ ಜಲಸಂಪನ್ಮೂಲಗಳನ್ನು ಕದಿಯಲಾಗುತ್ತಿರುವುದನ್ನು ಮರೆಮಾಚಲಾಗುತ್ತಿದೆ. ಉದಾಹರಣೆಗೆ, ಮೌಂಟೇನ್ ಅಖಿಫರ್ ಅನ್ನು ಇಸ್ರೇಲ್ ನಿಯಂತ್ರಿಸುತ್ತದೆ. ಅದರ ಶೇಕಡಾ 80ರಷ್ಟು ಭಾಗ ಪಶ್ಚಿಮ ದಂಡೆಯ ಕೆಳಗಡೆ ಇದೆ. ಕೃಷಿ ಮತ್ತು ಕಾನೂನುಬಾಹಿರ ವಸತಿಗಳ ಬಳಕೆಗಾಗಿ ಇಸ್ರೇಲ್ ಈ ನೀರನ್ನು ಅತಿಯಾಗಿ ಬಳಸಿಕೊಳ್ಳುತ್ತಿದೆ. ಇಸ್ರೇಲ್‌ನ ತಲಾ ದೈನಿಕ ನೀರಿನ ಬಳಕೆಯು ಪ್ಯಾಲೇಸ್ತೀನಿಯ ರದ್ದಕ್ಕಿಂತ ಐದು ಪಟ್ಟು ಹೆಚ್ಚಿಗಿದೆ.

ಬಲಪಂಥೀಯ ಪಲ್ಲಟದ ಭಾಗ

ಇಸ್ರೇಲ್ ಜೊತೆಗಿನ ವ್ಯೂಹಾತ್ಮಕ ಮೈತ್ರಿಯು ಮೋದಿ ಸರಕಾರದಡಿಯಲ್ಲಿ ವಿದೇಶಾಂಗ ನೀತಿಯಲ್ಲಿ ಆಗಿರುವ ಬಲಪಂಥೀಯ ಪಲ್ಲಟದ ಭಾಗವಾಗಿದೆ.

ಅಲಿಪ್ತ, ಸ್ವತಂತ್ರ ವಿದೇಶಾಂಗ ನೀತಿಯನ್ನು ಕೈಬಿಡುವುದು, ಪ್ಯಾಲೆಸ್ತೀನಿ ಜನತೆಯ ಗುರಿಯ ಈಡೇರಿಕೆಗೆ ನಮ್ಮ ಬದ್ಧತೆಗೆ ಬೆನ್ನು ತೋರಿಸುವುದು ಮತ್ತು ಅಮೆರಿಕ–ಇಸ್ರೇಲ್–ಭಾರತ ಕೂಟ ನಿರ್ಮಿಸಬೇಕೆಂಬ ಹಿಂದೂತ್ವ ಗುರಿಯ ಅನುಸರಣೆ, ಇವೆಲ್ಲವೂ ಭಾರತದ ಒಳಗಡೆ ಶಕ್ತಿಗಳ ಬಲಾಬಲಗಳಲ್ಲಿ ಆಗಿರುವ ಬದಲಾವಣೆ ಮತ್ತು ಬಲಪಂಥೀಯ ಪಲ್ಲಟದ ಪ್ರತಿಬಿಂಬವಾಗಿದೆ.

ಸಾಮ್ರಾಜ್ಯಶಾಹಿ–ಪರ ಮತ್ತು ಪ್ರತಿಗಾಮಿ ವಿದೇಶಾಂಗ ನೀತಿಯ ಬದಲಾವಣೆಗಾಗಿ ನಡೆಯುವ ಹೋರಾಟವು ಭಾರತದಲ್ಲಿ ಆಡಳಿತದಲ್ಲಿರುವ ಹಿಂದೂತ್ವವಾದಿ ಶಕ್ತಿಗಳ ವಿರುದ್ಧದ ಹೋರಾಟದ ಭಾಗವಾಗಿ ಇರಬೇಕು. ಈ ಶಕ್ತಿಗಳು ಸಾಮ್ರಾಜ್ಯಶಾಹಿ–ಪರವಾಗಿರುವಂತವೂ ಆಗಿವೆ, ಮತ್ತು ಇತರೆಲ್ಲರನ್ನೂ ಹೊರಗಿಡುವ ಹಿಂದೂ ರಾಷ್ಟ್ರೀಯವಾದವನ್ನು ಪ್ರತಿಪಾದಿಸುವಂತವೂ ಆಗಿವೆ. ಇದು ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಸಾರ್ವಭೌಮತೆಗೆ ಕೇಡು ಉಂಟು ಮಾಡುವಂತದ್ದು.

ಅನು: ವಿಶ್ವ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಇಸ್ರೇಲ್ ಜನತಾಂತ್ರಿಕ ವ್ಯವಸ್ಥೆಯನ್ನು ಮೋದಿ ಶ್ಲಾಘಿಸಿದ್ದಾರೆ. ಆದರೆ ವಾಸ್ತವವಾಗಿ ಇಸ್ರೇಲ್‌ನಲ್ಲಿ ಅಸ್ತಿತ್ವದಲ್ಲಿರುವುದು ಜನತಂತ್ರದ ಅಣಕವಾಗಿದೆ. ಶೇಕಡಾ 21ರಷ್ಟಾಗುವ ಅರಬ್ ಜನರು ಅಲ್ಲಿ ಎರಡನೇ ದರ್ಜೆಯ ನಾಗರಿಕರಾಗಿದ್ದಾರೆ. ಎಂಟು ಮೀಟರ್ ಎತ್ತರದ ಗೋಡೆಗಳು ಪ್ಯಾಲೆಸ್ತೀನಿ ನಗರವಾಸಿಗಳನ್ನು ಅವರದ್ದೇ ನೆಲದಿಂದ ಪ್ರತ್ಯೇಕಿಸಿವೆ.



ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಫೆಡರೇಶನ್ 3ನೇ ರಾಜ್ಯ ಸಮ್ಮೇಳನ

"ಕಟ್ಟಡ ಕಾರ್ಮಿಕರು ರಾಜಕೀಯ ಶಕ್ತಿಯಾಗಿ ಹೊಮ್ಮಬೇಕು" : ದಿಬಂಜನ್ ಚಕ್ರವರ್ತಿ

ವೆಂಕಟೇಶ ಕೋಣಿ



ದೇಶದ ರಾಜಕೀಯ ಪರಿಸ್ಥಿತಿ, ಕೇಂದ್ರ ರಾಜ್ಯ ಸರಕಾರದ ಆರ್ಥಿಕ ನೀತಿ ದುಡಿಯುವ ವರ್ಗ ಕಾರ್ಮಿಕರ ಪರವಾಗಿಲ್ಲ. ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಹೀಗೆ ಎಲ್ಲಾ ಧರ್ಮದವರು ಸಂವಿದಾನ ಬದ್ಧ ಧಾರ್ಮಿಕ ಆಚರಣೆಯ ಹಕ್ಕು ಹೊಂದಿದ್ದಾರೆ. ಆದರೆ ಪ್ರಧಾನಿ ಮೋದಿಯವರ ಸರ್ಕಾರ ಧರ್ಮದ ಹೆಸರಿನಲ್ಲಿ ಯುವ-ಮನಸ್ಸನ್ನು ಒಡೆಯುತ್ತಿದೆ, ದೇಶದ ರಾಜಕೀಯ ಬಲಪಂಥದ ಕಡೆಗೆ ಸಾಗುವ ಸೂಚನೆ ಇದೆ. ಧರ್ಮದ ಹೆಸರಿನಲ್ಲಿ ಸಮಾಜ ಸ್ವಾಸ್ಥ್ಯ ಕದಡುವ ಶಕ್ತಿಗಳ ವಿರುದ್ಧ ಕಟ್ಟಡ ಕಾರ್ಮಿಕರು ಧ್ವನಿ ಎರಿಸಬೇಕು. ಕಟ್ಟಡ ಕಾರ್ಮಿಕರಿಗಾಗಿ ನಮ್ಮ ದೇಶದಲ್ಲಿ ಸುಮಾರು 27ಕ್ಕಿಂತ ಹೆಚ್ಚು, ಆರ್ಥಿಕ/ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ಭಾರತ ಸರ್ಕಾರದಿಂದ ಜಾರಿ ಮಾಡಲಾಗಿದೆ. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದು 7 ದಶಕಗಳಾದರೂ ಈ ಕಾನೂನುಗಳು ಶೇ. 90 ರಷ್ಟು ಕಟ್ಟಡ ಕಾರ್ಮಿಕರಿಗೆ ಜಾರಿಯಾಗಿಲ್ಲ. ಇದಕ್ಕೆ ಪ್ರಮುಖ ಕಾರಣ ಈಗಲೂ ಬಹುಸಂಖ್ಯಾತ ಕಟ್ಟಡ ಕಾರ್ಮಿಕರು ಯಾವೊಂದು ಕಾರ್ಮಿಕ ಸಂಘಗಳಿಗೂ ಸೇರದಿರುವುದು ಮತ್ತು ಕಾರ್ಮಿಕ ಸಂಘಗಳ ಕುರಿತಾಗಿ ಅವರಲ್ಲಿ ತಿಳುವಳಿಕೆ ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ ಎಂದು ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಶನ್ (CWFI) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದಿಬಂಜನ್ ಚಕ್ರವರ್ತಿ ಕಳವಳ ವ್ಯಕ್ತಪಡಿಸಿದರು.

ಅವರು ಕುಂದಾಪುರ ಹಂಚು ಕಾರ್ಮಿಕರ ಭವನದಲ್ಲಿ, "ಕಾಂ॥ ದೋಗು ಸುವರ್ಣ ನಗರ"ದ "ಕಾಂ॥ ಪ್ರಸನ್ನ ಕುಮಾರ ವೇದಿಕೆ"ಯಲ್ಲಿ, ಜುಲೈ 2 ಮತ್ತು 3, 2017 ರಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಫೆಡರೇಶನ್‌ನ 3ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇದಕ್ಕೆ ಮೊದಲು CWFI ರಾಜ್ಯ ಅಧ್ಯಕ್ಷ ಎನ್. ವೀರಸ್ವಾಮಿ ಧ್ವಜಾರೋಹಣ ನೆರವೇರಿಸಿ ಪ್ರತಿನಿಧಿ ಸಂಗಾತಿಗಳು ಹುತಾತ್ಮ ಸ್ತಂಭಕ್ಕೆ ಕೆಂಪು ವಂದನೆ ಸಲ್ಲಿಸಿದರು.

ದೇಶದಲ್ಲಿ ಏಕ ರೂಪ ಜಿ.ಎಸ್.ಟಿ. ತೆರಿಗೆ ಜಾರಿಗೆ ತರಲಾಗಿದೆ. ಜಿ.ಎಸ್.ಟಿ. ಯಿಂದ ದೇಶದ ಜನರು ಒಳ್ಳೆಯ ದಿನಗಳನ್ನು ಕಾಣಲಿದಾರೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಆದರೆ ಇಂದು ದಿನಬಳಕೆ ಅಗತ್ಯ ಆಹಾರ ವಸ್ತುಗಳ ಬೆಲೆ ಏರಿಕೆ ವಿಪರೀತ ಹೆಚ್ಚಾಗಿದೆ. ನಮ್ಮ ದೇಶದಲ್ಲಿ ಕಾರ್ಮಿಕ, ರೈತ, ಕೃಷಿ ಕೂಲಿ ಕಾರ್ಮಿಕರಿಗೆ ಒಳ್ಳೆಯ ದಿನಗಳು ಬರುವ ಬದಲು ಕೆಟ್ಟ ದಿನಗಳು ಬಂದಿವೆ. ದುಡಿಯುವ ವರ್ಗದ ಮೇಲೆ ಜಿ.ಎಸ್.ಟಿ ದುಷ್ಪರಿಣಾಮ ಬೀರಲಿದೆ. ಇದರ ವಿರುದ್ಧ ದೇಶಾದ್ಯಂತ ಐಕ್ಯತೆಯ ಹೋರಾಟ ನಡೆಸಬೇಕಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ 10.74 ಲಕ್ಷ ಕಾರ್ಮಿಕರು ಇದ್ದಾರೆ. ರಾಜ್ಯದ 21 ಜಿಲ್ಲೆಗಳಲ್ಲಿ ಸಂಘಟನೆ ಸಕ್ರಿಯವಾಗಿದ್ದರೂ ದುರಂತವೆಂದರೆ ಚುನಾವಣೆ ಸಂದರ್ಭದಲ್ಲಿ ಓಟು ಬಂಡವಾಳಶಾಹಿ ಪರ ಇರುವ ಪಕ್ಷಗಳಿಗೆ ನೀಡುತ್ತೀರಿ. ಸವಲತ್ತಿಗಾಗಿ ಕಾನೂನು ಜಾರಿಗೊಸ್ಕರ ಬೀದಿಯಲ್ಲಿ ನಿಂತು ಹೋರಾಟ ನಡೆಸಲು ಸಿಐಟಿಯು ಸೇರಿದಂತೆ ಎಡಪಕ್ಷಗಳು ಬೇಕು. ಸವಲತ್ತು ಪಡೆಯುವ ಕಾರ್ಮಿಕರಾದ ನೀವು ಓಟನ್ನು ಮಾತ್ರ ಅನ್ಯರಿಗೆ ಚಲಾಯಿಸುತ್ತೀರಿ. ಪ್ರತಿ ಗ್ರಾಮದಲ್ಲಿಯೂ ಸಂಘಟಿತರಾಗಿರುವ ಕಟ್ಟಡ ಕಾರ್ಮಿಕರು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಬೇಕಾಗಿದೆ. ನಮ್ಮ ಹಕ್ಕುಗಳಿಗೋಸ್ಕರ ಇದು ಅನಿವಾರ್ಯವೆಂದು ದಿಬಂಜನ್ ಚಕ್ರವರ್ತಿ ಪ್ರತಿಪಾದಿಸಿದರು.

ಕಟ್ಟಡ ಉದ್ಯಮದ ವಿವಿಧ ಭಾಗಗಳಲ್ಲಿ ಶೇ. 51 ರಷ್ಟು ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಅಕುಶಲ ಕಾರ್ಮಿಕರಾದ ಇವರನ್ನು ಒಂದೆಡೆ ಮಾಲಿಕರು, ಗುತ್ತಿಗೆದಾರರು, ಮತ್ತು ನಮ್ಮ ಸಾಮಾಜಿಕ ವ್ಯವಸ್ಥೆ ತುಂಬಾ ಅಸಮಾನತೆ ಮತ್ತು ಶೋಷಣೆ ಕಣ್ಣೋಟದಿಂದಲೆ ನೋಡುತ್ತಾ ಬಂದಿದೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದರೂ ಹಲವು ಕುಶಲತೆ ಹೊಂದಿದ ಕೆಲಸಗಳಿಂದ ಅವರನ್ನು ಈ ಉದ್ಯಮದಲ್ಲಿ ದೂರವಿಟ್ಟು ಈ ಎಲ್ಲಾ ಗಂಡಸರ ಪಾರುಪತ್ಯವೇ ಹೆಚ್ಚಾಗಿದೆ. ಮನೆಯೊಳಗೂ ಮತ್ತು ಕೆಲಸ ಮಾಡುವ ಸ್ಥಳದಲ್ಲಿ ಮಹಿಳಾ ಕಾರ್ಮಿಕರಿಗೆ ಸಮಾನ ಅವಕಾಶ ಮತ್ತು ಸಮಾನ ವೇತನಗಳನ್ನು ನೀಡುತ್ತಿಲ್ಲ. ಸಾಮಾಜಿಕ ಸುರಕ್ಷತಾ ಸೌಲಭ್ಯಗಳನ್ನು ಕೂಡಾ ನೀಡುತ್ತಿಲ್ಲ. ಇದರ ಜೊತೆ ಗುತ್ತಿಗೆದಾರರು ಮತ್ತು ಮಾಲಕರು ಲೈಂಗಿಕ ಕಿರುಕುಳಗಳಿಗೂ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ಬಲಿಯಾಗುತ್ತಿದ್ದಾರೆ. ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ಮಕ್ಕಳ ಆರೈಕೆಗೆ ವಿಶ್ರಾಂತಿ ಗ್ರಹ ಇತ್ಯಾದಿಗಳು ಬಹುಪಾಲು ಇಲ್ಲವೇ ಇಲ್ಲ ಎಂದು ಹೇಳಿದರು.

CWFI ರಾಷ್ಟ್ರ ಅಧ್ಯಕ್ಷರಾದ ಸಿಂಗಾರವೇಲು ರವರು ಮುಖ್ಯ ಅತಿಥಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡುತ್ತಾ, ಸಿಐಟಿಯು ದೇಶದ್ಯಾಂತ 60 ಲಕ್ಷ ಸದಸ್ಯರನ್ನು ಹೊಂದಿರುವ ಬಲಿಷ್ಠ ಕಾರ್ಮಿಕ ಸಂಘಟನೆಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ CWFI ಸಂಘದ 12 ಲಕ್ಷದ ಸದಸ್ಯತ್ವ ನೊಂದಣಿಯಾಗಿದ್ದು, ಇದು ಒಟ್ಟು ಐದು ಸಿಐಟಿಯು ಸದಸ್ಯರಲ್ಲಿ ಒಬ್ಬ ಕಟ್ಟಡ ಕಾರ್ಮಿಕ. ಕೇರಳ ರಾಜ್ಯವೊಂದರಲ್ಲಿ 4.5 ಲಕ್ಷ ಕಟ್ಟಡ ಕಾರ್ಮಿಕರು ಸದಸ್ಯರಾಗಿದ್ದಾರೆ. ಕಣ್ಣೂರು ಜಿಲ್ಲೆವೊಂದರಲ್ಲಿ ಬಲಿಷ್ಠ ಸಂಘಟನೆಯಾಗಿ ಮೂಡಿಬಂದು, 50 ಸಾವಿರ ಕಟ್ಟಡ ಕಾರ್ಮಿಕರು ಸದಸ್ಯರಾಗಿದ್ದಾರೆ. ಇದು ಇಡೀ ಕರ್ನಾಟಕ ರಾಜ್ಯದ 30 ಸಾವಿರ ಸದಸ್ಯರಿಗಿಂತ ಅಧಿಕವಾಗಿದ್ದು, ಇದು ಕರ್ನಾಟಕದಲ್ಲಿ CWFI ಸಂಘಟನೆಯ ಸ್ಥಗಿತತೆ ಎದ್ದು ತೋರುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಇಡೀ ದೇಶದಲ್ಲಿ ಸುಮಾರು 32 ಸಾವಿರ ಕೋಟಿ ರೂಪಾಯಿ ಸೆಸ್ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿದ್ದರೆ ಕರ್ನಾಟಕ ರಾಜ್ಯದಲ್ಲಿ ಸುಮಾರು ರೂ. 5,650 ಕೋಟಿ ಸೆಸ್ ಕಲ್ಯಾಣ ಮಂಡಳಿಯಲ್ಲಿದ್ದರೂ ಕೇವಲ ರೂ. 177 ಕೋಟಿ ಮಾತ್ರ ಆಡಳಿತ ವೆಚ್ಚ ಹಾಗೂ ಕಾರ್ಮಿಕರ ವಿವಿಧ ಸೌಲಭ್ಯಕ್ಕಾಗಿ ವೆಚ್ಚವಾಗಿರುವುದು ಗಮನಿಸಬೇಕಾಗಿದೆ. ಸರಕಾರ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ಈ ಸೆಸ್ ನಿಧಿಯ ಮೇಲೆ ಕಣ್ಣಿಟ್ಟಿದ್ದು ಈ ಹಣವನ್ನು ಇತರ ವೆಚ್ಚಕ್ಕೆ ಬಳಸುವ ಪ್ರಯತ್ನವನ್ನು ತಡೆಯಬೇಕಾಗಿದೆ ಎಂದು ಹೇಳಿದರು.



CWFI ತೆಲಂಗಾಣ ರಾಜ್ಯ ಅಧ್ಯಕ್ಷ ಕೊಟ್ಟಂ ರಾಜು, ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹಂತೇಶ, ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಪಿ. ವಿಶ್ವನಾಥ ರೈ, ಸಮ್ಮೇಳನಕ್ಕೆ ಶುಭಾಶಯ ಕೋರಿ ಮಾತನಾಡಿದರು. CWFI ರಾಜ್ಯ ಅಧ್ಯಕ್ಷ ಎನ್. ವೀರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. CWFI ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಉಮೇಶ್, ಸ್ವಾಗತ ಸಮಿತಿಯ ಅಧ್ಯಕ್ಷ ಯು. ದಾಸಭಂಡಾರಿ, ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಕೋಶಾಧಿಕಾರಿ ಶೇಖರ ಬಂಗೇರ, ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷ ಎಚ್. ನರಸಿಂಹ, CWFI ರಾಜ್ಯ ಸಮಿತಿ ಪದಾಧಿಕಾರಿಗಳಾದ ಹರೀಶ್ ನಾಯ್ಕ ಉತ್ತರ ಕನ್ನಡ, ತಿಲಕ್ ಗೌಡ ಉತ್ತರ ಕನ್ನಡ, ಬಾಲಕೃಷ್ಣ ಶೆಟ್ಟಿ ಉಡುಪಿ, ರಾಮಕೃಷ್ಣ ಬೆಂಗಳೂರು, ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮ್ಮೇಳನದ 2ನೇ ದಿನದ ಕಲಾಪದ ಕೊನೆಯಲ್ಲಿ ಸಮಾರೋಪ ಸಮಾರಂಭದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡುತ್ತ, ದುಡಿಯುವ ಶ್ರಮ ಜೀವಿಗಳಲ್ಲಿ ಸುಮಾರು 3.5 ಕೋಟಿ ಅಂದರೆ ಶೇ. 16 ರಷ್ಟು ಜನರು ನಿರ್ಮಾಣ ಕ್ಷೇತ್ರದ ಅವಲಂಬನೆಯಲ್ಲಿ ಇದ್ದಾರೆ. ಕಟ್ಟಡ ಮತ್ತು ಇತರೇ ನಿರ್ಮಾಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಮಿಕರು ದೇಶದ ಅಭಿವೃದ್ಧಿಗೆ ಆರ್ಥಿಕ ಪ್ರಗತಿಗೆ ಪ್ರಮುಖ ಕೊಡುಗೆ ಕೊಡುತ್ತಿದ್ದಾರೆ. ಈ ವಲಯದ ದೇಶದ ಒಟ್ಟು ಆಂತರಿಕ ಉತ್ಪಾದನೆ ರೂ. 2.4 ಲಕ್ಷ ಕೋಟಿ ಆಗಿರುತ್ತದೆ. ಒಟ್ಟು ಉತ್ಪಾದನೆಯ (ಜಿಡಿಪಿ) ಶೇ. 11 ರಷ್ಟು ಕೊಡುಗೆ ಕೊಟ್ಟಿರುವ ಕಟ್ಟಡ ಕಾರ್ಮಿಕರಿಗೆ

ಪುಟ 10 ಕ್ಕೆ



ಎನ್. ವೀರಸ್ವಾಮಿ
ಅಧ್ಯಕ್ಷರು



ಕೆ. ಮಹಂತೇಶ
ಪ್ರಧಾನ ಕಾರ್ಯದರ್ಶಿ



ಸುರೇಶ್ ಕಲ್ಲಾಗರ
ಖಜಾಂಚಿ











ಬೆವರು ಹರಿಸಿ ಸಿರಿ ಹೆಚ್ಚಿಸಿದ ಉದ್ಯೋಗ ಖಾತ್ರಿ

ಮಂಡ್ಯ ಜಿಲ್ಲೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಅನುಭವಗಳು


ಸತ್ಯಾ ಎಸ್.

ಅದು 2008ರ ಸಮಯ. ರಾಜ್ಯದಲ್ಲಿ ಉದ್ಯೋಗ ಖಾತ್ರಿ ಕಾಯಿದೆ ಅನುಷ್ಠಾನಗೊಂಡ ಹೊಸತು. ಮಳವಳ್ಳಿಯ ನೆಲಮಾಕನಹಳ್ಳಿಯಲ್ಲಿ ಈ ಕಾಯಿದೆಯನ್ನು ಜಾರಿಗೆ ತರಲು ಜನವಾದಿ ಮಹಿಳಾ ಸಂಘಟನೆಯು ಜನರನ್ನು ಪ್ರೇರೇಪಿಸಿ, ಅವರಿಗೆಲ್ಲ ಉದ್ಯೋಗ ಚೀಟಿ ಮತ್ತು ಬ್ಯಾಂಕ್ ಖಾತೆ ಮಾಡಿಸಿಕೊಟ್ಟು, ಗ್ರಾಮ ಪಂಚಾಯತಿಯನ್ನು ಆಗ್ರಹಿಸಿ ಕೆಲಸವನ್ನು ಪಡೆಯಲಾಯಿತು. ಸುಮಾರು 80 ಜನ ಮಹಿಳೆಯರು ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಈ ಸುದ್ದಿ ಊರಲ್ಲೆಲ್ಲ ಗೊತ್ತಾಗಿದ್ದೇ ತಡ, ಊರಿನ ಗುತ್ತಿಗೆದಾರರು, ಜಮೀನುದಾರರು ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಹೌಹಾರಿದರು. ತಮ್ಮ ಹೊಲದ ಕೆಲಸಕ್ಕೆ 30–40 ರೂಪಾಯಿ ಕೂಲಿ ಕೊಡುತ್ತಿದ್ದ ಜಮೀನುದಾರರಿಗೆ, ಕೆಲಸಗಾರರರು ಉದ್ಯೋಗ ಖಾತ್ರಿಯಲ್ಲಿ ಒಮ್ಮೆಲೆ 82 ರೂಪಾಯಿ ಪಡೆದುಕೊಂಡು ಬಿಟ್ಟರೆ ತಮ್ಮಲ್ಲಿಗೆ ಕೆಲಸಕ್ಕೆ ಬರುತ್ತಾರಾ? ಇನ್ನು ತಾವೂ ಕೂಲಿ ಜಾಸ್ತಿ ಕೊಡಬೇಕಾಗುತ್ತಲ್ಲಾ ಎಂಬ ಚಿಂತೆ ಹತ್ತಿತು. ಗುತ್ತಿಗೆದಾರರಿಗೆ, ಕೆಲಸ ತಮ್ಮ ಕೈ ತಪ್ಪುವ ಚಿಂತೆ. ಹೀಗಾಗಿ ಅವರೆಲ್ಲ ಕೆಲಸಕ್ಕೆ ಅರ್ಜಿ ಹಾಕಿದ್ದ ಕೆಲಸಗಾರ ಮಹಿಳೆಯರನ್ನು ಕೆಲಸಕ್ಕೆ ಹೋಗದಂತೆ ತಡೆದರು. 'ನೀವು ಅಲ್ಲಿ ಕೆಲಸಕ್ಕೆ ಹೋದರೆ ಚರಂಡಿ ಗೋರಬೇಕಾಗುತ್ತೆ' ಎಂದು ಸುಳ್ಳು ಸುದ್ದಿ ಹಬ್ಬಿಸಿದರು. ಇನ್ನೇನು ನಾಳೆ ಬೆಳಗ್ಗೆ ಉದ್ಯೋಗ ಖಾತ್ರಿಯ ಕಾಮಗಾರಿ ಆರಂಭವಾಗಬೇಕು ಎನ್ನುವಾಗ ಎಲ್ಲ ಮಹಿಳೆಯರು ಹಿಂದೆ ಸರಿದುಬಿಟ್ಟರು. ಎಷ್ಟು ತಿಳಿಸಿ ಹೇಳಿದರೂ ಕೆಲಸಕ್ಕೆ ಬರಲಿಲ್ಲ.

ಸರಿ. ಕೆಲಸಗಾರರಿಗೆ ಸರಿಯಾದ ತಿಳುವಳಿಕೆ ಮೂಡಿಸಲು ಹಾಗೂ ಹಳ್ಳಿಯ ಪಟ್ಟಭದ್ರ ಶಕ್ತಿಗಳಿಗೆ ಚುರುಕು ಮುಟ್ಟಿಸಲು ಸಂಘಟನೆಯವರು ತಮ್ಮ ತಮ್ಮ ಮನೆಯ ಸದಸ್ಯರೇ ಮುಂದೆ ನಿಂತು ಕೆಲಸ ಮಾಡಿ ತೋರಿಸುವುದು ಎಂದು ನಿರ್ಧರಿಸಿದರು. ಅದರಂತೆ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಪದಾಧಿಕಾರಿಗಳಾದ ದೇವಿ ಮತ್ತು ಸುಶೀಲ ಹಾಗೂ ಅವರ ಕುಟುಂಬದ 10–15 ಸದಸ್ಯರು ಒಂದು ತಂಡವಾಗಿ ನಿಂತು 8 ದಿನಗಳಲ್ಲಿ ಒಂದು ಕಾಲುವೆಯ ಹೂಳೆತ್ತಿದರು. ಈ ಕೆಲಸಕ್ಕೆ ಅವರಿಗೆ ಮಜೂರಿಯೂ ಬಂತು. ಇದಾದ ಮೇಲೆ ಜನರಿಗೆ ಈ ಕೆಲಸದಲ್ಲಿ ನಂಬಿಕೆ ಬಂತು. ಮರುದಿನದಿಂದಲೇ 50–60 ಜನ ಕೆಲಸಗಾರರು ಬಂದರು. ಕೆರೆ, ಕಟ್ಟೆ, ಕಾಲುವೆಗಳ ಹೂಳೆತ್ತುವುದು, ರಸ್ತೆ ನಿರ್ಮಾಣ, ಸ್ಮಶಾನ ಅಭಿವೃದ್ಧಿ, ಶಾಲಾ ಮೈದಾನ ಅಭಿವೃದ್ಧಿ, ಚರಂಡಿಗಳ ನಿರ್ಮಾಣ, ಇತ್ಯಾದಿ ಹತ್ತಾರು ಕಾಮಗಾರಿಗಳನ್ನು ಮಾಡಿದರು. ಉದ್ಯೋಗ ಖಾತ್ರಿ ಯೋಜನೆಯನ್ನು ಬಳಸಿಕೊಂಡು ಊರಿನ ಮೂಲಭೂತ ಸೌಲಭ್ಯಗಳನ್ನು ಸಾಕಷ್ಟು ಅಭಿವೃದ್ಧಿಪಡಿಸಿದರು. ನೆಲಮಾಕನಹಳ್ಳಿ ಗ್ರಾಮದಲ್ಲಿ ಅಂದು ಆರಂಭವಾದ ಉದ್ಯೋಗ ಖಾತ್ರಿಯ ಕೆಲಸ ಇಂದಿಗೂ ನಿರಂತರವಾಗಿ ನಡೆಯುತ್ತಿದೆ. ಹಾಗೂ ಅಲ್ಲಿಂದ ಮಳವಳ್ಳಿ ತಾಲ್ಲೂಕಿನ 24 ಗ್ರಾಮ ಪಂಚಾಯತಿಗಳಿಗೆ ಮತ್ತು ಮದ್ದೂರು, ಮಂಡ್ಯ ಹಾಗೂ ನಾಗಮಂಗಲ ತಾಲ್ಲೂಕುಗಳಿಗೂ ಹರಡಿಕೊಂಡಿದೆ.

ಈ ಹರಡಿಕೊಳ್ಳುವಿಕೆ ಸುಲಭವಾಗಿರಲಿಲ್ಲ. ಹೆಜ್ಜೆ ಹೆಜ್ಜೆಗೂ ಅಡ್ಡಿಗಳು. ಪುರುಷಾಹಂಕಾರದ ತೊಡಕುಗಳು. ಆಡಳಿತ ವರ್ಗದ ನಿರ್ಲಕ್ಷ್ಯ, ಅಸಹಕಾರ ಅನೇಕ ಸಮಸ್ಯೆಗಳನ್ನು ತಂದೊಡ್ಡಿದವು. ಉದ್ಯೋಗದ ಹಕ್ಕಿನ ಬಗ್ಗೆ, ಕೆಲಸದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಅವಕಾಶ ಕೊಡದಂತೆ ನಿರ್ಬಂಧ ಒಡ್ಡುವುದು, ಕೆಲಸಗಾರರನ್ನು ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗದಂತೆ ತಡೆ ಒಡ್ಡುವುದು, ಬೆದರಿಕೆ ಹಾಕುವುದು, ಉದ್ಯೋಗ ಖಾತ್ರಿಯ ಕೆಲಸ ನೀಚ ಕೆಲಸ ಎಂಬ ಸುಳ್ಳು ಸುದ್ಧಿ ಹರಡುವುದು, ಕೂಲಿ ಬರುವುದಿಲ್ಲ, ಕಡಿಮೆ ಕೂಲಿ ಕೊಡುತ್ತಾರೆ, ಸರಕಾರ ಈ ಯೋಜನೆಯನ್ನೇ ನಿಲ್ಲಿಸಿ ಬಿಡುತ್ತದೆ ಎಂಬ ಸುಳ್ಳುಗಳನ್ನು ಹೇಳುವುದು; ಉದ್ಯೋಗ ಖಾತ್ರಿ ಕೆಲಸ ಮಾಡಿಸುತ್ತಿದ್ದ ಮಹಿಳೆಯರ ಮೇಲೆ ದೈಹಿಕ ಹಾಗೂ ಮಾನಸಿಕ ಹಲ್ಲೆಗಳನ್ನು ನಡೆಸುವುದು, ನೂರಾರು ಜನರ ಉದ್ಯೋಗ ಚೀಟಿಗಳನ್ನು ಕಬ್ಜಾ ಮಾಡಿಕೊಂಡು ಅವರ ಹೆಸರಿನಲ್ಲಿ ದುಡ್ಡು ಹೊಡೆಯುವುದು, ಯಂತ್ರಗಳಲ್ಲಿ ಕೆಲಸ ಮಾಡಿಸಿ ದುಡ್ಡು ಹೊಡೆಯುವುದು... ಹೀಗೆ ಊರಿನ ಪಟ್ಟಭದ್ರ ಹಿತಾಸಕ್ತಿಗಳು ಸ್ವಹಿತಾಸಕ್ತಿಯನ್ನು ಮೆರೆದವು.

ಉದ್ಯೋಗ ಖಾತ್ರಿ ಕಾಯಿದೆಯನ್ನು ಜಾರಿ ಮಾಡಬೇಕಾದ ನೇರ ಜವಾಬ್ದಾರಿ ಇರುವ ಗ್ರಾಮ ಪಂಚಾಯತಿಗಳು ಉದ್ಯೋಗ ಚೀಟಿ ಮಾಡಿಕೊಡದಿರುವುದು, ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲು ಅಡ್ಡಿಗಳು; ಕೆಲಸಕ್ಕೆ ಅರ್ಜಿ ತೆಗೆದುಕೊಳ್ಳದಿರುವುದು, ಅರ್ಜಿ ತೆಗೆದುಕೊಂಡರೂ ಮುಗ್ಧ ಜನರಿಗೆ ಸ್ವೀಕೃತಿ ಪತ್ರ ಕೊಡದೆ ವಂಚನೆ ಮಾಡುವುದು; ಗಟ್ಟಿ ನೆಲದಲ್ಲಿ ಕೆಲಸ ಕೊಡುವುದು, ತಪ್ಪು ಅಳತೆಯ ಕೆಲಸ ಕೊಡುವುದು, ಕೂಲಿ ಮೊತ್ತ ತಪ್ಪು ಬರೆಯುವುದು, ಕೆಲಸದ ಸ್ಥಳದಲ್ಲಿ ಯಾವುದೇ ಸೌಲಭ್ಯ ಒದಗಿಸದೆ ಇರುವುದು, ಇತ್ಯಾದಿ ಸಮಸ್ಯೆಗಳು ಅಲ್ಲಿಂದಲೂ ಉದ್ಭವಿಸಿದವು.



ಆದರೆ ಎದುರಾದ ಪ್ರತಿ ತಡೆಯನ್ನೂ ಸವಾಲೆಂದು ಸ್ವೀಕರಿಸಿದ ಜನವಾದಿಯ ಸಂಗಾತಿಗಳು ಒಂದೊಂದು ಸಮಸ್ಯೆಯನ್ನೂ ಪರಿಹರಿಸಿಕೊಳ್ಳುತ್ತಾ ಮುಂದೆ ಸಾಗಿದರು. ತಡೆ ಒಡ್ಡುವವರನ್ನು ಎದುರು ಹಾಕಿಕೊಳ್ಳುವುದಕ್ಕಿಂತಲೂ ಜನರ ತಿಳುವಳಿಕೆಯನ್ನು ಹೆಚ್ಚಿಸಿ, ಅವರ ಹಕ್ಕನ್ನು ಅವರು ಪಡೆದುಕೊಳ್ಳುವಂತೆ ಸಜ್ಜುಗೊಳಿಸಿದರು. ಮೂರು ವರ್ಷಗಳಿಂದ ಕಾಡುತ್ತಿದ್ದ ಬರಗಾಲ ಜನರಿಗೆ ತೀವ್ರ ಸಂಕಷ್ಟ ತಂದೊಡ್ಡಿತ್ತು. ಕೆಲಸ ಇಲ್ಲದೆ ಕಂಗಾಲಾಗಿದ್ದ ಜನರಿಗೆ ಕೆಲಸ ಎಷ್ಟು ಮುಖ್ಯವಾಗಿತ್ತೆಂದರೆ ಊರಿನ ಪಟ್ಟಭದ್ರ ಹಿತಾಸಕ್ತಿಗಳ ಚಿತಾವಣೆ ಸುಲಭವಾಗಿ ಅರ್ಥವಾಯಿತು. ಕೆಲಸಕ್ಕೆ ಅಡ್ಡಿಪಡಿಸುವ ಪಟ್ಟಭದ್ರರನ್ನು ಜನರೇ ಎದುರಿಸತೊಡಗಿದರು. ನೆಲಮಾಕನಹಳ್ಳಿಯ ಕೆಂಪಣ್ಣನ ಕಟ್ಟೆ ಹೂಳೆತ್ತುವ ಕೆಲಸ ನಡೆಯುತ್ತಿತ್ತು. ಊರಿನ ಗುತ್ತಿಗೆದಾರರು ಅದು ತಮ್ಮ ಕೆಲಸ ಎಂದು ಜೆಸಿಬಿ ತಂದು ಕಟ್ಟೆ ಅಂಗಳದಲ್ಲಿ ನಿಲ್ಲಿಸಿಬಿಟ್ಟರು. ಕೆಲಸಗಾರರಿಗೆ ರೋಸಿ ಹೋಯಿತು. ಜೆಸಿಬಿ ಯಂತ್ರಕ್ಕೆ ಅಡ್ಡ ನಿಂತು ಹೇಳಿದರು, 'ಇದು ಉದ್ಯೋಗ ಖಾತ್ರಿ ಕೆಲಸ, ಇಲ್ಲಿ ಯಂತ್ರಗಳಿಗೆ ಅವಕಾಶ ಇಲ್ಲ'. ಗ್ರಾಮ ಪಂಚಾಯತಿಯ ಅಧ್ಯಕ್ಷರೂ ಗುತ್ತಿಗೆದಾರನ ಪರವಾಗಿ ನಿಂತರು. ಗ್ರಾಮ ಪಂಚಾಯತಿಯ ವಿಶೇಷ ಸಭೆಯೂ ನಡೆಯಿತು. ಅಧ್ಯಕ್ಷ ಜನರ ಪರವಾಗಿಲ್ಲ ಎಂದು ತಿಳಿದ ಜನ ಪಂಚಾಯತಿ ಕಚೇರಿಗೆ ಮುತ್ತಿಗೆ ಹಾಕಿ, ಕೊನೆಗೂ ತಮ್ಮ ಕೆಲಸ ಉಳಿಸಿಕೊಂಡರು.

ಕೂಳಗೆರೆ ಮತ್ತು ಕೆ. ಬೆಳ್ಳೂರು ಗ್ರಾಮ ಪಂಚಾಯತಿಗಳಲ್ಲಿ ಕಾರ್ಮಿಕ ಬಂಧುಗಳಾದ ಯಶೋಧ ಮತ್ತು ಸುವರ್ಣ ಅವರುಗಳನ್ನು ಅವಹೇಳನ ಮಾಡುವುದು, ಊರಲ್ಲಿ ಅವಮಾನಿಸುವುದು ಕೊನೆಗೆ ದೈಹಿಕ ಹಲ್ಲೆ ನಡೆಸುವವರೆಗೆ ಹೋದರು. ಆದರೆ ಈ ಹೆಣ್ಣು ಮಕ್ಕಳು ಅದ್ಯಾವುದಕ್ಕೂ ಜಗ್ಗದೆ ಗಟ್ಟಿ ನಿಂತರು. ಜನವಾದಿ ಮಹಿಳಾ ಸಂಘಟನೆಯೂ ಈ ಮಹಿಳೆಯರಿಗೆ ಬೆಂಬಲ ನೀಡಿತು.

ಉದ್ಯೋಗ ಖಾತ್ರಿಯ ಕೆಲಸಕ್ಕಾಗಿ ಜನವಾದಿ ಮಹಿಳಾ ಸಂಘಟನೆ ಹಮ್ಮಿಕೊಂಡ ಪ್ರಚಾರ ಕಾರ್ಯಕ್ರಮಗಳು, ಹೋರಾಟಗಳು ಹಾಗೂ ಸಭೆಗಳು ಮಹಿಳೆಯರ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿತು. ಕೇವಲ ಉದ್ಯೋಗದ ಹಕ್ಕಲ್ಲದೆ ಇತರೆ ಸಾಮಾಜಿಕ ವಿಚಾರಗಳನ್ನೂ ಚರ್ಚೆ ಮಾಡಲು ಆರಂಭಿಸಿದರು. ಇದರಿಂದಾಗಿ ಗುಳಘಟ್ಟ, ದುಗ್ಗನಹಳ್ಳಿ, ಮೊದಲಾದ ಕಡೆಗಳಲ್ಲಿ ಹೆಣ್ಣು ಮಕ್ಕಳು ಮದ್ಯಪಾನ ವಿರೋಧಿ ಆಂದೋಲನ ನಡೆಸಿ, ತಮ್ಮ ಊರುಗಳಲ್ಲಿ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಿದ್ದಾರೆ. ತಮ್ಮ ಊರಿನ ಮಹಿಳೆಯರಿಗೆ ವಿಧವಾ ವೇತನ, ವೃದ್ಧಾಪ್ಯ ವೇತನ, ಮಕ್ಕಳಿಗೆ ವಿದ್ಯಾರ್ಥಿ ವೇತನ ಇತ್ಯಾದಿ ಸಮಾಜ ಕಲ್ಯಾಣ ಸೌಲಭ್ಯಗಳನ್ನು ಮಾಡಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ, ತಮ್ಮ ಹೋರಾಟಗಳು ಗ್ರಾಮ ಪಂಚಾಯತಿಯ ಒಳಗೆ ನಡೆಯಬೇಕು, ಅದಕ್ಕಾಗಿ ತಾವು ಪಂಚಾಯತಿಯ ಸದಸ್ಯರಾಗಬೇಕು ಎಂದು ತಿಳಿವು ಬಂದು 2015ರ ಪಂಚಾಯತಿ ಚುನಾವಣೆಯಲ್ಲಿ 7 ಜನ ಮಹಿಳೆಯರು, ಜನವಾದಿ ಮಹಿಳಾ ಸಂಘಟನೆ ಮತ್ತು ಉದ್ಯೋಗ ಖಾತ್ರಿ ಕೆಲಸದಿಂದ ಅರಿವು ಬಂದ ಮಹಿಳೆಯರು, ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಗೆದ್ದವರು ಕೆಲವರಾದರೂ, ಸ್ಪರ್ಧಿಸಿದ್ದ ಎಲ್ಲರೂ ಉತ್ತಮ ಸ್ಪರ್ಧೆ ಒಡ್ಡಿದ್ದರು. ಕೆಲವೇ ಮತಗಳ ಅಂತರದಲ್ಲಿ ಸೋತರು. ಹಾಗೂ ಊರಿನಲ್ಲಿ ಅದುವರೆಗೂ ಇದ್ದ ಚುನಾವಣೆ ರಾಜಕೀಯದ ನಿಯಮಗಳನ್ನು ಪಲ್ಲಟಗೊಳಿಸಿದರು. ಊರಿನ ರಾಜಕೀಯ ಮುಖಂಡರು, ತೆಂಡೆ ನಾಯಕರು, ಜಮೀನ್ದಾರರ ಆಶೀರ್ವಾದ ಇಲ್ಲದೆ ಚುನಾವಣೆಯಲ್ಲಿ ಸ್ಪರ್ಧಿಸಲೂ ಆಗುವುದಿಲ್ಲ ಎಂಬ ಜನರ ತಿಳುವಳಿಕೆಗೆ ಪ್ರತಿಯಾಗಿ ಈ ಹೆಣ್ಣು ಮಕ್ಕಳು ಕೇವಲ ತಮ್ಮ ಕೆಲಸದ ಬಲದಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಇವರು ಸೋತ ಮೇಲೆಯೂ ಮಾಡುತ್ತಿರುವ ಜನಪರ ಕೆಲಸದಿಂದಾಗಿ ಈಗ ಆವರ ಊರಿನ ಎಲ್ಲ ಮಹಿಳೆಯರು ಮುಂದಿನ ಚುನಾವಣೆಯಲ್ಲಿ ಇವರನ್ನೇ ಗೆಲ್ಲಿಸಬೇಕೆಂಬ ನಿರ್ಧಾರ ಮಾಡಿದ್ದಾರೆ.

'ಸಮಾನ ಕೆಲಸಕ್ಕೆ ಸಮಾನ ಕೂಲಿ' ಎನ್ನುವ ತತ್ತ್ವ ಕೆಲಸಗಾರ ಮಹಿಳೆಯರ ಆತ್ಮವಿಶ್ವಾಸವನ್ನು, ಆರ್ಥಿಕ ಬಲವನ್ನು, ಸಾಮಾಜಿಕ ಸ್ಥಾನ–ಮಾನವನ್ನು ಹೆಚ್ಚಿಸಿದೆ. ಗಂಡಸರಿಗಿಂತ ಹೆಚ್ಚು ಕೆಲಸ ಮಾಡಿದರೂ ಕೂಡ, ಅವರಿಗಿಂತ ಕಡಿಮೆ ಕೂಲಿ ಪಡೆಯುತ್ತಿದ್ದ ಮಹಿಳೆಯರಿಗೆ ಸಮಾನ ಕೂಲಿ ಸಿಗುತ್ತಿರುವುದು ಅಪಾರ ಸಂತಸ ನೀಡಿದೆ. 'ಎಲ್ಲಿ ಹೋಗಿ, ಎಷ್ಟು ದುಡುದ್ರೂ ಗಂಡಸರಿಗಿಂತ ನಮಗೆ ಕಡಿಮೆ ಕೂಲಿ ಕೊಡೋರು. ಜಾಸ್ತಿ ಕೊಡಿ ಅಂತ ಕೇಳಿದ್ರೆ, ನೀನೇನು ಗಂಡಸಾ ಅನ್ನೋರು. ಮೈಯೆಲ್ಲಾ ಉರಿದು ಹೋಗೋದು. ಆದ್ರೆ, ಏನೂ ಮಾಡಲು ಆಗ್ತಿರಲಿಲ್ಲ. ಈಗ ಸಮಾನ ಕೂಲಿ ಅಂದಾಗ ತುಂಬಾ ಖುಷಿ ಆಯ್ತು' ಎನ್ನುತ್ತಾರೆ ದೇವಮ್ಮ. ಮಹಿಳೆಯರಿಗೆ ಆತ್ಮ ಸ್ಥೈರ್ಯ ಹೆಚ್ಚಿಸಿದ ಇದೇ ವಿಷಯ ಗಂಡಸರಿಗೆ ಅಸಮಾಧಾನ ಮೂಡಿಸಿದೆ. ಹೆಂಗುಸ್ರುಗೂ, ನಮ್ಗೂ ಒಂದೇ ಕೂಲಿ ಕೊಟ್ರೆ ಕೆಲಸಕ್ಕೆ ಬರಲ್ಲ ಅಂತ ಕುಳಿತಿರುವ ಗಂಡಸರು, 50 ರೂಪಾಯಾದ್ರೂ ಜಾಸ್ತಿ ಮಾಡ್ಸಿ ಅಂತಿದ್ದಾರೆ. ಜನವಾದಿ ಮಹಿಳಾ ಸಂಘಟನೆಯ ಮೂಲಕ ಕೆಲಸ ನಡೆಯುತ್ತಿರುವ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಶೇ.80 ರಷ್ಟು ಉದ್ಯೋಗ ಖಾತ್ರಿ ಕೆಲಸಗಾರರು ಹೆಂಗಸರು. ಇವರು ಉದ್ಯೋಗ ಖಾತ್ರಿಯ ಕೆಲಸ, ಮನೆಯಲ್ಲಿ ಪಶುಸಂಗೋಪನೆ ಮಾಡಿಕೊಂಡು ಇನ್ನೂ ಉಳಿಯುವ ಸಮಯದಲ್ಲಿ ಹೊಲದ ಕೂಲಿ ಕೆಲಸಕ್ಕೂ ಹೋಗುತ್ತಿದ್ದಾರೆ. ಸಮಾನ ಕೆಲಸದ ತತ್ತ್ವವನ್ನೂ ಅಹಂ ಪ್ರಶ್ನೆ ಮಾಡಿಕೊಂಡಿರುವ ಗಂಡಸರು, ಹೆಂಗಸರು ಹಾರೆ ಹಿಡಿದು ಕೆಲಸ ಮಾಡುವುದು ತಮಗೆ ಅವಮಾನ ಎಂದು ಗೊಣಗುತ್ತಾ ಇದ್ದಾರೆ. ಆದರೆ ಇದಾವ ಗೊಣಗಾಟಕ್ಕೂ ಸೊಪ್ಪು ಹಾಕದ ಮಹಿಳೆಯರು ಉದ್ಯೋಗ ಖಾತ್ರಿಯ ಕೆಲಸದ ಅಂಗಳದಲ್ಲಿ ತಮ್ಮ ಬೆವರು ಹರಿಸಿ, ನೆಲದ ಸಿರಿ ಹೆಚ್ಚಿಸುತ್ತಿದ್ದಾರೆ.

ಇಂತಹ ನೂರಾರು ಅನುಭವಗಳನ್ನು ಸಂಗ್ರಹಿಸಿ 'ನೆಲದ ಸಿರಿ' ಎನ್ನುವ ಪುಸ್ತಕವನ್ನೂ ಪ್ರಕಟಿಸಿದೆ ಜನವಾದಿ ಮಹಿಳಾ ಸಂಘಟನೆ. ಉದ್ಯೋಗ ಖಾತ್ರಿ ಕಾಯಿದೆಯ ಅನುಷ್ಠಾನದಲ್ಲಿ ಇದುವರೆಗೆ ಆಗಿರುವ ಅನುಭವಗಳನ್ನು ಸಂಘಟನೆಯ ಸಂಗಾತಿಗಳು ಮತ್ತು ಕೆಲಸಗಾರರ ಮಾತುಗಳಲ್ಲಿ ದಾಖಲಿಸಿರುವ ಈ ಪುಸ್ತಕ ಶ್ರಮ ಸಂಸ್ಕೃತಿಯ ದಾಖಲಾತಿಯಲ್ಲಿ ಬಹು ಅಪರೂಪದ ಕೊಡುಗೆ ಎನ್ನಬಹುದು. ಅನುಭವಗಳ ಜೊತೆಗೆ, ಕಾಯಿದೆಯ ಮುಖ್ಯ ಅಂಶಗಳನ್ನು, ಗ್ರಾಮ ಪಂಚಾಯತಿ ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು, ಹಾಗೂ ಯೋಜನೆಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ವಿವರವಾದ ಪಟ್ಟಿಯನ್ನೂ ನೀಡಲಾಗಿದೆ. ಉದ್ಯೋಗ ಖಾತ್ರಿ ಕಾಯಿದೆಯ ಅನುಷ್ಠಾನದಲ್ಲಿ ತೊಡಗಿಸಿಕೊಂಡಿರುವವರಿಗೆ ಕೈಪಿಡಿಯಂತಿದೆ ಈ ಪುಸ್ತಕ.



ದ್ಯಾವನಕೊಂಡ ಗ್ರಾಮಕ್ಕೆ ಸಿಪಿಐ(ಎಂ) ನಿಯೋಗದ ಭೇಟಿ

ಕಲಘಟಗಿ ತಾಲೂಕಿನ ದ್ಯಾವನಕೊಂಡ ಗ್ರಾಮದಲ್ಲಿ ಇತ್ತೀಚಿಗೆ ದಲಿತರಿಗೆ ಸಾರ್ವಜನಿಕ ಬಹಿಷ್ಕಾರ ಹಾಕಿದ ಸಮಸ್ಯೆಗೆ ಸಂಭಂದಿಸಿದಂತೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಷವಾದಿ) ಧಾರವಾಡ ಜಿಲ್ಲಾ ಸಮಿತಿಯ ಒಂದು ನಿಯೋಗವು ಆ ಗ್ರಾಮಕ್ಕೆ ದಿ. 05.07.2017 ರಂದು ಬೇಟಿ ನೀಡಿದ್ದು, ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ ಒಳಗೊಂಡಂತೆ ಜಿಲ್ಲಾ ಸಮಿತಿ ಸದಸ್ಯರಾದ ಆರ್.ಎಚ್. ಆಯಿ ಮತ್ತು ಬಿ.ಆಯ್. ಈಳಿಗೇರ ಅವರು ನಿಯೋಗದಲ್ಲಿ ಇದ್ದರು. ಮೊದಲು ಗ್ರಾಮದಲ್ಲಿ ನಿಯೋಗವು ದಲಿತರನ್ನು ಅವರು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿಯೇ ಭೇಟ್ಟಿಯಾಯಿತು. ಸಮಸ್ಯೆಯ ಮೂಲ ಏನೆಂದು ವಿಚಾರಿಸಲಾಗಿ ಅತ್ಯಂತ ಒಂದು ಸಣ್ಣ ಘಟನೆ ಈ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿದೆ. ದುರ್ಗಾದೇವಿ ಹೆಸರಲ್ಲಿ ಇರುವ ಬಸವಿ ಆಕಳು ಕರುವನ್ನು ಪಡೆದದ್ದನ್ನು ಕಂಡ ದಲಿತನೊಬ್ಬ ಅದನ್ನು ಪ್ರಶ್ನಿಸಿದ್ದು, ಅದೇ ಕಾರಣಕ್ಕೆ ದಲಿತರಿಗೆ ಬಹಿಷ್ಕಾರ ಹಾಕಿದ್ದು ಘಟನೆಗೆ ಕಾರಣವಾಗಿದೆ. ಇದರಿಂದಾಗಿ ಅಲ್ಲಿಯ ದಲಿತರು ಭಯಗೊಂಡರು. ಬಹಿಷ್ಕಾರದಂತ ಕ್ರಮ ಅವಮಾನವೀಯ ಕ್ರಮವಾಗುತ್ತದೆ. ನಿಯೋಗವು ದಲಿತರ ಸದ್ಯದ ಸ್ಥಿತಿಗತಿ ಅವರಿಗೆ ಕೆಲಸದ ಲಭ್ಯತೆ ಬಗ್ಗೆಯೂ ಕೂಡ ವಿಚಾರಿಸಿ ಅವರಿಗೆ ಸಹಾನುಭೂತಿ ಹೇಳುತ್ತಲೆ ಅವರ ಕೆಲವು ಸಮಸ್ಯೆಗಳನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಪರಿಹರಿಸುವ ಭರವಸೆಯನ್ನು ನೀಡಿತು. ನಂತರ ಗ್ರಾಮದ ಕೆಲವು ಸವರ್ಣೀಯರ ಹಿರಿಯರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಸೌಹಾರ್ದ ವಾತಾವರಣಕ್ಕೆ ಒತ್ತಾಯಿಸಲಾಯಿತು. ಒಂದು ಜನ ಸಮುದಾಯವನ್ನು ಬಹಿಷ್ಕಾರದ ಹೆಸರಿನಲ್ಲಿ ದೂರ ಇಡುವುದು ಅಪಮಾನಕರ ಎಂಬ ಮಾತನ್ನು ಅವರ ಗಮನಕ್ಕೆ ತರಲಾಯಿತು. ನಂತರ ನಿಯೋಗದ ಸದಸ್ಯರು ತಹಶೀಲ್ದಾರರನ್ನು ಭೆಟ್ಟಿಯಾಗಲು ಪ್ರಯತ್ನಿಸಿದರು ಆದರೆ ಅಂದು ಆರ್.ಟಿ.ಎಸ್. ಪ್ರಕರಣಗಳ ವಿಚಾರಣೆ ಇದ್ದ ಪ್ರಯುಕ್ತ ಸಾಧ್ಯವಾಗದೇ ಉಪತಹಶೀಲ್ದಾರರೊಂದಿಗೆ ದ್ಯಾವನಕೊಂಡ ಗ್ರಾಮದ ದಲಿತರ ಕೆಲವು ಬೇಡಿಕೆಗಳಾದ ರೇಶನ್ ಕಾರ್ಡ ಮತ್ತಿತರ ಸಮಸ್ಯೆಗಳನ್ನು ಬಗೆಹರಿಸುವಂತೆ ವಿನಂತಿಸಲಾಯಿತು.



ಬಿಎಸ್. ಸೊಪಿನ್

ಜನಶಕ್ತಿ ಉತ್ಸವ ಮತ್ತು ಪ್ರಸಾರಾಂದೋಲನ 2017

ಕಳೆದ 3 ವರ್ಷಗಳಂತೆ ಈ ವರ್ಷವೂ "ಜನಶಕ್ತಿ ಉತ್ಸವ"ವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನಶಕ್ತಿ ಪತ್ರಿಕೆಯನ್ನು ದುಡಿಯುವ ಜನರ ಚಳುವಳಿಯ ಒಳಗೂ/ ಹೊರಗೂ ಇನ್ನಷ್ಟು ಹೆಚ್ಚಿನ ಜನವಿಭಾಗಗಳಿಗೆ ಪರಿಚಯಿಸುವುದು, ವ್ಯಾಪಕವಾಗಿ ತೆಗೆದುಕೊಂಡು ಹೋಗುವುದು, ಜನಪ್ರಿಯಗೊಳಿಸುವುದು 'ಜನಶಕ್ತಿ ಉತ್ಸವ'ದ ಪ್ರಮುಖ ಗುರಿ. ಈ ವರ್ಷ ಈ ಕೆಳಗಿನ ಕೆಲವು ಹೊಸ ಅಂಶಗಳನ್ನು ಒಳಗೊಂಡ "ಜನಶಕ್ತಿ ಉತ್ಸವ ಮತ್ತು ಪ್ರಚಾರಾಂದೋಲನ 2017" ಜುಲೈ–ಅಗಸ್ಟ್ ನಲ್ಲಿ ನಡೆಯಲಿದೆ.

- "ಜನಶಕ್ತಿ ಉತ್ಸವ 2017"ರ ಒಟ್ಟಾರೆ ಥೀಮ್ "ಇಂಡಿಯಾ 70 : ಸಾಧನೆಗಳು, ಸವಾಲುಗಳು"
- ಅಗಸ್ಟ್ 19 (ಶನಿವಾರ) ರಂದು ಬೆಂಗಳೂರಲ್ಲಿ "ಜನಶಕ್ತಿ ಉತ್ಸವ 2017" ಉತ್ಸವ ನಡೆಯಲಿದೆ. ಕಾ. ಬೃಂದಾ ಕಾರಟ್ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ.
- ಉತ್ಸವದಲ್ಲಿ ಮೊದಲ ಅರ್ಧದಿನ ಜನಶಕ್ತಿ ಬಳಗದ ಸಮಾವೇಶ ಹಾಗೂ ಎರಡನೇ ಅರ್ಧದಿನ ವ್ಯಾಪಕವಾಗಿ ಮಾಧ್ಯಮ/ಜನತೆಯ ಗಮನ ಸೆಳೆಯುವ ವಿಚಾರ ಸಂಕಿರಣ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಳ್ಳಲಿದೆ. ಜನಶಕ್ತಿ ವಿಶೇಷಾಂಕ ಬಿಡುಗಡೆನೂ ಮಾಡಬೇಕು. ಜನಶಕ್ತಿ ವಿಶೇಷಾಂಕದ ಥೀಮ್ ಸಹ "ಇಂಡಿಯಾ 70 : ಸಾಧನೆಗಳು, ಸವಾಲುಗಳು" ಕಾರ್ಯಾಗಾರ ಸಂಘಟಿಸಬೇಕು.
- ಜನಶಕ್ತಿ ಪತ್ರಿಕೆಯ ಪ್ರಸಾರ ಮತ್ತು ಫೇಸ್ ಬುಕ್ ಪುಟದ "ಲೈಕ್"ಗಳನ್ನು ವನ್ನು ಇಮ್ಮಡಿಯಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವಗಳ ಭಾಗವಾಗಿ ಉತ್ಸವ ಥೀಮ್ ನ ಒಂದು ಆಯಾಮದ ಸುತ್ತ ಒಂದು ವಿಶೇಷ ಉಪನ್ಯಾಸ/ಸಂವಾದ, ಓದುಗರ ವೇದಿಕೆ, ಜನಶಕ್ತಿ ಬಳಗದ ಸಮಾವೇಶ, ಪ್ರಸಾರಾಂದೋಲನದ ಉದ್ಘಾಟನೆ ಇರುತ್ತದೆ.
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಬಳಗದ ಸಮಾವೇಶದಿಂದ ಆರಂಭಿಸಿ ಎರಡು ವಾರಗಳ ಕಾಲ ಜಿಲ್ಲಾ ಮಟ್ಟದ ಪ್ರಸಾರಾಂದೋಲನ ನಡೆಸಲಾಗುತ್ತದೆ
- ಇನ್ನಷ್ಟು ವ್ಯಾಪಕವಾಗಿ ಪಕ್ಷದ ಮತ್ತು ನಮ್ಮ ಚಳುವಳಿಯ ಹೊರಗಿರುವ ಎಡ/ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳು ಚಳುವಳಿಕಾರರನ್ನು ವಿಶೇಷಾಂಕದ ಲೇಖಕರಾಗಿ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಬೇಕು.
- ಜನಶಕ್ತಿ ಬಳಗದ ರಾಜ್ಯ ಮಟ್ಟದ ಒಂದು ಸಾಮಾಜಿಕ ಮಾಧ್ಯಮ ಕಾರ್ಯಾಗಾರವನ್ನು ಕಾರ್ಯಾಗಾರವನ್ನು ಜುಲೈ ನಲ್ಲಿ ಸಂಘಟಿಸಲಾಗುತ್ತದೆ
- ಜನಶಕ್ತಿಯ ಮುಂದಿನ ಬೆಳವಣಿಗೆಗಳಿಗೆ ನಿಧಿ ಸ್ಥಾಪಿಸಲು ವಿಶೇಷಾಂಕದ ಜಾಹೀರಾತುಗಳ ಮೂಲಕ ರೂ. 25 ಲಕ್ಷದ ನಿಧಿಯ ಗುರಿ ಇಟ್ಟುಕೊಳ್ಳಲಾಗಿದೆ.

ಕಟ್ಟಡ ಕಾರ್ಮಿಕರು ರಾಜಕೀಯ ಶಕ್ತಿಯಾಗಿ.....

ಪುಟ 8 ರಿಂದ

ಕೇಂದ್ರ ರಾಜ್ಯ ಸರಕಾರ ಏನು ಮಾಡಿದೆ? ದೊಡ್ಡ ಪ್ರಮಾಣದ ಸೌಲಭ್ಯ ಕೊಡಬೇಕಾದ ಕೇಂದ್ರದ ಮೋದಿ ಸರ್ಕಾರ ಅನ್ಯಾಯ ಮಾಡಿದೆ ಎಂದು ಹೇಳಿದರು. ಕೇರಳ ರಾಜ್ಯದ ಮಾದರಿಯಲ್ಲಿ ಸದಸ್ಯತ್ವ ನೋಂದಣಿ ಮಾಡಬೇಕು. ನಾವು ಹಳ್ಳಿಗೆ ಹೋಗಿ ಕಾರ್ಮಿಕರನ್ನು ಸಂಘಟಿಸಲು ಒಂದಾಗಬೇಕು ಎಂದು ಅವರು ಕರೆ ನೀಡಿದರು. ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಶಂಕರ ಶುಭ ಕೋರಿ ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಜರಗಿದ 2ನೇ ರಾಜ್ಯ ಸಮ್ಮೇಳನದ ನಂತರ CWFI ರಾಜ್ಯ ಸಮಿತಿಯ ವತಿಯಿಂದ ನಡೆಸಿದ ಹೋರಾಟ ಚಳುವಳಿಯ ಚಟುವಟಿಕೆಯ ಲಿಖಿತ ವರದಿ ಹಾಗೂ ಲೆಕ್ಕಪತ್ರಗಳನ್ನು CWFI ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಉಮೇಶ್ ಸಮ್ಮೇಳನದ ಸಭೆಯಲ್ಲಿ ಮಂಡಿಸಿದರು, ನಂತರ ವರದಿಯ ಮೇಲೆ ಜಿಲ್ಲಾವಾರು ಗುಂಪು ಚರ್ಚೆ ನಡೆಸಿದ ಪ್ರತಿನಿಧಿ ಸಂಗಾತಿಗಳು, 4 ಮಹಿಳಾ ಪ್ರತಿನಿಧಿಗಳು ಸೇರಿದಂತೆ ಒಟ್ಟು 29 ಮಂದಿ ಪ್ರತಿನಿಧಿಗಳು ವರದಿಯ ಮೇಲೆ ಟೀಕೆ ಸ್ವಯಂ–ಟೀಕೆ ಹಾಗೂ ವಿಮರ್ಶೆ ನಡೆಸಿದರು. ಕೊನೆಯಲ್ಲಿ ಕೆಲವು ತಿದ್ದುಪಡಿಯೊಂದಿಗೆ ವರದಿಯುನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ 29 ಮಹಿಳೆಯರು ಸೇರಿದಂತೆ ಒಟ್ಟು 209 ಪ್ರತಿನಿಧಿ ಸಂಗಾತಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಕುಮಾರಿ ವಿಶಾಲ ಬೆಂಗಳೂರು ಉತ್ತರ ಜಿಲ್ಲೆಯಿಂದ ಅತ್ಯಂತ ಕಿರಿಯ ಪ್ರತಿನಿಧಿಯಾಗಿ, CWFI ರಾಜ್ಯ ಅಧ್ಯಕ್ಷರಾದ ಎನ್. ವೀರಸ್ವಾಮಿ (79) ಹಿರಿಯ ಪ್ರತಿನಿಧಿ ಸಂಗಾತಿಗಳಾಗಿ ಸಮ್ಮೇಳನದಲ್ಲಿ ಇದ್ದರು. ಸಂಘಟನೆಯ ಒಟ್ಟು 35 ಮಂದಿ ಪೂರ್ಣಾವಧಿ ಕಾರ್ಯಕರ್ತರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಪರಿಚಯ ಪತ್ರ ಸಮಿತಿಯ ಸಂಚಾಲಕ ಪಿ.ಕೆ. ಸುಬ್ರಹ್ಮಣ್ಯ ತುಮಕೂರು ಪರಿಚಯ ಪತ್ರದ ವಿವರ ಮಂಡಿಸಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ದ್ವಿತೀಯ ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಶೇ. 80 ಕ್ಕಿಂತ ಅಧಿಕ ಅಂಕ ಪಡೆದ ಕಟ್ಟಡ ಕಾರ್ಮಿಕರ ಸುಮಾರು 60 ಮಕ್ಕಳನ್ನು CWFI ರಾಷ್ಟ್ರ ಅಧ್ಯಕ್ಷರಾದ ಸಿಂಗಾರವೇಲು ಕಿರುಕಾಣಿಕೆ ನೀಡಿ ಸನ್ಮಾನಿಸಿದರು.

ಸಮ್ಮೇಳನದ ಸಭಾಂಗಣದಲ್ಲಿ ಮೊದಲ ದಿನದ ಕಲಾಪದ ಕೊನೆಯಲ್ಲಿ ಮನೋರಂಜನೆ ಕಾರ್ಯಕ್ರಮವಾಗಿ ಕರಾವಳಿ ಕಲೆಯಾದ ಯಕ್ಷಗಾನ ಪ್ರದರ್ಶನ ಹಾಗೂ ಕಟ್ಟಡ ಕಾರ್ಮಿಕರ ಸಂಘದ ಉಡುಪಿ ಮುಖಂಡರಾದ ವಾಮನ್ ಪೂಜಾರಿಯವರಿಂದ ಅಮೋಘ ಯೋಗಾಸನ ಪ್ರದರ್ಶನ ಕಾರ್ಯಕ್ರಮವನ್ನು ಎಲ್ಲಾ ಪ್ರತಿನಿಧಿ ಸಂಗಾತಿಗಳು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

CWFI ರಾಜ್ಯ ಪದಾಧಿಕಾರಿಯಾಗಿದ್ದು, ನಿರ್ಗಮಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಮುಖಂಡರಾದ ವಸಂತ ಆಚಾರ್‌ರವರಿಗೆ ಬೀಳ್ಕೊಡುಗೆಯಾಗಿ ಹೃದಯ ಸ್ಪರ್ಶಿ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಮ್ಮೇಳನದ ಯಶಸ್ವಿಗಾಗಿ ದುಡಿದ ಸಹೋದರ ಸಂಘಟನೆಗಳ ಕಾರ್ಯಕರ್ತರು ಹಾಗೂ ಸ್ವಯಂ ಸೇವಕ ಸಂಗಾತಿಗಳನ್ನು ವೇದಿಕೆಯಲ್ಲಿ ಕಿರುಕಾಣಿಕೆ ನೀಡಿ ಗೌರವಿಸಲಾಯಿತು. ರಾಜೀವ ಪಡುಕೋಣೆ ಈ ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯಲ್ಲಿ CWFI ನೂತನ ಪ್ರಧಾನ ಕಾರ್ಯದರ್ಶಿ ಕೆ. ಮಹಂತೇಶ ಸಮ್ಮೇಳನದ ಯಶಸ್ವಿಗಾಗಿ ದುಡಿದ ಉಡುಪಿಯ ಸ್ವಾಗತ ಸಮಿತಿಯ ಎಲ್ಲಾ ಸಂಗಾತಿಗಳಿಗೂ ವಿವಿಧ ಸಂಘಟನೆಯ ಮುಖಂಡರುಗಳಿಗೂ ಹಾರ್ದಿಕ ಅಭಿನಂದನೆ ಸಲ್ಲಿಸಿದರು. ಗೆಲುವು ನಮ್ಮದೇ ಹಾಡಿನೊಂದಿಗೆ ಸಮ್ಮೇಳನ ಕೊನೆಗೊಂಡಿತು.

ಸಮ್ಮೇಳನ ಕೈಗೊಂಡ ನಿರ್ಣಯಗಳು :

1) ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ವಿವಿಧ ಸೌಲಭ್ಯ ಕೋರಿ ಸಲ್ಲಿಸಿದ ಅರ್ಜಿಗಳನ್ನು ಕೂಡಲೇ ಮಂಜೂರು ಮಾಡಲು ಒತ್ತಾಯಿಸಿ ನಿರ್ಣಯ.
2) ಜುಲೈ 26 ರಂದು ರಾಜ್ಯಾದ್ಯಂತ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ –ವಿವಿಧ ಸೌಲಭ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ, ಪ್ರದರ್ಶನ ಹೋರಾಟ.
3) ರಾಜ್ಯ ಕೇಂದ್ರದಲ್ಲಿ ಸೆಪ್ಟೆಂಬರ್ 14 ಚಳುವಳಿ ಹೋರಾಟ ಯಶಸ್ವಿಗೊಳಿಸಲು ನಿರ್ಣಯ.
4) ಸರಕು ಮತ್ತು ಸೇವೆ (ಜಿ.ಎಸ್.ಟಿ) ಒಂದು ದೇಶ ಒಂದು ತೆರಿಗೆ ವಿರೋದಿಸಿ ನಿರ್ಣಯ.
5) ಮರಳು ಸಮಸ್ಯೆ ಬಗೆಹರಿಸಲು ಮರಳು ನೀತಿಗೆ ಆಗ್ರಹಿಸಿ ನಿರ್ಣಯ.
6) ಕೋಮುವಾದ ಮತ್ತು ಆಹಾರದ ಹಕ್ಕು ಬಗ್ಗೆ ನಿರ್ಣಯ.
7) ಕಸ್ತೂರಿ ರಂಗನ್ ವರದಿ ಜಾರಿಯಿಂದಾಗುವ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ನಿರ್ಣಯ.

ನೂತನ ರಾಜ್ಯ ಸಮಿತಿಯ ಪದಾಧಿಕಾರಿಗಳು

1) ಎನ್. ವೀರಸ್ವಾಮಿ–ಅಧ್ಯಕ್ಷರು, – ರಾಜ್ಯ ಕೇಂದ್ರ
2) ಬಿ. ಉಮೇಶ್, ಉಪಾಧ್ಯಕ್ಷರು– ತುಮಕೂರು
3) ಹರೀಶ್ ನಾಯ್ಕ ಉಪಾಧ್ಯಕ್ಷರು–ಉತ್ತರ ಕನ್ನಡ.
4) ಬಾಲಕೃಷ್ಣ ಶೆಟ್ಟಿ, ಉಪಾಧ್ಯಕ್ಷರು– ಉಡುಪಿ.
5) ಸುನೀಲ್ ಕುಮಾರ್ ಬಜಾಲ್ –ಉಪಾಧ್ಯಕ್ಷರು ದ.ಕ.
6) ರಾಮಕೃಷ್ಣ ಉಪಾಧ್ಯಕ್ಷರು–ಬೆಂಗಳೂರು.
7) ನಾಗಯ್ಯ ಸ್ವಾಮಿ, ಉಪಾಧ್ಯಕ್ಷರು ಕಲ್ಬುರ್ಗಿ
8) ಆಶಾ, ಉಪಾಧ್ಯಕ್ಷರು (ಮಹಿಳೆ)
9) ತಿಲಕ ಗೌಡ ಉಪಾಧ್ಯಕ್ಷರು, ಉತ್ತರ ಕನ್ನಡ
10) ಕೆ. ಮಹಂತೇಶ ಪ್ರಧಾನ ಕಾರ್ಯದರ್ಶಿ ರಾಜ್ಯ ಕೇಂದ್ರ
11) ಯೋಗೀಶ ಜಪ್ಪಿನ ಮೊಗರು ಕಾರ್ಯದರ್ಶಿ ದ.ಕ.
12) ಶ್ರೀಧರ ಕಾರ್ಯದರ್ಶಿ ತುಮಕೂರು.
13) ಸಾಬು ಕಾರ್ಯದರ್ಶಿ, ಕೊಡಗು
14) ಭೀಮ್ ರಾಜ್, ಕಾರ್ಯದರ್ಶಿ, ಕೋಲಾರ
15) ಶಿವಕುಮಾರ, ಕಾರ್ಯದರ್ಶಿ, ಮಂಡ್ಯ
16) ಜ್ಯೋತಿ, ಜಂಟಿ ಕಾರ್ಯದರ್ಶಿ, ಮಹಿಳೆ
17) ಸಂಗಮೇಶ, ಜಂಟಿ ಕಾರ್ಯದರ್ಶಿ, ರಾಯಚೂರು
18) ಕಾಶೀಂ ಸಾಬ್, ಸರ್ದಾರ, ಜಂಟಿ ಕಾರ್ಯದರ್ಶಿ, ಕೊಪ್ಪಳ
19) ಸುರೇಶ್ ಕಲ್ಲಾಗರ – ಖಜಾಂಚಿ, ಉಡುಪಿ.
20) ಮಹಿಳಾ ಉಪಸಮಿತಿ ಸಂಚಾಲಕಿ (ಖಾಯಂ ಆಹ್ವಾನಿತರು) ಕುಮಾರಿ – ಮಂಡ್ಯ

ರೈತರ ದೇಶವ್ಯಾಪಿ ಐಕ್ಯ ಹೋರಾಟ ಆರಂಭ

ಪುಟ 2 ರಿಂದ

ಸುಭಾಷಿಣಿ ಅಲಿ, ಮತ್ತಿತರ ಮುಖಂಡರ ನೇತೃತ್ವದಲ್ಲಿ ಮೆರವಣಿಗೆ ಪೋಲೀಸ್ ಗೋಲೀಬಾರ್ ನಡೆದ ಪಿಪಲಿಯ ಮಂಡಿಯತ್ತ ಹೊರಟಿತು. ರೈತರು ಈ ಮೆರವಣಿಗೆಯಲ್ಲಿ ಭಾಗವಹಿಸದಂತೆ ಮಾಡಲು ಮಂದಸೌರ್‌ಗೆ ಬರುವ ರಸ್ತೆಗಳನ್ನೆಲ್ಲ ಅಡ್ಡ ಗಟ್ಟಿಲಾಗಿದ್ದರೂ ಲೆಕ್ಕಿಸದೆ ಸಾವಿರಾರು ರೈತರು ರೈತ ಮುಖಂಡರನ್ನು ಬರಮಾಡಿಕೊಂಡರು, ಪೋಲೀಸರು ತಡೆದಲ್ಲಿಯೇ ಹನ್ನನ್ ಮೊಲಲ್ ಮತ್ತಿತರರು ಹುತಾತ್ಮರಿಗೆ ಪುಷ್ಪಾರ್ಚನೆ ಮಾಡುವುದನ್ನು ತಡೆಯಲು ಆಡಳಿತಕ್ಕಾಗಲಿಲ್ಲ. ಆದರೆ ಹುತಾತ್ಮ ಸ್ಮಾರಕವನ್ನು ನಿರ್ಮಿಸಲು ಬಿಡಲಿಲ್ಲ. ಎಲ್ಲ ಪ್ರಮುಖ ಮುಖಂಡರು ಸೇರಿದಂತೆ ಸುಮಾರು 1500 ಜನರನ್ನು ಬಂಧಿಸಿ 35 ಕಿ.ಮೀ. ದೂರ ಒಯ್ದು ಬಿಡುಗಡೆ ಮಾಡಿತು. ಅಲ್ಲಿಂದ ಮೆರವಣಿಗೆ ಮುಂದುವರೆದಿದೆ. ಅದು ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್ ಮೂಲಕ ಸಂಚರಿಸಿ ಜುಲೈ 18ರಂದು ದಿಲ್ಲಿ ತಲುಪಲಿದೆ.

ಬಿಜೆಪಿ ಸರಕಾರದ ಈ ದಮನ ಪ್ರಯತ್ನವನ್ನು ಅಖಿಲ ಭಾರತ ಕಿಸಾನ್ ಸಭಾ ಖಂಡಿಸಿದೆ ಹಾಗೂ ಈ ಸರ್ವಾಧಿಕಾರಶಾಹಿಯನ್ನು ಯಶಸ್ವಿಯಾಗಿ ಪ್ರತಿರೋಧಿಸಿ ನಿಂತ ರೈತರನ್ನು ಅಭಿನಂದಿಸಿದೆ. ಯಾತ್ರೆಗೆ ಇನ್ನಷ್ಟು ಅಡ್ಡಪಡಿಸದಂತೆ, ಪ್ರತಿಭಟಿಸುವ ರೈತರ ಹಕ್ಕನ್ನು ನಿರಾಕರಿಸದಂತೆ ಕೇಂದ್ರ ಹಾಗೂ ರಾಜ್ಯಸರಕಾರಗಳಿಗೆ ಎಚ್ಚರಿಕೆ ನೀಡಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ರೈತ-ವಿರೋಧಿ ಧೋರಣೆಗಳ ವಿರುದ್ಧ ಭುಗಿಲೆದ್ದಿರುವ ಆಕ್ರೋಶದಲ್ಲಿ ರೈತ ಸಂಘಟನೆಗಳ ಒಂದು ವಿಶಾಲ ಮೈತ್ರಿಕೂಟ 'ರಾಷ್ಟ್ರೀಯ ಕಿಸಾನ್ ಮಹಾಸಂಘ' ಮೂಡಿ ಬಂದಿದೆ. ಇದರ ಕರೆಯ ಮೇರೆಗೆ ಜುಲೈ 3ರಂದು ನೂರಾರು ರೈತರು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿ ನೀತಿ ಆಯೋಗದತ್ತ ಮೆರವಣಿಗೆ ನಡೆಸಿದರು. ಮೆರವಣಿಗೆಯನ್ನು ಮಧ್ಯದಲ್ಲಿಯೇ ತಡೆಯಲಾಯಿತು. ಈ ಸಂಘಟನೆ ಮತ್ತು ಇತರ ರೈತರು ಮತ್ತು ಆದಿವಾಸಿಗಳ ಸಂಘಟನೆಗಳ ಐಕ್ಯ ವೇದಿಕೆಗಳೂ ದೇಶಾದ್ಯಂತ ಒಂದು ಐಕ್ಯ ರೈತ ಹೋರಾಟಕ್ಕೆ ಅಣಿಯಾಗುತ್ತಿವೆ.

ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಭೂಮಿ ಅಧಿಕಾರ್ ಆಂದೋಲನ್ ಜುಲೈ 3ರ ಈ ಪ್ರತಿಭಟನೆಯಲ್ಲಿ ಭಾಗವಹಿಸಿದವು. ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ ರೈತರ ಎರಡು ಪ್ರಮುಖ ಬೇಡಿಕೆಗಳಾದ ಸಮಗ್ರ ಸಾಲಮನ್ನಾ ಮತ್ತು ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಪ್ರಕಾರ ಫಲದಾಯಕ ಬೆಲೆ ಇವುಗಳ ಮೇಲೆ ನಡೆಸುವ ಹೋರಾಟಗಳಿಗೆ ಬೆಂಬಲ ಮತ್ತು ಸೌಹಾರ್ದ ವ್ಯಕ್ತಪಡಿಸಿದರು. ಮಧ್ಯಪ್ರದೇಶದಲ್ಲಿ ರೈತರ ಮೇಲೆ ಹಾಕಿರುವ ಸುಳ್ಳು ಕೆಸುಗಳನ್ನೆಲ್ಲ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದ ಅವರು ಜುಲೈ 6ರಿಂದ ಮಂದಸೌರ್‌ನಿಂದ ಆರಂಭವಾಗಲಿರುವ 'ಕಿಸಾನ್ ಮುಕ್ತಿ ಯಾತ್ರಾ'ದಲ್ಲಿ ಮತ್ತು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ಕರೆಯಂತೆ ಜುಲೈ18ರ ದಿಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಈ ನಡುವೆ ರೈತಾಪಿಗಳು, ಅದಿವಾಸಿಗಳು, ದಲಿತರು ಮತ್ತು ಅರಣ್ಯವಾಸಿಗಳ ಭೂಮಿ ಹಕ್ಕುಗಳಿಗಾಗಿ ಹೋರಾಡುತ್ತಿರುವ ಸಂಘಟನೆಗಳ ಮೈತ್ರಿಕೂಟವಾದ ಭೂಮಿ ಆಧಿಕಾರ್ ಆಂದೋಲನ(ಬಿಎಎ) ದ 3ನೇ ಅಖಿಲ ಭಾರತ ಸಮ್ಮೇಳನ ಪ್ರಧಾನ ಮಂತ್ರಿಗಳಿಗೆ ರೈತರ ಬೇಡಿಕೆ ಪಟ್ಟಿಯನ್ನು ಸಲ್ಲಿಸಬೇಕು ಎಂದು ನಿರ್ಧರಿಸಿದೆ.

* ಜುಲೈ 18ರ ದಿಲ್ಲಿ ಪ್ರತಿಭಟನೆಯ ನಂತರ ಆಗಸ್ಟ್ 9ರಂದು ಎಲ್ಲ ಜಿಲ್ಲೆಗಳಲ್ಲಿ ರೈತರ ಬೃಹತ್ ರ್‍ಯಾಲಿಗಳನ್ನು ಸಂಘಟಿಸಬೇಕು, ಆಮೇಲೆ ಸಂಬಧಪಟ್ಟ ರಾಜ್ಯಸರಕಾರಗಳ ಪ್ರತಿಕ್ರಿಯೆಯನ್ನು ಅನುಸರಿಸಿ ಆಯಾಯ ರಾಜ್ಯಗಳಲ್ಲಿ ಹೋರಾಟದ ಮುಂದಿನ ಸ್ವರೂಪವನ್ನು ನಿರ್ಧರಿಸಲಾಗುವುದು ಎಂದು ಅದು ಹೇಳಿದೆ.

* ನರ್ಮದಾ ಕಣಿವೆಯಿಂದ ಸುಮಾರು 40,000 ಕುಟುಂಬಗಳನ್ನು ಯಾವುದೇ ಪರಿಹಾರ, ಪುನರ್ವಸತಿ ಮತ್ತು ಪುನರ್ನೆಲೆ ಕಲ್ಪಿಸದೆ ಕಾನೂನುಬಾಹಿರವಾಗಿ ಬಲವಂತದಿಂದ ಒಕ್ಕಲೆಬ್ಬಿಸುವುದರ ವಿರುದ್ಧ ನರ್ಮದಾ ಬಚಾವ್ ಆಂದೋಲನ(ಎನ್‌ಬಿಎ)ಕ್ಕೆ ಬೆಂಬಲ ಸೂಚಿಸಿದ ಬಿಎಎ ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್‌ನ ಕಾರ್ಯಕರ್ತರ ಸಮಾವೇಶವನ್ನು ಎನ್‌ಬಿಎಯೊಂದಿಗೆ ನಡೆಸಿ ಮುಂದಿನ ಕಾರ್ಯಾಚರಣೆಯನ್ನು ರೂಪಿಸಲು ನಿರ್ಧರಿಸಿದೆ.

* ಏಳು ಆದಿವಾಸಿ ರೈತರು ಬಲಿದಾನ ನೀಡಿದ ಝಾರ್ಖಂಡ್‌ನ ರೈತರ, ಆದಿವಾಸಿಗಳ ಸತತ ಹೋರಾಟದಿಂದಾಗಿ ಅಲ್ಲಿಯ ರಾಜ್ಯಪಾಲರು ಸಿಎನ್‌ಟಿಎ ಮತ್ತು ಎಸ್‌ಪಿಟಿಎ ಎಂಬ ಗೇಣಿ ಕಾಯ್ದೆಗಳಿಗೆ ಕಾರ್ಪೊರೇಟ್ -ಪರ ತಿದ್ದುಪಡಿಗಳನ್ನು ಸೂಚಿಸಿರುವ ಮಸೂದೆಗಳನ್ನು ಹಿಂದಕ್ಕೆ ಕಳೆಸಬೇಕಾಗಿ ಬಂದಿದೆ. ಈಗಲೂ ಅಲ್ಲಿನ ಬಿಜೆಪಿ ಸರಕಾರ ಈ ತಿದ್ದುಪಡಿಗಳನ್ನು ತರಲು ಮುಂದಾದರೆ ಬಿಎಎನ ಝಾರ್ಖಂಡ್ ಘಟಕ ಜುಲೈ 12ರಿಂದ ರಾಜ್ಯ ವಿಧಾನ ಸಭಾ ಕಲಾಪಗಳು ಆರಂಭವಾಗುವ ದಿನದಿಂದ ರಾಂಚಿಯಲ್ಲಿ ಧರಣಿ ಮುಷ್ಕರ ನಡೆಸಲು ನಿರ್ಧರಿಸಿದೆ. ಇದನ್ನು ಇತರ ಆದಿವಾಸಿ ಸಂಘಟನೆಗಳೊಂದಿಗೆ ಅಖಿಲ ಭಾರತ ಹೋರಾಟವಾಗಿ ರೂಪಿಸಿ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಬಿಎಎ ಹೇಳಿದೆ.

* ಬಿಎಎ ನಿಯೋಗವೊಂದು ಸಂಸತ್ ಸದಸ್ಯರೊಂದಿಗೆ ಸಹರಾಣಪುರಕ್ಕೆ ಭೇಟಿ ನೀಡಿ ಅಲ್ಲಿ ಹಿಂಸಾಚಾರಕ್ಕೆ ಒಳಗಾದ ದಲಿತರನ್ನು ಭೇಟಿ ಮಾಡಿ ನಂತರ ಅವರಿಗೆ ರಕ್ಷಣೆನೀಡುವಂತೆ ಆಗ್ರಹಿಸಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿಯಾಗುತ್ತದೆ.

ಈ ನಡುವೆ ಜುಲೈ 7ರಂದು ಗೋರಕ್ಷಣೆಯ ಜೆಸರಲ್ಲಿ ಜನಗಳನ್ನು ಬಡಿದು ಸಾಯಿಸುವುದನ್ನು ಪ್ರತಿಭಟಿಸಿ ಎಲ್ಲ ಪಂಚಾಯತ್/ಬ್ಲಾಕ್ ಮಟ್ಟಗಳಲ್ಲಿ ಪ್ರತಿಭಟನಾ ದಿನವನ್ನು ಆಚರಿಸಲು ಬಿಎಎ ಕರೆ ನೀಡಿದೆ.

ಮಧ್ಯಪ್ರವೇಶಿಸಿ ಬಲವಾದ ಸಂದೇಶ ನೀಡುವಂತೆ ಗೃಹಮಂತ್ರಿಗಳಿಗೆ ಸಿಪಿಐ(ಎಂ) ಮನವಿ ಪತ್ರ

ಪುಟ 2 ರಿಂದ

ಘಟನೆಯಲ್ಲಿ ಭಾಗಿಯಾದವರು ಪ್ರಯತ್ನಿಸುತ್ತಿದ್ದಾರೆ. ರಾಜ್ಯ ಸರಕಾರ ಜುನೈದನ ಹತ್ಯೆಯ ಬಗ್ಗೆಯಾಗಲೀ, ತೀವ್ರವಾಗಿ ಗಾಯಗೊಂಡಿರುವ ಅತನ ಸೋದರ ಶಕೀರ್ ನ ಆರೋಗ್ಯದ ಬಗ್ಗೆ ವಿಚಾರಿಸಲಾಗಲೀ ಯಾರನ್ನೂ ಕಳಿಸದಿರುವುದರಿಮದ ಈ ಮಂದಿಗೆ ಇನ್ನಷ್ಟು ಧೈರ್ಯ ಬಂದಿದೆ. **ಶಕಿಲ್ ನ ಸರಿಯಾದ ಚಿಕಿತ್ಸೆಗೆ ರಾಜ್ಯ ಸರಕಾರ ಏನೂ ಮಾಡಿಲ್ಲ 'ಆತ ತನ್ನ ಅಪಾರ ನೋವನ್ನು ತಡೆದುಕೊಂಡು ಹೊರರೋಗಿಗಳ ಸಾಲಿನಲ್ಲಿ ನಿಲ್ಲಬೇಕಾಗಿದೆ ಎಂದು ತಿಳಿದು ನಿಮಗೆ ಆಘಾತವಾಗಬಹುದು' ಎಂದು ಮನವಿ ಪತ್ರ ಹೇಳಿದೆ.** ಈ ನಡುವೆ ಆ ಭಾಗದಲ್ಲಿ ಸಂಚರಿಸುವ ರೈಲುಗಳಲ್ಲಿ ಈಗಲೂ ಕೋಮುವಾದಿ ಗ್ಯಾಂಗ್‌ಗಳು ಉದ್ರೇಕಕಾರಿ ಮಾತುಗಳನ್ನಾಡುತ್ತ ಅಲೆದಾಡುತ್ತಿದ್ದಾರೆ, ಸುರಕ್ಷೆಯ ಯಾವುದೇ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ ಎಂಬ ಸಂಗತಿಯತ್ತವೂ ಮನವಿ ಪತ್ರ ಗೃಹಮಂತ್ರಿಗಳ ಗಮನ ಸೆಳೆದಿದೆ.

2. ಕಳೆದ ಅಗಸ್ಟ್ 26ರಂದು ಹರ್ಯಾಣದ ದಿಂಗರ್ಹೇರಿಯಲ್ಲಿ ಕೋಮುದ್ವೇಷ ಉಗುಳುತ್ತಿದ್ದ ಗ್ಯಾಂಗೊಂದು **ಒಂದು ಬಡ ಮುಸ್ಲಿಂ ರೈತ ಕುಟುಂಬದ ಇಬ್ಬರು ಹೆಣ್ಣು ಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರ,** ಒಂದು ದಂಪತಿಯ ಕೊಲೆ ಮತ್ತು ಇತರರನ್ನು ಗಾಯಗೊಳಿಸಿದ ಭೀಕರ ಪ್ರಕರಣದಲ್ಲಿ ಭಾರೀ ಪ್ರತಿಭಟನೆಗಳ ನಂತರ ಸಿಬಿಐ ತನಿಖೆಗೆ ಆದೇಶ ನೀಡಿದರೂ ಕೇಸು ಕೋರ್ಟಿನಲ್ಲಿ ಮುಂದುವರೆಯುತ್ತಿಲ್ಲ. ಈ ನಡುವೆ ಆಪಾದಿತರು ಈ ಕುಂಟುಂಬದ ಮೇಲೆ ಒತ್ತಡ ತರುತ್ತಿದ್ದಾರೆ. ಆಘಾತಕಾರಿ ಸಂಗತಿಯೆಂದರೆ ಹಲ್ಲೆಗೊಳಗಾದ ಕುಟುಂಬದ ಮೇಲೆಯೇ ಸುಳ್ಳು ಕೇಸ್ ಹಾಕಿ ಅವರು 'ರಾಜಿ'ಗೆ ಬರುವಂತ ಒತ್ತಡ ಹಾಕಲಾಗುತ್ತಿದೆ. ಈ ಕೇಸಿನಲ್ಲೂ ಹರ್ಯಾಣ ಸರಕಾರ ಆಪಾದಿತರ ಪರ ವಹಿಸಿದೆ, ಈ ಕುಟುಂಬದ ಇಬ್ಬರು ಸದಸ್ಯರ ಮೇಲೆ ಫೆಬ್ರುವರಿ 10ರಂದು ಎಫ್‌ಐಆರ್ ಹಾಕಿರುವುದು ನ್ಯಾಯದ ಅಪಹಾಸ್ಯ, ಗೃಹಮಂತ್ರಿಗಳು ಮಧ್ಯಪ್ರವೇಶಿಸಿ ಈ ಸುಳ್ಳು ಕೇಸುಗಳನ್ನು ಹಿಂದಕ್ಕೆ ತಗೊಳ್ಳುವಂತೆ ಮಾಡಬೇಕು ಎಂದು ನಿಯೋಗ ಆಗ್ರಹಿಸಿದೆ.

3. ಅಜ್ಮೇರ್ ನಲ್ಲಿ ಅಮಾನುಷವಾಗಿ ಸಾಯಿಸಲ್ಪಟ್ಟ ಮೇವತ್‌ನ ಡೇರಿ ರೈತ ಪೆಹ್ಲೂ ಖಾನ್ ಪ್ರಕರಣದಲ್ಲಿ ಎಲ್ಲ ಆಪಾದಿತರನ್ನು ಇನ್ನೂ ಬಂಧಿಸಿಲ್ಲ, **ಪೆಹ್ಲೂ ಖಾನ್ ಕುಟುಂಬಕ್ಕೆ ಪರಿಹಾರವನ್ನು ಇನ್ನೂ ಒದಗಿಸಿಲ್ಲ, ಹಲ್ಲೆಕೋರರು ಕಿತ್ತುಕೊಂಡ ಅವರ ಹಣ ಮತ್ತು ಹಾಲು ಕರೆಯುವ ಹಸುಗಳನ್ನು ಇನ್ನೂ ಹಿಂದಿರುಗಿಸಿಲ್ಲ, ಸಾಲದ್ದಕ್ಕೆ ಅವರ ಮೇಲೆ ಮೇಲೆ ಹಸು ಕಳ್ಳಸಾಗಣೆಯ ಕೇಸು ಹಾಕಲಾಗಿದೆ. ಈ ವಿಷಯದಲ್ಲಿ ಗೃಹಮಂತ್ರಿಗಳು ರಾಜಸ್ತಾನ ಮತ್ತು ಹರ್ಯಾಣ ರಾಜ್ಯಸರಕಾರಗಳು ಕ್ರಮ ಕೈಗೊಳ್ಳುವಂತೆ ಮಧ್ಯಪ್ರವೇಶಿಸಬೇಕು ಎಂದು ಮನವಿ ಪತ್ರ ಕೋರಿದೆ.**

4. ಎರಡು ವರ್ಷಗಳ ಹಿಂದೆ ದಾದ್ರಿಯಲ್ಲಿ ಮನೆಗೆ ನುಗ್ಗಿ ಅಮಾನುಷವಾಗಿ ಮಹಮ್ಮ??? ಇಖ್ಲಾಕ್‌ನನ್ನು ಹೊಡೆದು ಸಾಯಿಸಿದ, ಆತನ ಮಗ ದಾನಿಶ್‌ನನ್ನು ತೀವ್ರವಾಗಿ ಗಾಯಗೊಳಿಸಿದ ಪ್ರಕರಣದಲ್ಲಿ ಆಪಾದಿತರ ಮೇಲೆ ಇನ್ನೂ ಆರೋಪ ಪಟ್ಟಿ ಹಾಕಿಲ್ಲ, ಒಬ್ಬೊಬ್ಬರಾಗಿ ಎಲ್ಲ ಆಪಾದಿತರು ಜಾಮೀನಿನಲ್ಲಿ ಹೊರಗೆ ಬಂದು ಇಖ್ಲಾಕ್ ಕುಟುಂಬದವರ ಮೇಲೆ ಬೆದರಿಕೆ ಹಾಕುತ್ತಿದ್ದಾರೆ. **ಸಾಯಿಸಲ್ಪಟ್ಟ ಇಖ್ಲಾಕ್ ಮತ್ತು ಆತನ ಕುಟುಂಬದವರ ಮೇಲೆಯೇ ಆಪಾದಿತನೇ ಖಾಸಗಿ ದೂರು ಕೊಟ್ಟಿದ್ದು , ಇದರ ಹೆಸರಿನಲ್ಲಿ ಕೆಟ್ಟ ಅಪಪ್ರಚಾರ ನಡೆಸಲಾಗುತ್ತಿದೆ. ಮನೆ ಮುರಿದು ಸುಳ್ಳು ಸಾಕ್ಷ್ಯಗಳನ್ನು ಮನೆಯಲ್ಲಿ ಇಟ್ಟಿರುವ ಸಂದೇಹವೂ ಇದೆ.** ಇಖ್ಲಾಕ್ ಸೋದರ ಕಿರುಕುಳ ತಡೆಯಲಾರದೆ ಕುಟುಂಬದ ಮನೆ ಬಿಟ್ಟು ಹೋಗುವಂತೆ ಮಾಡಲಾಗಿದೆ ಎಂಬೆಲ್ಲ ಸಂಗತಿಗಳನ್ನು ಮನವಿ ಪತ್ರ ಗೃಹಮಂತ್ರಿಗಳ ಗಮನಕ್ಕೆ ತಂದು ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಹಾಕಿದ್ದ ಮಗ ದಾನಿಷ್ ಮೆದುಳಿನ ಶಸ್ತ್ರಚಿಕಿತ್ಸೆ ಅಗತ್ಯವಿರುವುದರಿಂದ ಪರೀಕ್ಷೆಗೆ ಕೂರಲಾಗಿಲ್ಲ, ಆತನಿಗೆ ಸರಕಾರೀ ಕೆಲಸ ಕೊಡಿಸಬೇಕು ಎಂದು ಆಗ್ರಹಿಸಿದೆ.

5. ರಾಜಧಾನಿಯ ಹೃದಯ ಭಾಗದಲ್ಲೇ ಎಪ್ರಿಲ್ 24ರಂದು ನಡೆದ ಪ್ರಕರಣ ಮನವಿ ಪತ್ರದಲ್ಲಿ ನಮೂದಿಸಿದ ಐದನೇ ಪ್ರಕರಣ. ಮೂರು ಕಾರುಗಳಲ್ಲಿ ಬಂದ ಗ್ಯಾಂಗ್‌ಗಳು ಟ್ರಕ್ಕೊಂದನ್ನು ತಡೆದು ನಿಲ್ಲಿಸಿ ಅದರಲ್ಲಿ ಇದ್ದವರನ್ನು ಚೆನ್ನಾಗಿ ಥಳಿಸಿದರು, ಟ್ರಕ್ಕಿನ ಡ್ರೈವರ್ **ರಿಝ್ವಾನ್ ಸಲ್ಲಿಸಿದ ದೂರಿನಲ್ಲಿ ಎರಡು ಕಾರುಗಳ ನಂಬರ್ ಮತ್ತು ಆಪಾದಿತರನ್ನು ಗುರುತಿಸಿದ್ದರೂ ಆಪಾದಿತರನ್ನು ಇನ್ನು ಕೂಡ ಬಂಧಿಸಿಲ್ಲ. ದಿಲ್ಲಿಯ ಪೋಲೀಸರು ನೇರವಾಗಿ ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲೇ ಬರುತ್ತಾರೆ ಎಂಬ ಸಂಗತಿಯನ್ನು ಮನವಿ ಪತ್ರ ಗೃಹಮಂತ್ರಿಗಳ ಗಮನಕ್ಕೆ ತರಬೇಕಾಗಿ ಬಂದಿದೆ.**

ಇವಲ್ಲದೆ ಹರ್ಯಾಣ, ಝಾರ್ಖಂಡ್, ರಾಜಸ್ತಾನ, ಮಧ್ಯಪ್ರದೇಶ, ಉತ್ತರ ಪ್ರದೇಶ, ಪಶ್ಚಿಮ ಬಂಗಾಲ ಮತ್ತು ದಿಲ್ಲಿಯಿಂದ ಕೂಡ ಗೋರಕ್ಷಣೆಯ ಹೆಸರಲ್ಲಿ ನಡೆದಿರುವ ಪ್ರಕರಣಗಳ ಮಾಹಿತಿಗಳನ್ನು ಕಲೆ ಹಾಕುವಂತೆ ಗೃಹಮಂತ್ರಾಲಯದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು, ಇವು ಕೇವಲ ಜನಜಂಗುಳಿಗಳು ಇದ್ದಕ್ಕಿದ್ದಂತೆ ಸ್ವಯಂಪ್ರೇರಣೆಯಿಂದ ನಡೆಸುವ ಹಿಂಸಾಚಾರಗಳಲ್ಲ, ಇವುಗಳ ಹಿಂದೆ ಸಂಘಟಿತ ಗುಂಪುಗಳಿವೆ, ಇವರೆಲ್ಲ ಒಂದು ಹಿಂದುತ್ವ ಸಿದ್ಧಾಂತದ ನಿರ್ದಿಷ್ಟ ಬ್ರಾಂಡಿಗೆ ನಿಷ್ಠೆ ಇರುವವರು, ಇವರ ಬಗ್ಗೆ ಸರಕಾರ ಮೆದು ನಿಲುವು ತಳೆದಿದೆ ಎಂದಿರುವ ಮನವಿ ಪತ್ರ ಇವುಗಳಲ್ಲಿ ಪ್ರತಿಯೊಂದು ಅಂಶದ ಬಗ್ಗೆಯೂ ಉಸ್ತುವಾರಿ ನಡೆಸಿ ಇಂತಹ ಅಪರಾಧಗಳು ಮುಂದುವರೆಯದಂತೆ ಬಲವಾದ ಸಂದೇಶವನ್ನು ಕಳಿಸಬೇಕು ಎಂದು ಕೇಂದ್ರ ಗೃಹಮಂತ್ರಿಗಳನ್ನು ಕೋರಿದೆ.

ಹಿಂದೆಯೂ ಇಂತಹ ಹಿಂಸಾಚಾರ ನಡೆದಿದ್ದರೆ ಅದೂ ಸಂಘ ಪರಿವಾರದ್ದೇ ಎಂಬುದನ್ನು ಬಿಜೆಪಿ ಅಧ್ಯಕ್ಷರು ಮರೆತಿದ್ದಾರೆ -ಬೃಂದಾ ಕಾರಟ್

ಗೃಹಮಂತ್ರಿಗಳ ಬಳಿಗೆ ನಿಯೋಗ ಮತ್ತು ಮನವಿ ಪತ್ರ ಅದಕ್ಕೆ ಮೊದಲು ಜಂತರ್ ಮಂತರ್ ನಲ್ಲಿ ಜುನೈದನಿಗೆ ನ್ಯಾಯ ಕೊಡಿಸಿ ಎಂದು ನಡೆದ ಧರಣಿ ಕಾರ್ಯಕ್ರಮದ ಭಾಗವಾಗಿತ್ತು. ಧರಣಿಯನ್ನುದ್ದೇಶಿಸಿ ಮಾತನಾಡುತ್ತ ಬೃಂದಾ ಕಾರಟ್ ಪ್ರಸಕ್ತ ಸರಕಾರ ಹಿಂದುತ್ವ ಅಜೆಂಡಾವನ್ನು ಜಾರಿ ಮಾಡಲು ಕಟಿಬದ್ಧವಾಗಿರುವ ಆರೆಸ್ಸೆಸ್-ಬಿಜೆಪಿಯ ಜಂಟಿ ಉದ್ಯಮ. ಅಮಿತ್ ಶಾಹ ಬಡಿದು ಸಾಯಿಸುವ ಪ್ರಕರಣಗಳನ್ನು ಖಂಡಿಸುವ ಬದಲು ಈ ಹಿಂದೆಯೂ ಇಂತಹ ಘಟನೆಗಳು ನಡೆದಿವೆ ಎಂದು ಹೋಲಿಸುತ್ತಿರುವುದು ಅತ್ಯಂತ ಆಕ್ಷೇಪಣೀಯ, ಆಗಲೂ ಇಂತಹ ಕೃತ್ಯ ನಡೆಸಿದವರು ಸಂಘ ಪರಿವಾರದವರೇ ಎಂಬುದನ್ನು ಅವರು ಮರೆತಿದ್ದಾರೆ ಎಂದು ಬಲವಾಗಿ ಟೀಕಿಸಿದರು.

ಐಕ್ಯತೆಯಿಂದ ನಾವು ಸರಕಾರ ಮತ್ತು ಪೋಲೀಸರ ವಿರುದ್ಧ ಹೆಚ್ಚು ಸುಲಭವಾಗಿ ಹೋರಾಡಬಹುದು, ಆದರೆ ಜನಗಳ ಹೃದಯ ಮತ್ತು ಮನಸ್ಸುಗಳು ಒಡೆಯುವುದನ್ನು ತಡೆಯಬೇಕಾಗಿದೆ, ಏಕೆಂದರೆ ಆರೆಸ್ಸೆಸ್‌ಗೆ ಬೇಕಾಗಿರುವುದು ಇದೇ ಎಂದರು.

ಇನ್ನೊಬ್ಬರು ಪೊಲಿಟ್‌ಬ್ಯುರೊ ಸದಸ್ಯರಾದ ಹನ್ನನ್ ಮೊಲ್ಲ ಮಾತಾಡುತ್ತ ಜಾನುವಾರು ಮಾರಾಟ ನಿರ್ಬಂಧ ಅಧಿಸೂಚನೆ ರೈತರ ಜೀವನಾಧಾರವನ್ನು ಧ್ವಂಸ ಮಾಡುವ ಒಂದು ಸಾಧನ ಎನ್ನುತ್ತ ಧರಣಿಯಲ್ಲಿ ಪಾಲ್ಗೊಳ್ಳಲು ನೊಯ್ಡ ಮತ್ತು ಘಜಿಯಾಬಾದ್‌ನಿಂದ ದೊಡ್ಡ ಸಂಖ್ಯೆಯಲ್ಲಿ ಬಂದ ಮಾಂಸದ ವ್ಯಾಪಾರಿಗಳ ಸಂಘದ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದರು.



ನೋಟು ರದ್ಧತಿಯ ನಂತರ ಜಿಎಸ್‌ಟಿ : ಮಿಂಚಿನ ಪ್ರಹಾರ ಯಾರ ಮೇಲೆ?



ಜೂನ್ 30–ಜುಲೈ1 ರ ಮಧ್ಯರಾತ್ರಿ 5 ಕೋಟಿರೂ. ವೆಚ್ಚದಲ್ಲಿ ಹೊಸದಾಗಿ ಜಗಮಗಗೊಳಿಸಿದ ಸಂಸದ್ ಭವನದಲ್ಲಿ 'ಜಿಎಸ್‌ಟಿಯೊಂದಿಗೆ ಸಮಾಗಮ'ದ ಹೊಸ 'ಇತಿಹಾಸ' ಸೃಷ್ಟಿಸಲಾಗಿದೆ. ಇದಕ್ಕೆ ಶೇರು ಮಾರುಕಟ್ಟೆ ಭಾರೀ ಉತ್ಸಾಹದಿಂದ ಸ್ಪಂದಿಸಿದೆ ಎಂದು ಹೇಳಲಾಗುತ್ತಿದೆ. ಆದರೆ ಜತೆಜತೆಗೇ ಪ್ರಧಾನಿಗಳ ತವರು ರಾಜ್ಯದ ಸೂರತ್ ಸೇರಿದಂತೆ ದೇಶದಲ್ಲಿ ಹಲವೆಡೆಗಳಲ್ಲಿ ಜವಳಿ ವಲಯದಲ್ಲಿ ಭಾರೀ ಪ್ರತಿಭಟನೆ ನಡೆಸುತ್ತಿರುವ ಸುದ್ದಿಗಳೂ ಬರುತ್ತಿವೆ. ಹಲವು ಸರಕುಗಳ ಬೆಲೆಗಳು ಏರಿರುವ ಸುದ್ದಿಗಳೂ ಬಂದಿವೆ. ನಿಜ ಕಾರುಗಳ, ಅದರಲ್ಲೂ ಐಷಾರಾಮಿ ಕಾರುಗಳ ಬೆಲೆಗಳು ಇಳಿದಿರುವ ಸುದ್ದಿಗಳೂ ಜತೆಗಿವೆ.

ನಮ್ಮ ರಾಜ್ಯದ ನೇಕಾರರು ಕಂಗಾಲಾಗಿದ್ದಾರೆ ಎಂದು ವರದಿಯಾಗಿದೆ (ಎಂ.ಮಹೇಶ, ಪ್ರಜಾವಾಣಿ, ಜುಲೈ4). 'ಶಹಾಪುರ ಸೀರೆ'ಗೆ ಈ ಹಿಂದೆ ಇದ್ದ 12–14ಶೇ. ತೆರಿಗೆ ಈಗ 23.5%ಕ್ಕೆ ಏರಿರುವುದು ನೇಕಾರರು ಮತ್ತು ಕುಟುಂಬದವರಿಗೆ ಬರಸಿಡಿಲಿನಂತಾಗಿದೆ. 'ಸತತ ಬರಗಾಲದಿಂದಾಗಿ ವಹಿವಾಟು ಕುಸಿದು ಸಂಕಷ್ಟ ಅನುಭವಿಸುತ್ತಿದ್ದೇವೆ. ನೋಟುಗಳ ರದ್ದತಿಯ ನಂತರವೂ ತೊಂದರೆಗೆ ಸಿಲುಕಿದ್ದೆವು. ಇದೀಗ, ಜಿಎಸ್‌ಟಿಯೂ ಹೊರೆಯಾಗಿದೆ. ನಮಗೆ ನಮ್ಮದೇ ಆದ ಮಾರುಕಟ್ಟೆ ಇಲ್ಲ. ಹೀಗಾಗಿ, ಮಧ್ಯವರ್ತಿಗಳ ಅವಲಂಬನೆ ಅನಿವಾರ್ಯ. ಅವರು ಜಿಎಸ್‌ಟಿ ಹೊರೆ ಹೊರಲು ಸಿದ್ಧ ಇಲ್ಲ' ಎಂದು ಅವರು ಹೇಳುತ್ತಿದ್ದಾರಂತೆ.

ರಾಜಸ್ತಾನ ಬಟ್ಟೆ ವ್ಯಾಪಾರಿಗಳ ಸಂಘ ಜೂನ್ 27ರಿಂದ ನಾಲ್ಕು ದಿನಗಳ ಮುಷ್ಕರ ನಡೆಸಿದೆ. ಗುಜರಾತಿನ ಜವಳಿ ವರ್ತಕರು ಜುಲೈ1ರಂದು ಹೆಚ್ಚಿನ ಬಟ್ಟೆ ಅಂಗಡಿಗಳ ಬಾಗಿಲು ಹಾಕಿ ಜಿಎಸ್‌ಟಿಗೆ 'ಸ್ವಾಗತ' ಕೋರಿದರು. ಪಶ್ಚಿಮ ಬಂಗಾಲದಲ್ಲಿ ಒಮದೂವರೆ ಲಕ್ಷ ವ್ಯಾಪಾರಿಗಳು ಕೂಡ ಇದನ್ನೇ ಮಾಡಿದರು. ಮುಂಬೈಯಲ್ಲಿ ಬಟ್ಟೆ ವ್ಯಾಪಾರಿಗಳು ಪ್ರತಿಭಟನಾ ರ್‍ಯಾಲಿ ನಡೆಸಿದರು. ದಿಲ್ಲಿಯಲ್ಲಿ ಈ ಒಂದು ವಾರ ಚಾಂದನಿ ಚೌಕದ ಪ್ರಖ್ಯಾತ ಜವಳಿ ಮಾರುಕಟ್ಟೆಯೂ ಮುಷ್ಕರಗಳನ್ನು ಕಂಡಿದೆ.

ಬೆಂಗಳೂರಿನಲ್ಲೂ ಜೂನ್ 30ರಂದು ಪ್ರತಿಭಟನೆ ನಡೆದಿದೆ. ತಮಿಳುನಾಡಿನಲ್ಲಿ ಈರೋಡ್ ಕೈಮಗ್ಗ ಬಟ್ಟೆ ವರ್ತಕರ ಸಂಘ ಜುಲೈ 5ರಿಂದ ಅನಿರ್ದಿಷ್ಟ ಮುಷ್ಕರದ ಎಚ್ಚರಿಕೆ ನೀಡಿತು.

ಗುಜರಾತಿನ ಜವಳಿ ನಗರವೆನಿಸಿದ ಸೂರತ್ ನಲ್ಲಿ ಒಂದು ವಾರಕ್ಕಿಂತಲೂ ಹೆಚ್ಚು ಸಮಯದಿಂದ ಬೀದಿಗಳಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆಯಂತೆ. ನೋಟುರದ್ದತಿಯಿಂದ ಚೇತರಿಸಿಕೊಳ್ಳುತ್ತಿರುವ ತಮಗೆ ಇದೊಂದು ಹೊಸ ಪ್ರಹಾರ ಎಂಬುದೇ ಅವರ ಆಕ್ರೋಶ.

ತಮಾಷೆಯೆಂದರೆ ಅಲ್ಲಿ ಜಿಎಸ್‌ಟಿ ಇದೀಗ ಬಿಜೆಪಿಯೊಳಗೇ ರಾಜಕೀಯ ಕಿತ್ತಾಟದ ಪ್ರಶ್ನೆಯಾಗಿದೆಯಂತೆ. ಇಲ್ಲಿಯ ಜವಳಿ ವರ್ತಕರು ಬಿಜೆಪಿಯ ಕಟ್ಟಾ ಬಿಜೆಪಿ ಬೆಂಬಲಿಗರು. 2014ರ ಸಾರ್ವತ್ರಿಕ ಚುನಾವಣೆಗಳ ವೇಳೆಯಲ್ಲಿ ಇಲ್ಲಿಂದಲೇ ದೇಶದ ಹಲವು ನಗರಗಳಿಗೆ 'ಅಬ್ ಕೀ ಬಾರ್ ಮೋದಿ ಸರಕಾರ್' ಎಂದು ಮುದ್ರಿಸಿದ ಸೀರೆಗಳ ಬಂಡಲ್‌ಗಳು ದೇಶದ ವಿವಿಧ ನಗರಗಳಿಗೆ ರವಾನಿಸಲ್ಪಟ್ಟಿದ್ದವಂತೆ. ಅದರ ಮರುವರ್ಷ 'ಸಬ್‌ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಪಟ್ಟಿಯೊಂದಿಗೆ ಇಂತಹ ಸೀರೆಗಳ ಬಂಡಲ್‌ಗಳು ಬಿಹಾರಕ್ಕೆ ಅಲ್ಲಿಯ ವಿಧಾನಸಭಾ ಚುನಾವಣೆಗಳ ವೇಳೆಯಲ್ಲಿ ಕಳಿಸಲ್ಪಟ್ಟವಂತೆ. ಈಗ ಜುಲೈ 3ರಂದು ಇಲ್ಲಿ ಸೀರೆ ವರ್ತಕರ ಮೇಲೆ ಲಾಠಿ ಪ್ರಹಾರ ಕೂಡ ನಡೆದಿದೆ.

ಆದರೂ ಅತ್ತ ಇಲ್ಲಿಂದ ದಿಲ್ಲಿ ತಲುಪಿದ ಪ್ರಧಾನ ಮಂತ್ರಿಗಳು ಈ ಜಿಎಸ್‌ಟಿ ಭ್ರಷ್ಟಾಚಾರದ ವಿರುದ್ಧ ಇನ್ನೊಂದು ಆಯುಧ ಎಂದಿರುವುದನ್ನು ಗಮನಿಸಿ. 'ಸತ್ಯೋತ್ತರ' ಎಂಬ ಟ್ರಂಪ್–ಮೋದಿ ಯುಗತರ್ಕದ ಮತ್ತೊಂದು ಉದಾಹರಣೆ!

ಜಿಎಸ್‌ಟಿಯ ಗೊಂದಲ ಕೇವಲ ಜವಳಿ ಉದ್ದಿಮೆಗೇ ಸೀಮಿತವಾಗಿಲ್ಲ. ಅಡುಗೆ ಅನಿಲದ ದರಗಳಲ್ಲಿ 32 ರೂ.ವರೆಗೆ ಹೆಚ್ಚಳವಾಗಿದೆ, ಇದು ಆರು ವರ್ಷಗಳಲ್ಲೇ ಅತಿ ಹೆಚ್ಚು ಎಂದು ಪಿಟಿಐ ವರದಿ ಮಾಡಿದೆ. ಪ್ರಧಾನಿಗಳು 'ದಿವ್ಯಾಂಗ'ರೆಂದು ವರ್ಣಿಸಿರುವವರಿಗೆ ಅವರ ಜಿಎಸ್‌ಟಿ ಭಾರೀ ಪ್ರಹಾರ ಮಾಡಿದೆ–ಅವರು ತಮ್ಮ ವಿಕಲತೆಯನ್ನು ನಿವಾರಿಸಿಕೊಳ್ಳಲು ಬಳಸುವ ಸಾಧನಗಳು ಈ ಪ್ರಹಾರಕ್ಕೆ ಒಳಗಾಗಿವೆ. ಒಂದು ರಾಷ್ಟ್ರ, ಒಂದು ತೆರಿಗೆ ಎಂಬುದರಿಂದ ಖುಶಿಪಡಬೇಕಾಗಿದ್ದ ಸಾಗಾಣಿಕೆ ವಲಯದಲ್ಲೂ ಗೊಂದಲ ಹರಡಿದೆ.

ಆದರೆ ಜಿಎಸ್‌ಟಿ ಯಿಂದ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ ಎಂದು ಅದರ ಬೆಂಬಲಿಗರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಶಹಾಪುರ ನೇಕಾರರ ಈ ತೊಳಲಾಟವನ್ನು ಗಮನಿಸಿ–'ಜಿಎಸ್‌ಟಿಯಡಿ ನೋಂದಣಿ ಮಾಡಿಕೊಳ್ಳದ್ದರಿಂದ ಮಧ್ಯವರ್ತಿಗಳು ನಮ್ಮಲ್ಲಿ ಸೀರೆ ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ನೋಂದಣಿ ಮಾಡಿಸಿದರೆ ಕಂಪ್ಯೂಟರ್‌ನಲ್ಲಿ ದಾಖಲಿಸುವುದು, ಕಾಲ, ಕಾಲಕ್ಕೆ ಲೆಕ್ಕಪತ್ರ ಸಲ್ಲಿಸುವ ಮಾಹಿತಿ ಗೊತ್ತಾಗುವುದಿಲ್ಲ. ನೋಂದಣಿ ಮಾಡಿಸದಿದ್ದರೆ ಮಾರಾಟ ಸಾಧ್ಯವಾಗುವುದಿಲ್ಲ. ಹೀಗಾಗಿ, ಜಿಎಸ್‌ಟಿಯು ನಮ್ಮ ಪಾಲಿಗೆ ಅಡಕತ್ತರಿಯಂತಾಗಿದೆ'.

ಈ ಅಡಕತ್ತರಿ ಹಲವರಿಗೆ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದರ್ಥವೇ?

ಅದೇನೇ ಇರಲಿ, 'ಒಂದು ರಾಷ್ಟ್ರ, ಒಂದು ಧರ್ಮ, ಒಂದು ಭಾಷೆ, ಒಂದು ಸಂಸ್ಕೃತಿ...' ಇತ್ಯಾದಿ 'ಒಂದು'ಗಳ ಮಂದಿಯ ಈ ಹೊಸ 'ಒಂದು ರಾಷ್ಟ್ರ, ಒಂದು ತೆರಿಗೆ' ಸದ್ಯಕ್ಕೆ ಒಂದು ತೆರಿಗೆಯನ್ನಂತೂ ತಂದಿಲ್ಲ, ಹೊಸದೊಂದು ಹೊರೆಯನ್ನೆ ಹಾಕಿರುವಂತೆ ಕಾಣುತ್ತದೆ.

8 ಎಂಬುದು 18 ಕ್ಕಿಂತ ಹೆಚ್ಚು–ಬಿಜೆಪಿ ಅಧ್ಯಕ್ಷರ ಅಚ್ಛೇದಿನ್ ಗಣಿತ

ಕಳೆದ ವಾರ ಬಿಜೆಪಿ ರಾಷ್ಟ್ರಾಧ್ಯಕ್ಷರು ಕೆಲವು ಲೆಕ್ಕಾಚಾರಗಳನ್ನು ಮುಂದಿಟ್ಟರು. ನಮ್ಮ ಹಾಲಿ ಪ್ರಧಾನಿಗಳು ವಿದೇಶ ಪ್ರವಾಸಗಳಲ್ಲಿ ಹೊಸ ದಾಖಲೆ ನಿರ್ಮಿಸಿದ್ದಾರೆ ಎಂಬುದನ್ನು ನಿರಾಕರಿಸುತ್ತ ವಾಸ್ತವವಾಗಿ ಹಿಂದಿನ ಯುಪಿಎ ಪ್ರಧಾನಿಗಳು ಇವರಿಗಿಂತ ಹೆಚ್ಚು ವಿದೇಶ ಪ್ರವಾಸ ಮಾಡಿದ್ದಾರೆ, ಆದರೆ ಅವರ ಭೇಟಿಗಳಿಗೆ ಜಗತ್ತು ಅಷ್ಟು ಮಹತ್ವ ಕೊಡುತ್ತಿರಲಿಲ್ಲ, ಈಗಿನ ಪ್ರಧಾನಿಗಳನ್ನು ಜಗತ್ತು ಆಶ್ಚರ್ಯದಿಂದ ನೋಡುತ್ತಿರುವುದೇ ಹೆಚ್ಚು ಗಮನಕ್ಕೆ ಬರಲು ಕಾರಣ ಎಂದಿದ್ದಾರೆ.

ಇದನ್ನು ಪರೀಕ್ಷಿಸಲು ಹೊರಟ ಹಿಂದಿ ಮಾಧ್ಯಮವೊಂದು ವಿದೇಶಾಂಗ ಇಲಾಖೆಯಿಂದ ಸಂಗ್ರಹಿಸಿದ ಅಧಿಕೃತ ಮಾಹಿತಿಯ ನಂತರ ಈ ಮೇಲಿನ ಗಣಿತದ ಬಗ್ಗೆ ಹೇಳಿದೆ. ಯುಪಿಎ ಪ್ರಧಾನಿಗಳು ತಮ್ಮ ಹತ್ತು ವರ್ಷಗಳ ಅಧಿಕಾರಾವಧಿಯಲ್ಲಿ 80 ವಿದೇಶ ಯಾತ್ರೆ ನಡೆಸಿದ್ದಾರೆ, ಅಂದರೆ ವಾರ್ಷಿಕ ಸರಾಸರಿ 8. ಹಾಲಿ ಪ್ರಧಾನಿಗಳದ್ದು ಎಪ್ರಿಲ್ 2017ರ ವರೆಗೆ ಮೂರು ವರ್ಷಗಳಲ್ಲಿ 56, ಅಂದರೆ ಸರಾಸರಿ 18. ಅಂದರೆ 8 > 18 !

ಇದಾದ ನಂತರ ಪ್ರಧಾನಿಗಳ ವಿದೇಶ ಯಾತ್ರೆಗಳ ಸಂಖ್ಯೆ 62 ಕ್ಕೇರಿದೆ!

ವಿದೇಶ ಭೇಟಿಯಿಂದ ಹಿಂದಿರುಗಿದ ಕೂಡಲೇ ಅಹಮದಾಬಾದಿನ ಸಾಬರಮತಿ ಆಶ್ರಮದಲ್ಲಿ ಮಾತಾಡುತ್ತ ಗೋಭಕ್ತಿಯ ಹೆಸರಿನಲ್ಲಿ ಹಿಂಸಾಚಾರ ಮಾಡಬಾರದು ಎಂದು ಗಾಂಧೀಜಿ ಹೇಳಿದ್ದರು ಎಂದು ಪ್ರಧಾನ ಮಂತ್ರಿಗಳು ಹೇಳಿದರು.

ಪ್ರಧಾನ ಮಂತ್ರಿಗಳಂತಹ ಬಲಿಷ್ಟ ನಾಯಕರು ಗೋರಕ್ಷಕರೆನ್ನುವ ಹಾವಳಿ ನಿಲ್ಲಿಸಲು ಮಹಾತ್ಮ ಗಾಂಧಿಯವರ ಹೆಸರು ಬಳಸಿದ್ದೇಕೆ ಎಂದೊಬ್ಬ ವಿಶ್ಲೇಷಕರು ಪ್ರಶ್ನಿಸಿದ್ದಾರೆ.

ಪ್ರಧಾನಿಗಳು ಹೀಗೆ ಹೇಳಿದ ದಿನವೇ ಝಾರ್ಖಂಡ್‌ನಲ್ಲಿ ಒಬ್ಬ ಡ್ರೈವರ್‌ನನ್ನು ಆತ ಗೋಮಾಂಸ ಸಾಗಿಸುತ್ತಿದ್ದ ಎಂಬ ಊಹೆಯ ಮೇಲೆ ಬಡಿದು ಸಾಯಿಸಲಾಯಿತು. –ಸುದ್ದಿ



ವ್ಯಂಗ್ಯಚಿತ್ರ: ಮಂಜುಲ್

'ನಮ್ಮ ಮುಖ್ಯಮಂತ್ರಿಗಳಿಗೆ ಒಂದು ಬಾರ್ ಸೋಪಿನ ಭೀತಿ'

ಇದು ಇತ್ತೀಚೆಗೆ ನೂರು ದಿನಗಳನ್ನು 'ಯಶಸ್ವಿ'ಯಾಗಿ ಪೂರ್ಣಗೊಳಿಸಿದ ಉತ್ತರ ಪ್ರದೇಶದ ಮುಖ್ಯಮಂತ್ರಿಯ ಬಗ್ಗೆ ನಿವೃತ್ತ ಉಪಕುಲಪತಿಯೊಬ್ಬರ ಟಿಪ್ಪಣಿ.

ಜುಲೈ 2 ರಂದು ಗುಜರಾತಿನಿಂದ ಲಕ್ನೌಗೆ ಬರುತ್ತಿದ್ದ 45 ದಲಿತ ಕಾರ್ಯಕರ್ತರನ್ನು ಉತ್ತರ ಪ್ರದೇಶದ ಝಾನ್ಸಿಯಲ್ಲಿ ಬಂಧಿಸಲಾಯಿತು. ಕಾರಣ? ಅವರು 125 ಕೆಜಿ ತೂಕದ, ಗೌತಮ ಬುದ್ಧನ ಚಿತ್ರ ಕೆತ್ತಿದ್ದ ಬೃಹತ್ ಸಾಬೂನೊಂದನ್ನು ಉತ್ತರಪ್ರದೇಶದ ಮುಖ್ಯಮಂತ್ರಿಗಳಿಗೆ ಅವರು ತಮ್ಮ 'ಬುದ್ಧಿಯನ್ನು ಸ್ವಚ್ಛಗೊಳಿಸಿಕೊಳ್ಳಿ' ಎಂದು ಕೊಡುಗೆ–ಯಾಗಿ ನೀಡಲು, ಒಯ್ಯುತ್ತಿದ್ದರು. ಕೆಲವು ದಿನಗಳ ಹಿಂದೆ ಖುಶಿನಗರದ ದಲಿತರರು ಅವರನ್ನು ಭೇಟಿ ಮಾಡುವ ಬದಲು ಸ್ವಚ್ಛವಾಗಿ ಬರುವಂತೆ ಸೋಪು, ಶಾಂಪೂಗಳನ್ನು ಹಂಚಾಲಗಿತ್ತು ಎಂಬ ವರದಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮರುದಿನ ಇದನ್ನು ಪ್ರತಿಭಟಿಸಲು ಮತ್ತು ದಲಿತರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳನ್ನು ಖಂಡಿಸಲು ಪತ್ರಿಕಾ ಸಮ್ಮೇಳನವೊಂದಕ್ಕೆ ನೆರೆದಿದ್ದ ರಾಜ್ಯದ ನಿವೃತ್ತ ಐಜಿಪಿ ಎಸ್ ಆರ್ ದಾರಾಪುರಿ ಸೇರಿದಂತೆ ಎಂಟು ಪ್ರಮುಖ ಮುಖಂಡರನ್ನು ಪೋಲೀಸರು ಯುಪಿ ಪ್ರೆಸ್‌ಕ್ಲಬ್ ಒಳಗೇ ಬಂದು ಬಂಧಿಸಿದರು. ಅವರ 'ಅಪರಾಧ' ಮುಖ್ಯಮಂತ್ರಿಗಳ ವಿರುದ್ಧ ಒಂದು ಪ್ರತಿಭಟನಾ ರ್‍ಯಾಲಿಯನ್ನು ಯೋಜಿಸಿದ್ದರು ಎಂಬುದು!

ಪ್ರತಿಭಟಿಸುವ ಹಕ್ಕು ಕೂಡ ಇಲ್ಲದಿರುವ ತುರ್ತು ಪರಿಸ್ಥಿತಿಯ ಆಳ್ವಿಕೆಯನ್ನು ಹೇರಬೇಕಾದ ಸ್ಥಿತಿ ಉತ್ತರ ಪ್ರದೇಶದಲ್ಲಿ ಈ ನೂರು ದಿನಗಳಲ್ಲಿ ಬಂದಿದೆಯೇ ಎಂದು ಪ್ರಜಾಪ್ರಭುತ್ವವಾದಿಗಳು ಪ್ರಶ್ನಿಸುತ್ತಿದ್ದಾರೆ.

ಪೋಲೀಸ್ ಅಧಿಕಾರಿಗಳಿಗೆ ವರ್ಗಾವಣೆ 'ಕೊಡುಗೆ':

ಮ.ಪ್ರ.ದಲ್ಲಿ 'ಮುಜುಗರ' ತಂದಕ್ಕಾಗಿ, ಉ.ಪ್ರ.ದಲ್ಲಿ ಅಹಂಭಾವ ಪ್ರಶ್ನಿಸಿದ್ದಕ್ಕಾಗಿ

ಅಚ್ಛೇದಿನ್ ಪಕ್ಷದ ಆಳ್ವಿಕೆಯ ರಾಜ್ಯ ಮಧ್ಯಪ್ರದೇಶದಲ್ಲಿ ಒಬ್ಬ ಪೋಲಿಸ್ ಅಧಿಕಾರಿಯನ್ನು ವರ್ಗ ಮಾಡಲಾಗಿದೆ. ಯಥಾಪ್ರಕಾರ ಸಾಮಾನ್ಯ ವರ್ಗಾವರ್ಗಿಯೆಂಬ ಅದೇ ಹಳೇ ದಿನಗಳ ಸಮಜಾಯಿಷಿ.

ಆದರೆ ಈತನನ್ನು ಎಂದಿನಂತೆ ಆಳುವ ಪಕ್ಷದ ಪರವಾಗಿ 'ಕರ್ತವ್ಯ' ನಿರ್ವಹಿಸಲಿಲ್ಲ ಎಂದು ವರ್ಗ ಮಾಡಿದ್ದಲ್ಲ, ಆ 'ಕರ್ತವ್ಯ'ವನ್ನು ಯಶಸ್ವಿಯಾಗಿ ನಿರ್ವಹಿಸದೆ ಆಳುವವರಿಗೆ ಮುಜುಗರ ಉಂಟು ಮಾಡಿದರು ಎಂಬುದಕ್ಕಾಗಿ.

ಈತ, ಸಂಜಯ್ ಪಾಠಕ್, ಬುರ್ಹಾನ್‌ಪುರ ಜಿಲ್ಲೆಯ ಶಾಹಪುರ್ ಪೋಲೀಸ್ ಇನ್ಸ್‌ಪೆಕ್ಟರ್. ಭಾರತ–ಪಾಕಿಸ್ತಾನ ಕ್ರಿಕೆಟ್ ಮ್ಯಾಚ್‌ನಲ್ಲಿ ಪಾಕಿಸ್ತಾನದ ಗೆಲುವನ್ನು ಆಚರಿಸಿದರೆಂದು ರಾಜದ್ರೋಹದ ಆಪಾದನೆಯಲ್ಲಿ ಬಂಧಿಸಿ, ನಂತರ ಈ ಬಗ್ಗೆ ವ್ಯಾಪಕ ಆಕ್ರೋಶ ಎದ್ದು ಬಂದಾಗ, ಏನೋ ತಪ್ಪಾಗಿದೆ ಎಂದು ಅದನ್ನು ಕೋಮುಭಾವನೆಗಳನ್ನು ಉದ್ರೇಕಿಸಿದ ಪ್ರಕರಣವಾಗಿ ಬದಲಿಸಿದ 'ಖ್ಯಾತಿ'ಯ ಅಧಿಕಾರಿ.

ಬಂಧಿತರಲ್ಲಿ ಒಬ್ಬನಾದ ತನ್ನ ಗೆಳೆಯನನ್ನು ಬಿಡಿಸಿಕೊಳ್ಳಲು ಬಂದ ಹಿಂದೂ ವ್ಯಕ್ತಿಯಿಂದಲೇ ಈ 'ರಾಷ್ಟ್ರೀಯವಾದಿ' ಅಧಿಕಾರಿ ಸುಳ್ಳು ದೂರನ್ನು ಬರೆಸಿಕೊಂಡು ಅದು ಬಯಲಾದದ್ದು ಈ ಮುಜುಗರಕ್ಕೆ ಕಾರಣ. ಕೇಸರಿ ಪಡೆಗಳು 'ರಾಜದ್ರೋಹ' ಪ್ರಕರಣದಲ್ಲಿ ಸಾಕಷ್ಟು ಬೆಂಬಲ ನೀಡಲಿಲ್ಲ ಎಂಬುದು ಆತನ ಕಸಿವಿಸಿ ಎಂದು ಈ ಪ್ರಕರಣದ ವಿಚಾರದಲ್ಲಿ ಆತನನ್ನು ಭೇಟಿ ನೀಡಿದ ಪತ್ರಕರ್ತರಿಗೆ ಕಂಡು ಬಂದ ಸಂಗತಿ(ರಾಕೇಶ್ ದೀಕ್ಷಿತ್ ಮತ್ತು ಮೃದುಲಾ ಚಾರಿ, ಸ್ಕ್ರಾಲ್.ಇನ್, ಜುಲೈ2).


ಅಚ್ಛೇದಿನ್ ಪಕ್ಷದ ಆಳ್ವಿಕೆಯ ಮತ್ತೊಂದು, ಬಹುಶಃ ಹೊಸ 'ಮಾದರಿ'ಯ ರಾಜ್ಯ, ಉತ್ತರ ಪ್ರದೇಶದ್ದು ಸಂಪೂರ್ಣ ಭಿನ್ನ ಪ್ರಕರಣ. ಬುಲಂದ್‌ಶಹರ್‌ನಲ್ಲಿ ಸಾರಿಗೆ ದಾಖಲೆಗಳ ತನಿಖೆ ಮಾಡುವಾಗ ಅಹಂಭಾವ ಪ್ರದರ್ಶಿಸಿದ ಬಿಜೆಪಿ ಕಾರ್ಯಕರ್ತರನ್ನು ಲೆಕ್ಕಿಸದೆ ಜೈಲಿಗೆ ಕಳಿಸಿದ ಮಹಿಳಾ ಪೋಲೀಸ್ ಅಧಿಕಾರಿ ಶ್ರೇಷ್ಠಾ ಠಾಕುರ್ ಅವರನ್ನು ದೂರದ ಬಹ್ರೈಕ್‌ಗೆ ವರ್ಗ ಮಾಡಲಾಗಿದೆ ಎಂದು ಸುದ್ದಿ ಬಂದಿದೆ. ಯಥಾಪ್ರಕಾರ, ಸಾಮಾನ್ಯ ಪೊಲೀಸ್ ವರ್ಗಾವರ್ಗಿ ಎಂಬ ಸಮಜಾಯಿಷಿ.

ಆದರೆ ತಮ್ಮ ಪ್ರತಿಷ್ಠೆಗೆ ಧಕ್ಕೆ ಬಂದಿದೆ ಎಂದು ಬಿಜೆಪಿ ಮಂದಿ ಮುಖ್ಯಮಂತ್ರಿಗಳಿಗೆ ದೂರು ಕೊಟ್ಟಿದ್ದರಿಂದ ಈ ವರ್ಗಾವಣೆ ನಡೆದಿದೆ ಎಂದು ಹೇಳಲಾಗುತ್ತಿದೆ. ಇದು ತಾನು ಕರ್ತವ್ಯ ನಿರ್ವಹಿಸಿದ್ದಕ್ಕಾಗಿ ನೀಡಿರುವ ಉಡುಗೊರೆಯಿರಬಹುದು, ಬಹ್ರೈಕ್‌ಗೆ ಬನ್ನಿ ಎಂದು ಫೇಸ್‌ಬುಕ್‌ನಲ್ಲಿ ಬರೆದಿದ್ದಾರಂತೆ.


ಇದಕ್ಕೆ ಮೊದಲು, ಮೂರು ವಾರಗಳ ಹಿಂದೆ, ಈಶಾನ್ಯ ಭಾರತದಲ್ಲಿ ಕೇಂದ್ರೀಯ ಮೀಸಲು ಪೋಲೀಸ್ ಪಡೆಯ ಇನ್ಸ್‌ಪೆಕ್ಟರ್–ಜನರಲ್ ರಜನೀಶ್ ರಾಯ್ ಅವರನ್ನು ಇಂತಹುದೇ 'ಸಾಮಾನ್ಯ ವರ್ಗಾವರ್ಗಿ'ಯ ಅಡಿಯಲ್ಲಿ ಆಂಧ್ರಪ್ರದೇಶದ ಚಿತ್ತೂರಿನಲ್ಲಿರುವ ಭಯೋತ್ಪಾದನೆ–ನಿರೋಧ ತರಬೇತಿ ಸಂಸ್ಥೆಗೆ ವರ್ಗಾಯಿಸಲಾಗಿದೆ. ಇದು ಅವರು ಇಬ್ಬರು ಶಂಕಿತ ಬೋಡೋಲ್ಯಾಂಡ್ ಉಗ್ರರ ಸಾವಿನ ತನಿಖೆ ಮಾಡಿ ವಾಸ್ತವವಾಗಿ ಇದು ಕ್ರೂರವಾಗಿ ಕೊಂದು ಅದನ್ನು ಸೇನೆ, ಸಿಆರ್‌ಪಿಎಫ್, ಎಸ್‌ಎಸ್‌ಬಿ ಮತ್ತು ಅಸ್ಸಾಂ ಪೋಲಿಸ್ ನಡೆಸಿದ ಜಂಟಿ ಎನ್‌ಕೌಂಟರ್ ಕಾರ್ಯಾಚರಣೆ ಎಂದು ತೋರಿಸಿರುವ ಘಟನೆ, ಇದು ಒಂದು "ಆಳವಾದ ಸಾಂಸ್ಥಿಕ ಅಸ್ವಸ್ಥತೆ'ಯ ಸಂಕೇತ ಎಂದು ತನ್ನ ವರದಿಯಲ್ಲಿ ಆತಂಕ ವ್ಯಕ್ತ ಪಡಿಸಿದ್ದಕ್ಕೆ 'ಉತ್ತಮ ಆಳ್ವಿಕೆ'ಯ ಮಂದಿ ನೀಡಿದ 'ಕೊಡುಗೆ' ಎನ್ನಲಾಗಿದೆ.



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



ಒಂದೆಡೆಯಲ್ಲಿ ಕಾರ್ಪೋರೇಟ್ ವಲಯದಿಂದ ಮತ್ತು ಶ್ರೀಮಂತರಿಂದ ನೇರ ತೆರಿಗೆಗಳ ಮೂಲಕ ಸಂಗ್ರಹ ಮಾಡುವುದನ್ನು ನಿರ್ಲಕ್ಷಿಸುತ್ತ, ಜಿಎಸ್‌ಟಿಯನ್ನು ತಂದು ತೆರಿಗೆ ನೆಲೆಯನ್ನು ವಿಸ್ತರಿಸುವ ಮಾತಾಡುತ್ತಿರುವುದರಲ್ಲಿಯೇ ವರ್ಗ ಪಕ್ಷಪಾತ ಅಡಗಿದೆ. ಆದ್ದರಿಂದಲೇ ಕಾರ್ಪೋರೇಟ್ ಬಂಡವಾಳ ಇದಕ್ಕೆ ಅಖಂಡ ಬೆಂಬಲ ಕೊಡುತ್ತಿದೆ.

ಜಿಎಸ್‌ಟಿ ಭಾರತೀಯ ಆರ್ಥಿಕ ವ್ಯವಸ್ಥೆಗೆ ಅದ್ಭುತವಾಗಿ ಕೆಲಸ ಮಾಡಿಕೊಡುವ ಜಾದೂ ಶಕ್ತಿ ಹೊಂದಿದೆ ಎಂಬುದು ಭಾರತೀಯ ಬಂಡವಾಳಶಾಹಿಯ ದಿವಾಳಿಕೋರತನದ ಒಂದು ಪ್ರತಿಬಿಂಬ. ಬಹುಶಃ ತಾತ್ಕಾಲಿಕವಾಗಿ ಜಿಎಸ್‌ಟಿ ಬಂಡವಾಳಕ್ಕೆ ಒಂದು ನಿದ್ದೆಗುಳಿಗೆಯಾಗಿ ಕೆಲಸ ಮಾಡುತ್ತದೆ ಎಂದು ಹೇಳಬಹುದೇನೋ.

ಸುರಜಿತ್ ಮುಜುಂದಾರ್

ಜಿ ಎಸ್ ಟಿ ಬಿಕ್ಕಟ್ಟು ಪರಿಹರಿಸುವ ಜಾದೂ ಅಲ್ಲ ಬಂಡವಾಳಕ್ಕೊಂದು ನಿದ್ದೆ ಗುಳಿಗೆ

'ಸರಕು ಮತ್ತು ಸೇವೆಗಳ ತೆರಿಗೆ'(ಜಿಎಸ್‌ಟಿ)ಯತ್ತ ಪರಿವರ್ತನೆಯ ಸುತ್ತ ಭಾರೀ ಉತ್ಪ್ರೇಕ್ಷೆಗಳನ್ನು ಹರಿಯಬಿಡಲಾಗಿದೆ. ಅದನ್ನು ಭಾರತದ ಎಲ್ಲ ಆರ್ಥಿಕ ಸಮಸ್ಯೆಗಳಿಗೆ ಜಾದೂ ಪರಿಹಾರ ಎಂಬ ಸ್ಥಾನಕ್ಕೆ ಏರಿಸಲಾಗಿದೆ. ಆದರೆ ಇದಕ್ಕಿಂತ ಸತ್ಯ ದೂರವಾದ ಸಂಗತಿ ಬೇರೆ ಇಲ್ಲ. ಈಗಿರುವ ತೆರಿಗೆ ವ್ಯವಸ್ಥೆಗೆ ಹೋಲಿಸಿದರೆ ಜಿಎಸ್‌ಟಿ ಯ ಸಾಧಕ-ಬಾಧಕಗಳೇನು ಎಂಬ ಪ್ರಶ್ನೆ ಒತ್ತಟ್ಟಿಗಿರಲಿ, ಅದು ತೆರಿಗೆ ವಲಯದಲ್ಲೂ ಭಾರತೀಯ ಆರ್ಥಿಕ ವ್ಯವಸ್ಥೆಯ ಮೂಲಭೂತ ಸವಾಲುಗಳನ್ನು ಎದುರಿಸಿಲ್ಲ.

ಅದನ್ನೇನಾದರೂ ಸುಧಾರಣೆ ಎನ್ನಬಹುದಾದರೆ, ಅದು ಪರೋಕ್ಷ ತೆರಿಗೆ ವ್ಯವಸ್ಥೆಯ ಸುಧಾರಣೆ ಎನ್ನಬಹುದಷ್ಟೇ. ಜಿಎಸ್‌ಟಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಆದಾಯಗಳನ್ನು ಹೆಚ್ಚಿಸುವದಾದಲ್ಲಿ (ಇದನ್ನೂ ಖಡಾಖಂಡಿತವಾಗಿ ಹೇಳಲು ಸಾಧ್ಯವಿಲ್ಲ), ಅದು ಪರೋಕ್ಷ ತೆರಿಗೆಗಳ ಮೂಲಕ ಆದಾಯ ಕ್ರೋಡೀಕರಿಸಲು ನೆರವಾಗಬಹುದಷ್ಟೇ. ಇದು ಒಟ್ಟು ತೆರಿಗೆಗಳಲ್ಲಿ ಪರೋಕ್ಷ ತೆರಿಗೆಯ ಪಾಲನ್ನು ಹೆಚ್ಚಿಸಬಹುದು. ಇನ್ನೊಂದೆಡೆಯಲ್ಲಿ ನೇರ ತೆರಿಗೆಗಳ 'ಹೊರೆ'ಯನ್ನು ಕಡಿಮೆ ಮಾಡಲು ಸರಕಾರ ಮುಂದಾದರೆ ಪರೋಕ್ಷ ತೆರೆಗಳ ಈ ತೂಕ ಇನ್ನಷ್ಟು ಹೆಚ್ಚುತ್ತದೆ. ಜಿಎಸ್‌ಟಿಯ ಉತ್ಕಟ ಬೆಂಬಲಿಗರೂ ಆಗಿರುವ ಕಾರ್ಪೊರೇಟ್‌ಗಳಂತೂ ಈ ಬಗ್ಗೆ ಪದೇ-ಪದೇ ರಾಗಾಲಾಪನೆ ಮಾಡುತ್ತಲೇ ಇವೆ.

ಆದರೆ ನಮ್ಮ ತೆರಿಗೆ ವ್ಯವಸ್ಥೆಯ ಸಮಸ್ಯೆಯೆಂದರೆ ಈಗಾಗಲೇ ಅದರಲ್ಲಿ ಪರೋಕ್ಷ ತೆರಿಗೆಗಳ ಪಾಲು ನೇರ ತೆರಿಗೆಗಳ ದುಪ್ಪಟ್ಟು ಇದ್ದು, ಇದು ಬಡ ದುಡಿಮೆಗಾರರು ತಾವು ಹೊರಬಹುದಾದಕ್ಕಿಂತ ಹೆಚ್ಚಿನ ಹೊರೆಯನ್ನು ಸಹಿಸಿಕೊಳ್ಳುವಂತೆ ಮಾಡಿದೆ. ಜಿಎಸ್‌ಟಿ ಕೂಡ ಪರೋಕ್ಷ ತೆರಿಗೆಗಳು (ಅದರಲ್ಲೂ ಅಬಕಾರಿ ಸುಂಕಗಳು) ಸರಕಾರಗಳಿಗೆ ಆದಾಯ ಬೆಳವಣಿಗೆಯ ಪ್ರಮುಖ ಸಾಧನವಾಗಿರುವ ಮತ್ತು ಸಂಪತ್ತು ತೆರಿಗೆಯನ್ನು ತೆಗೆದುಹಾಕಿರುವ ಹಿನ್ನೆಲೆಯಲ್ಲೇ ಬಂದಿದೆ.

ಅಂತರ್ಗತ ವರ್ಗ ಪಕ್ಷಪಾತ

ಆದ್ದರಿಂದ ಒಂದೆಡೆಯಲ್ಲಿ ಕಾರ್ಪೊರೇಟ್ ವಲಯದಿಂದ ಮತ್ತು ಶ್ರೀಮಂತರಿಂದ ನೇರ ತೆರಿಗೆಗಳ ಮೂಲಕ ಸಂಗ್ರಹ ಮಾಡುವುದನ್ನು ನಿರ್ಲಕ್ಷಿಸುತ್ತ, ಜಿಎಸ್‌ಟಿಯನ್ನು ತಂದು ತೆರಿಗೆ ನೆಲೆಯನ್ನು ವಿಸ್ತರಿಸುವ ಮಾತಾಡುತ್ತಿರುವುದರಲ್ಲಿಯೇ ವರ್ಗ ಪಕ್ಷಪಾತ ಅಡಗಿದೆ. ಆದ್ದರಿಂದಲೇ ಕಾರ್ಪೊರೇಟ್ ಬಂಡವಾಳ ಇದಕ್ಕೆ ಅಖಂಡ ಬೆಂಬಲ ಕೊಡುತ್ತಿದ್ದರೆ, ಸಣ್ಣ ಬಂಡವಾಳದಾರರು ಇದರ ಪರಿಣಾಮಗಳ ಬಗ್ಗೆ ಆತಂಕಿತರಾಗಿದ್ದಾರೆ.

ಜಾಗತಿಕ ಬಿಕ್ಕಟ್ಟು ಎರಗುವ ಮೊದಲು ನೇರ ತೆರಿಗೆಗಳಲ್ಲಿ ಹಿಂದಿನದಕ್ಕೆ ಹೋಲಿಸಿದರೆ ಒಂದು ತ್ವರಿತ ಹೆಚ್ಚಳ ಆಗಿತ್ತು. ಆದರೆ ಅದು ಕೂಡ ತೀವ್ರವಾಗಿ ಹೆಚ್ಚುತ್ತಿದ್ದ ಅಮಾನತೆಗಳಿಂದ ಆಗಿತ್ತೇ ವಿನಹ ಕಾರ್ಪರೇಟ್ ಲಾಭಗಳು ಮತ್ತು ಶ್ರೀಮಂತರ ಮೇಲಿನ ತೆರಿಗೆಗಳ ದರಗಳಲ್ಲಿ ಹೆಚ್ಚಳದಿಂದಾಗಿ ಅಲ್ಲ. ಆನಂತರವಂತೂ ಒಟ್ಟು ಜಿಡಿಪಿಯಲ್ಲಿ ಅನುಪಾತ ವಾಸ್ತವವಾಗಿ ಇಳಿದಿದೆ. 2011-12ರಿಂದ ಆರಂಭಿಸಿರುವ 'ವಿತ್ತೀಯ ಕ್ರೋಡೀಕರಣ' ಆಗುತ್ತಿರುವುದು ಸಾರ್ವಜನಿಕ ವೆಚ್ಚಗಳನ್ನು ನಿರ್ಬಂಧಿಸುವ ಮೂಲಕ ಮತ್ತು ಜತೆಗೆ ಪರೋಕ್ಷ ತೆರಿಗೆಗಳ ಮೂಲಕವೇ. ನಿರ್ದಿಷ್ಟವಾಗಿ ಮೋದಿ ಸರಕಾರವಂತೂ ಅಬಕಾರಿ ಸುಂಕಗಳನ್ನು ಗಮನಾರ್ಹವಾಗಿ ಹೆಚ್ಚಿಸಿಕೊಳ್ಳಲು ಅಂತರ್‍ರಾಷ್ಟ್ರೀಯ ತೈಲ ಬೆಲೆಗಳ ಇಳಿಕೆಯ ಪ್ರಯೋಜನವನ್ನು ಬಾಚಿ-ಕೊಂಡಿದೆ.

ಆದಾಯ ಹೆಚ್ಚಿದಂತೆ ತೆರಿಗೆ ದರ ಹೆಚ್ಚಿಸುವ ಪ್ರಶ್ನೆ ನವ-ಉದಾರವಾದೀ ದಾರಿಯ ಸಂದರ್ಭದಲ್ಲಿ ಉಂಟಾಗಿರುವ ಆರ್ಥಿಕ ಧ್ರುವೀಕರಣದ ಸಂದರ್ಭದಲ್ಲಿ ಅತ್ಯಂತ ಮಹತ್ವದ್ದಾಗುತ್ತದೆ. ಅಸಮಾನತೆಯನ್ನು ಹೆಚ್ಚಿಸುವ ಇನ್ನೊಂದು ಆಯಾಮವೂ ಇದೆ. ಅದೆಂದರೆ ಈಗ ಭಾರತದಲ್ಲಿ ನಡೆಯುತ್ತಿರುವ ಬಂಡವಾಳ ಶೇಖರಣೆಯಲ್ಲಿ ಅಡಗಿರುವ ಮೂಲಭೂತ ವೈರುಧ್ಯ.

ಒಂದೆಡೆಯಲ್ಲಿ ಈ ಬಂಡವಾಳ ಶೇಖರಣೆ ಶ್ರಮಶಕ್ತಿಯನ್ನು ಬಹಳಷ್ಟು ಅಗ್ಗಗೊಳಿಸುವ ವ್ಯವಸ್ಥೆಯನ್ನು ತಂದು, ಆಮೂಲಕ ತೀವ್ರ ಶೋಷಣೆಯ ಅವಕಾಶಗಳನ್ನು ಹೆಚ್ಚಿಸುವ ತಂತ್ರದ ಮೇಲೆಯೇ ಹೆಚ್ಚಾಗಿ ಅವಲಂಬಿಸಿದೆ.

ಇನ್ನೊಂದೆಡೆಯಲ್ಲಿ ಇದೇ ಬಂಡವಾಳ ಶೇಖರಣೆಯ ಪ್ರಕ್ರಿಯೆಗೆ ಅಡ್ಡಿಯಾಗಿ ನಿಂತಿದೆ- ಒಂದೆಡೆಯಲ್ಲಿ ಅಗ್ಗದಲ್ಲಿ ದುಡಿಸಿಕೊಳ್ಳುತ್ತಿರುವುದು ದುಡಿಮೆಗಾರರ ಖರೀದಿ ಸಾಮರ್ಥ್ಯವನ್ನು ಕೂಡ ಕುಗ್ಗಿಸಿ ಆರ್ಥಿಕ ವ್ಯವಸ್ಥೆಯಲ್ಲಿ ಸರಕುಗಳ ಬೇಡಿಕೆಯ ಮೇಲೆ ನಿರ್ಬಂಧ ಹಾಕುತ್ತಿದೆ, ಜತೆಗೆ ಕಾರ್ಮಿಕರ 'ಉತ್ಪಾದಕತೆ'ಯನ್ನು ಹೆಚ್ಚಿಸುವ ಅವಕಾಶವನ್ನೂ ಕುಂಠಿತಗೊಳಿಸಿದೆ.

ಕರ್ಷಕ ಬಿಕ್ಕಟ್ಟಿನ ಒಂದು ಸಂಕೇತವಾಗಿ ಕೃಷಿ ಆದಾಯಗಳೂ ಕೆಳ ಮಟ್ಟಕ್ಕೆ ಇಳಿದಿರುವುದು ಈಗಾಗಲೇ ಭಾರತೀಯ ಆರ್ಥಿಕದಲ್ಲಿ ಇರುವ ಸಂಬಳಗಳನ್ನು ಕಡಿಮೆ ಮಟ್ಟಕ್ಕೆ ತಳ್ಳುವ ಪ್ರಕ್ರಿಯೆಯನ್ನು ನವ-ಉದಾರವಾದಿ ವ್ಯವಸ್ಥೆಯಲ್ಲಿ ಇನ್ನಷ್ಟು ತೀವ್ರಗೊಳಿಸಲಾಗಿದೆ. ಕಾರ್ಮಿಕ ಕಾನೂನುಗಳ ಫಲಗಳನ್ನು ಸಂಘಟಿತ ಉದ್ಯಮ ವಲಯದ ಕಾರ್ಮಿಕರು ಅನಗತ್ಯವಾಗಿ ಪಡೆಯುತ್ತಿದ್ದಾರೆ ಎಂದು ಬಂಡವಾಳಶಾಹಿಗಳು ಚಿತ್ರಿಸುತ್ತಿರುತ್ತಾರೆ. ಆದರೆ ಈ ಕಾರ್ಮಿಕರ ನಿಜವೇತನಗಳೂ ಕಳೆದ ಎರಡೂವರೆ ದಶಕಗಳಲ್ಲಿ ಸಂಪೂರ್ಣವಾಗಿ ಸ್ಥಗಿತಗೊಂಡಿವೆ, ಸರಕುಗಳ ಹೆಚ್ಚಿದ ಮೌಲ್ಯಗಳಲ್ಲಿ ಕಾರ್ಮಿಕರ ಪಾಲು ಹತ್ತನೇ ಒಂದಂಶಕ್ಕಿಳಿದಿದೆ.

ಹೀಗೆ, ತಮ್ಮ ಶ್ರಮಶಕ್ತಿಯ ಮೂಲಕ ಆದಾಯ ಗಳಿಸಬೇಕಾದ ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳ ಒಂದು ದೊಡ್ಡ ಭಾಗವನ್ನು ಕಡಿಮೆ ಆದಾಯದ ಬಂದೀಖಾನೆಯಲ್ಲಿ ಕೂಡಹಾಕಲಾಗಿದೆ. ನಮ್ಮ ಆರ್ಥಿಕ ವ್ಯವಸ್ಥೆ ಇದರಿಂದ ತಪ್ಪಿಸಿಕೊಳ್ಳಲು ಬಿಡುತ್ತಿಲ್ಲ.

ಇನ್ನೊಂದೆಡೆಯಲ್ಲಿ, ಬಂಡವಾಳಶಾಹಿಗಳಿಗೆ ಸಂಬಳದಲ್ಲಿ ಸ್ಥಗಿತತೆ ಮತ್ತು ಇಳಿಕೆಯಿಂದಾಗಿ ಮಿಗುತೆ ಮತ್ತು ಲಾಭದ ಪಾಲು(ಮತ್ತು ಉನ್ನತ ಸಂಬಳದ ಒಂದು ಸಣ್ಣ ಬಿಳಿಕಾಲರ್ ನೌಕರರ ಪಾಲು) ಹಿಗ್ಗಿಸಲು ಸಾಧ್ಯವಾಗಿದೆ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ತಲಾ ಕಾರ್ಮಿಕ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ ಮತ್ತು ಅಗ್ಗದ ಶ್ರಮಶಕ್ತಿ ಮತ್ತು ಶ್ರಮ ಶಕ್ತಿ ಹೆಚ್ಚಾಗಿ ಬೇಕಾಗುವ ಸೇವೆಗಳು ಅವರಿಗೆ ಲಭ್ಯವಾಗಿದೆ. ಇವೆಲ್ಲ ಒಟ್ಟಾಗಿ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ಮಟ್ಟದ ವರೆಗೆ 'ಸ್ಪರ್ಧಾತ್ಮಕ'ವಾಗಿರಲು ಭಾರತೀಯ ಬಂಡವಾಳ ಮತ್ತು ಭಾರತೀಯ ಆರ್ಥಿಕ ವ್ಯವಸ್ಥೆಗೆ ಆಧಾರವನ್ನೂ ಒದಗಿಸಿದೆ.

ಲಾಭದ ಪಾಲಿನಲ್ಲಿ ಹೆಚ್ಚಳ ಕೆಲವೊಂದು ಅವಧಿಗಳಲ್ಲಿ ಕಾರ್ಪೊರೇಟ್ ವಲಯದಿಂದ ಹೂಡಿಕೆ ತ್ವರಿತವಾಗಿ ಬೆಳೆಯಲು ಕೂಡ ಉತ್ತೇಜನೆ ನೀಡಿದೆ. ಆದರೆ ಇಂತಹ ಹೂಡಿಕೆಯ ವಿಸ್ತರಣೆಯನ್ನು ಕಾಯ್ದುಕೊಳ್ಳಲು ನಿರ್ಬಂಧಿಸಿರುವ ಒಂದು ಮಹತ್ವದ ಅಂಶವೆಂದರೆ ಕಡಿಮೆ ಸಂಬಳದ ಆರ್ಥಿಕ ವ್ಯವಸ್ಥೆಯೊಂದರಲ್ಲಿ ಸರಕುಗಳ ಬೇಡಿಕೆಗೆ ಉಂಟಾಗುವ ನಿರ್ಬಂಧ. ಉತ್ಪಾದಿತ ಬಳಕೆ ಸರಕುಗಳಿಗೆ ಮಾರುಕಟ್ಟೆ ಒಂದೆಡೆಯಲ್ಲಿ ಬಹುಪಾಲು ಜನರ ಕಡಿಮೆ ಆದಾಯಗಳಿಂದಾಗಿ, ಇನ್ನೊಂದೆಡೆಯಲ್ಲಿ ಏರುತ್ತಿರುವ ಆದಾಯಗಳ ಜನಗಳಿಗೆ ಬೇಕಾಗುವ ಸೇವೆಗಳತ್ತ ಪಲ್ಲಟದಿಂದಾಗಿ ಸೀಮಿತಗೊಂಡಿದೆ.

ಆರ್ಥಿಕ ವ್ಯವಸ್ಥೆಯಲ್ಲಿ ಬೇಡಿಕೆಯ ವಿಧಾನ ಕೂಡ ಹೆಚ್ಚಿನ ಆಮದು ಮತ್ತು ಹೆಚ್ಚಿನ ಬಂಡವಾಳದತ್ತ ತಿರುಗಿದೆ. ಭಾರತೀಯ ಕೈಗಾರಿಕೆಯ ಜಾಗತಿಕ ಸ್ಪರ್ಧಾತ್ಮಕತೆ ಹೆಚ್ಚಿಸುವಲ್ಲಿ ಕಡಿಮೆ ಸಂಬಳದ ವ್ಯವಸ್ಥೆ ಇದಕ್ಕಿಂತ ಮುಂದೆ ಹೋಗಲು ಸಾಧ್ಯವಿಲ್ಲ. ನಿಜ ಹೇಳಬೇಕೆಂದರೆ, ಅಗ್ಗದ ಶ್ರಮಶಕ್ತಿಯ ಮೇಲೆಯೇ ವಿಪರೀತವಾಗಿ ಅವಲಂಬಿಸಿರುವುದು, ಅದರ ಜತೆಗೆ ಸಾರ್ವಜನಿಕ ಶಿಕ್ಷಣದ ಆರೋಗ್ಯದ ಕೆಳಮಟ್ಟ ಮತ್ತು ಇತರ ಮೂಲರಚನೆಗಳ ಕೆಳಮಟ್ಟವೂ ಸೇರಿ ಶ್ರಮದ ಉತ್ಪಾದಕತೆಯನ್ನು ಉತ್ತಮ ಪಡಿಸಲು ಬಾಧಕಗಳಾಗಿವೆ.

ಹೀಗೆ ಅಗ್ಗದ ಶ್ರಮಶಕ್ತಿ ಇದ್ದರೂ ಭಾರತದಲ್ಲಿ ಕೈಗಾರಿಕೆಗೆ ರಫ್ತಿನ ಮೂಲಕ ತ್ವರಿತ ವಿಸ್ತರಣೆ ಸಾಧಿಸಲು ಸಾಧ್ಯವಾಗಿಲ್ಲ. ಕೈಗಾರಿಕಾ ಉತ್ಪಾದನೆ ಕಾರ್ಪೊರೇಟ್ ಹೂಡಿಕೆಗಳನ್ನು ಬಳಸಿಕೊಳ್ಳುವಲ್ಲಿ ಒಂದು ಮಹತ್ವದ ವಲಯವೂ ಹೌದು, ಮತ್ತು ಹೂಡಿಕೆಯಿಂದ ಅತಿ ಹೆಚ್ಚು ನೇರ ಬೇಡಿಕೆ ನಿರ್ಮಿಸುವ ವಲಯವೂ ಹೌದು. ಆದ್ದರಿಂದ ಬಂಡವಾಳ ಶೇಖರಣೆಯ ಪ್ರಕ್ರಿಯೆಯನ್ನು ಮತ್ತೆ-ಮತ್ತೆ ಬೇಡಿಕೆಯ ಕೊರತೆ ಬಾಧಿಸಿದೆ. ಭಾರತದಲ್ಲಿ ಹೂಡಿಕೆಯಲ್ಲಿ ಸ್ಥಗಿತತೆಯ ಪ್ರಸಕ್ತ ಅವಧಿ ನವ-ಉದಾರವಾದಿ ಯುಗ ಆರಂಭವಾದ ಮೇಲೆ ಕಾಣುತ್ತಿರುವ ಅತಿ ದೀರ್ಘ ಅವಧಿ.

ಬಿಕ್ಕಟ್ಟು ಆಳವಾಗಿದೆ, ಬಹಳ ದಿನ ಉಳಿಯುವಂತದ್ದು

ವಿತ್ತೀಯ ಧೋರಣೆ ನವ-ಉದಾರವಾದಿ ಬೆಳವಣಿಗೆಯ ದಿಕ್ಕು ಭಾರತೀಯ ಬಂಡವಾಳಶಾಹಿಯನ್ನು ಯಾವ ಇಕ್ಕಟ್ಟಿಗೆ ತಳ್ಳಿದೆಯೋ ಅದನ್ನು ಸರಿಪಡಿಸುವಲ್ಲಿ ಒಂದು ಮಹತ್ವದ ಪಾತ್ರ ವಹಿಸುತ್ತದೆಂಬುದೇನೋ ನಿಜ. ಈ ಇಕ್ಕಟ್ಟು ಬಹಳ ಆಳವಾಗಿದೆ ಮತ್ತು ಬಹಳ ಕಾಲ ಉಳಿಯುವಂತದ್ದು ಎಂಬ ಎಲ್ಲ ಸಂಕೇತಗಳೂ ಇವೆ. ಮೂಲರಚನೆಗಳು, ಕೃಷಿ ಮತ್ತು ಸಾಮಾಜಿಕ ಸೇವೆಗಳ ಮೇಲೆ ಸಾರ್ವಜನಿಕ ಖರ್ಚುಗಳನ್ನು ಹೆಚ್ಚಿಸಿ, ಅದಕ್ಕಾಗಿ ತೆರಿಗೆ ತೆರಲು ಸಾಧ್ಯವಿರುವವರಿಂದ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಿ ಈ ಇಕ್ಕಟ್ಟಿನ ಹಿಂದಿರುವ ಅಸಮತೋಲನಗಳನ್ನು ಸರಿಪಡಿಸಬಹುದು.

ಆದರೆ ಇದಕ್ಕೆ ಅಗ್ಗದ ಶ್ರಮಶಕ್ತಿಯ ವ್ಯವಸ್ಥೆಯಿಂದ ಮತ್ತು ಅದಕ್ಕೆ ಸಂಬಂಧಪಟ್ಟಂತೆ ದೊಡ್ಡ ಬಂಡವಾಳಿಗರಿಗೆ ಇಂತಹ ಪ್ರಯೋಜನಗಳನ್ನು ತಂದು ಕೊಟ್ಟ ಬೆಳವಣಿಗೆಯ ದಾರಿಯಿಂದ ದೂರ ಸರಿಯ ಬೇಕಾಗುತ್ತದೆ. ಆದರೆ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಶಾಹಿಯ ಮತ್ತು ಭಾರತೀಯ ದೊಡ್ಡ ಬಂಡವಾಳಿಗರ ವರ್ಗ ಕಣ್ಣೋಟದಿಂದಾಗಿ ಇಂತಹ ಯಾವ ಪಲ್ಲಟವನ್ನೂ ಅವರು ಪರಿಹಾರವಾಗಿ ಕಾಣುವುದಿಲ್ಲ, ಬದಲಾಗಿ ಅವರ ಬಿಕ್ಕಟ್ಟಿನ ಉಲ್ಬಣ ಎಂದೇ ಬಗೆಯುತ್ತಾರೆ. ಆದ್ದರಿಂದ ಅವರು ಸಾಂಪ್ರದಾಯಿಕ ಆರ್ಥಿಕ ಧೋರಣೆಗಳಿಗೇ ಅಂಟಿ-ಕೊಂಡಿರುತ್ತಾರೆ. ಅವರ ಅಪಾರ ಶಕ್ತಿಯಿಂದಾಗಿ ಭಾರತೀಯ ಪ್ರಭುತ್ವವೂ ಅದಕ್ಕೆ ಬದ್ಧವಾಗಿರುವಂತೆ ಮಾಡಬಲ್ಲರು.

ಆದರೆ ಬಿಕ್ಕಟ್ಟನ್ನು ಪರಿಹರಿಸಲಾಗದ ತಮ್ಮ ಅಸಮರ್ಥತೆಯಿಂದಾಗಿ ಅವರು ನವ-ಉದಾರವಾದಿ ಚೌಕಟ್ಟನ್ನು ತ್ಯಜಿಸುವ ಬದಲು ಅದರೊಳಗೇ ಒಂದು ಪರಿಹಾರ ಪಡೆಯುವ ಹತಾಶ ಪ್ರಯತ್ನ ನಡೆಸುತ್ತಾರೆ. ಜಿಎಸ್‌ಟಿ ಭಾರತೀಯ ಆರ್ಥಿಕ ವ್ಯವಸ್ಥೆಗೆ ಅದ್ಭುತವಾಗಿ ಕೆಲಸ ಮಾಡಿಕೊಡುವ ಜಾದೂ ಶಕ್ತಿ ಹೊಂದಿದೆ ಎಂಬುದು ಭಾರತೀಯ ಬಂಡವಾಳಶಾಹಿಯ ದಿವಾಳಿಕೋರತನದ ಒಂದು ಪ್ರತಿಬಿಂಬ. ಬಹುಶಃ ತಾತ್ಕಾಲಿಕವಾಗಿ ಜಿಎಸ್‌ಟಿ ಬಂಡವಾಳಕ್ಕೆ ಒಂದು ನಿದ್ದೆಗುಳಿಗೆಯಾಗಿ ಕೆಲಸ ಮಾಡುತ್ತದೆ ಎಂದು ಹೇಳಬಹುದೇನೋ.

ಸಂಸತ್ತಿನ ಜಿಎಸ್‌ಟಿ 'ಅಧಿವೇಶನ' ಕುರಿತು ಸೀತಾರಾಮ್ ಯೆಚುರಿ

ಸರಕಾರ ಸರಿಯಾದ ತಯಾರಿ ನಡೆಸಿಲ್ಲ, ಮತ್ತು ದೇಶ ಜುಲೈ 1 ರಂದು ಜಿಎಸ್‌ಟಿ ಆರಂಭಕ್ಕೆ ಸಿದ್ಧವಾಗಿಲ್ಲ. ಅದರೊಂದಿಗೆ ಹಲವು ಸಮಸ್ಯೆಗಳಿವೆ, ಉದಾ: ಬಹುವಿಧ ದರಗಳು, ಮತ್ತು ನಮ್ಮ ಮಧ್ಯಮ, ಸಣ್ಣ ಮತ್ತು ಪುಟ್ಟ ಉದ್ದಿಮೆಗಳ ಮೇಲೆ ಬಹಳ ಕೆಟ್ಟ ಪರಿಣಾಮ ಉಂಟಾಗಲಿದೆ.

ನಾವು ಜಿಎಸ್‌ಟಿ ಮಂಡಳಿ ನಿರ್ಣಯಗಳ ಸಂಸದೀಯ ಪರೀಕ್ಷಣೆಗೆ ಕೇಳಿದ್ದೆವು, ಆದರೆ ಬಿಜೆಪಿಗೆ ಇಂತಹ ಪರೀಕ್ಷಣೆ ಬೇಕಿಲ್ಲ. ಇದು ಒಂದು ಒಳ್ಳೆಯ ಪ್ರಜಾಪ್ರಭುತ್ವ ನಡವಳಿಕೆಯೂ ಅಲ್ಲ, ಅದು ಆರೋಗ್ಯಕರ ಆರ್ಥಿಕ ನಡವಳಿಕೆಯೂ ಅಲ್ಲ.

ಜಿಎಸ್‌ಟಿ ಆರಂಭ ಸ್ವಾತಂತ್ರ್ಯ ಆಂದೋಲನದ ಸಮಾರಂಭಗಳಿಗೆ ಹೋಲಿಸಬಹುದಾದಂತದ್ದು ಖಂಡಿತಾ ಅಲ್ಲ. ಸಂಸತ್ತು ಕೇವಲ ಮೂರು ಬಾರಿ ಮಧ್ಯರಾತ್ರಿಯಲ್ಲಿ ಸಭೆ ಸೇರಿದೆ, ಅದು ಸ್ವಾತಂತ್ರ್ಯ ಆಂದೋಲನದ ದಿನಾಂಕಗಳ ಸ್ಮರಣೆಗೆ ಮಾತ್ರ. ಅದು ಮಧ್ಯರಾತ್ರಿಯ ಸಭೆಗಳ ಪಾವಿತ್ರ್ಯ.

ಇದು ಈ ಸರಕಾರದಲ್ಲಿ ಪ್ರತಿಯೊಂದು ಸಂಗತಿಯಂತೆ ಶುದ್ಧ ಪ್ರದರ್ಶನ-ಖಯಾಲಿ ಅಷ್ಟೇ, ಸಾರ್ವಜನಿಕ ಹಣದ ಪೂರ್ಣ ಪೋಲು, ಈ ಸಮಾರಂಭಕ್ಕೆ ನವೀಕರಣಕ್ಕೆ 5 ಕೋಟಿ ರೂ. ಖರ್ಚಾಗಿದೆ ಎಂದು ವರದಿಯಾಗಿದೆ.

ಜಿಎಸ್‌ಟಿಯನ್ನು ಗುರುತಿಸುವ ಇಂತಹ ದಾರಿಯನ್ನು ನಾವು ಒಪ್ಪುವುದಿಲ್ಲ.

ಸೇಲಂನಿಂದ ಚೆನ್ನೈವರೆಗೆ ಜಾತಿಭಂಡತನ ವಿರೋಧಿಸಿ 400 ಕಿ.ಮೀ. ಪಾದಯಾತ್ರೆ



ತಮಿಳುನಾಡಿನಲ್ಲಿ ಜೂನ್ ತಿಂಗಳ ಮಧ್ಯಭಾಗದಲ್ಲಿ ಒಂದು ವಿಶಿಷ್ಟ ಪಾದಯಾತ್ರೆ ನಡೆಯಿತು. ಅದು 'ಮರ್ಯಾದಾ ಹತ್ಯೆ' ಎಂದು ಹೇಳುವ, ವಾಸ್ತವವಾಗಿ ಜಾತಿ ಭಂಡತನದ ವಿರುದ್ಧ ಜನರ ಗಮನ ಸೆಳೆಯಲು ಮತ್ತು ಇದನ್ನು ಪರಿಣಾಮಕಾರಿಯಾಗಿ ತಡೆಯಲು ಸರಕಾರವನ್ನು ಬದ್ಧಗೊಳಿಸುವ ಒಂದು ಕಾನೂನು ತರಬೇಕೆಂದು ಆಗ್ರಹಿಸಿ ಈ ಪಾದಯಾತ್ರೆಯನ್ನು ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ರಂಗ(ಟಿಎನ್‌ಯುಇಎಫ್) ಸಂಘಟಿಸಿತ್ತು. ರಂಗದ ಪ್ರಧಾನ ಕಾರ್ಯದರ್ಶಿ ಸ್ಯಾಮುವೆಲ್ ರಾಜ್ ಇದರ ನೇತೃತ್ವ ವಹಿಸಿದ್ದರು.

ಕಳೆದ ಐದು ವರ್ಷಗಳಲ್ಲಿ ತಮಿಳುನಾಡಿನಲ್ಲಿ ಇಂತಹ ಸುಮಾರು 200 ಹತ್ಯೆಗಳು ನಡೆದಿವೆ. ಸಾಮಾನ್ಯವಾಗಿ ಇವು ಅಂತರ್ಜಾತೀಯ ವಿವಾಹಗಳ ಸಂದರ್ಭದಲ್ಲಿ 'ಜಾತಿ ಮರ್ಯಾದೆ' ರಕ್ಷಿಸುವ ಹೆಸರಲ್ಲಿ ನಡೆಸಿರುವ ಹತ್ಯೆಗಳು.ಬಲಿಯಾದವರಲ್ಲಿ ದಲಿತರು ಮತ್ತು ಮಹಿಳೆಯರ ಸಂಖ್ಯೆಯೇ ಹೆಚ್ಚು. ಸಾಮಾನ್ಯವಾಗಿ ಹುಡುಗ ಅಥವ ಹುಡುಗಿಯ ಸಂಬಂಧಿಕರೇ ಈ ಹತ್ಯೆಗಳನ್ನು ನಡೆಸಿರುತ್ತಾರೆ. ಆದರೆ ಇತ್ತೀಚೆಗೆ ಒಂದು ಪ್ರಕರಣದಲ್ಲಿ ಜಾತಿ ಸಂಘಟನೆಯವರು ಗೋಕುಲ್‌ರಾಜ್ ಎಂಬವನನ್ನು ಅಪಹರಿಸಿ 'ಜಾತಿ ಮರ್ಯಾದೆ ಉಳಿಸಲು' ಅವನನ್ನು ಸಾಯಿಸಿದ್ದಾರೆ.

ಪ್ರಭುತ್ವ ಯಂತ್ರ, ಅದರಲ್ಲೂ ಪೋಲೀಸರು ಸಾಮಾನ್ಯವಾಗಿ ಇಲ್ಲಿ ಕೊಲೆಗಡುಕರ ಪಕ್ಷಪಾತಿಗಳೇ ಆಗಿರುತ್ತಾರೆ, ವಿಭಿನ್ನ ಜಾತಿಗಳ ದಂಪತಿಗಳನ್ನು ಪ್ರತ್ಯೇಕಿಸುವ ವರೆಗೂ ಹೋಗಿದ್ದಾರೆ. ಇವೆಲ್ಲದರ ವಿರುದ್ಧ ಜನಾಭಿಪ್ರಾಯ ಕ್ರೋಡೀಕರಿಸುವಲ್ಲಿ ಮತ್ತು ಸರಕಾರದ ಗಮನವನ್ನೂ ಸೆಳೆಯುವಲ್ಲಿ ಈ 13 ದಿನಗಳ ಪಾದಯಾತ್ರೆ ಯಶಸ್ವಿಯಾಗಿದೆ.

ಜೂನ್ 9ರಂದು ಸೇಲಂನಲ್ಲಿ ಈ ಪಾದಯಾತ್ರೆಯನ್ನು ಟಿಎನ್‌ಯುಇಎಫ್ ಅಧ್ಯಕ್ಷ ಪಿ.ಸಂಪತ್ ಅವರು ಉದ್ಘಾಟಿಸಿದರು. ವಿಸಿಕೆಯ ಸಂಸ್ಥಾಪಕ ಮುಖಂಡ ತಿರುಮಾವಳಗನ್ ಇನ್ನೊಬ್ಬ ಮುಖ್ಯ ಅತಿಥಿಯಾಗಿದ್ದರು. ಮೊದಲ ದಿನ 'ಮರ್ಯಾದಾ ಹತ್ಯೆ'ಗೆ ತುತ್ತಾದ ಐದು ಮಂದಿಯ ಸಂಬಂಧಿಗಳು, ಮಾರಿಮುತ್ತು ಹೆಂಡತಿ ಅಭಿರಾಮಿ, ನಂದಿನಿಯ ತಾಯಿ, ಐಶ್ವರ್ಯಳ ತಂದೆ, ಗೋಕುಲ್‌ರಾಜ್ ತಾಯಿ, ವಿಮಲಾದೇವಿಯ ಪತಿ ಭಾಗವಹಿಸಿದ್ದು ಇನ್ನೊಂದು ವಿಶೇಷವಾಗಿತ್ತು. ಮುಂದೆ ಸೇಲಂನಲ್ಲಿ ಕಲೈ ಸೆಲ್ವಿಯ ಸೋದರಿ ಭಾಗವಹಿಸಿದರು, ತಿಂಡಿವಾಣಂನಲ್ಲಿ ಶಂಕರ್ ಹೆಂಡತಿ ಕೌಸಲ್ಯ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು ಚೆನ್ನೈನಲ್ಲಿ ಕಲ್ಪನಾಳ ಪತಿ ಭಾಗವಹಿಸಿದರು.

ಪಾದಯಾತ್ರೆ ಸೇಲಂ, ವಿಲ್ಲುಪುರಂ, ಕಾಂಚೀಪುರಂ ಜಿಲ್ಲೆಗಳಲ್ಲಿ ಸಂಚರಿಸಿ ಜೂನ್ 22ರಂದು ಚೆನ್ನೈ ತಲುಪಿತು. ಅದು ಚೆನ್ನೈ ಪ್ರವೇಶಿಸಲು ಪೋಲಿಸರು ಅಡ್ಡಿಪಡಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಇದನ್ನು ಪ್ರತಿಭಟಿಸಿದಾಗ ನೂರಾರು ಮಂದಿಯನ್ನು ಬಂಧಿಸಲಾಯಿತು.

ಪ್ರತಿದಿನ 25 ಕಿ.ಮೀ. ಕ್ರಮಿಸಿದ ಪಾದಯಾತ್ರೆ ದಿನದ ಕೊನೆಯಲ್ಲಿ ಸಾರ್ವಜನಿಕ ಸಭೆಯನ್ನು ಸಂಘಟಿಸಲಾಗಿತ್ತು. ಜೂನ್ 21ರಂದು ಚೆನ್ನೈನಲ್ಲಿ ಹಿರಿಯ ಕಮ್ಯುನಿಸ್ಟ್ ಮುಖಂಡ ಎನ್.ಶಂಕರಯ್ಯ ಮತ್ತು ನಿವೃತ್ತ ನ್ಯಾಯಮೂರ್ತಿ ಹರಿಪ್ರಥಮನ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ತಮಿಳುನಾಡಿನಲ್ಲಿ ಜಾತಿ ಅತ್ಯಾಚಾರಗಳ ವಿರುದ್ಧ ಹೋರಾಡುತ್ತಿರುವ ಸಂಘಟನೆಗಳು, ವಿಸಿಕೆ, ಬಿಎಸ್‌ಪಿ, ಆಧಿ ತಮಿಳರ್ ಕಚ್ಚಿ, ಆದಿ ತಮಿಳರ್ ಪೆರವಯಿ ಮುಂತಾದ ಐದಾರು ಸಂಘಟನೆಗಳು ಈ ಪಾದಯಾತ್ರೆಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು ಇನ್ನೊಂದು ಮುಖ್ಯ ಅಂಶವಾಗಿತ್ತು.

ವಿದ್ಯಾರ್ಥಿ, ಯುವಜನರು, ಮಹಿಳೆಯರ ಸಾಮೂಹಿಕ ಸಂಘಟನೆಗಳು ಮಾತ್ರವಲ್ಲ, ವಿಮಾನೌಕರರ ಸಂಘಟನೆ ಮತ್ತಿತರ ಸಂಘಟನೆಗಳೂ ಸಕ್ರಿಯ ಬೆಂಬಲ ನೀಡಿದವು.

ಜನಸಾಮಾನ್ಯರ ನಡುವೆ ಜಾತಿನಿರ್ಮೂಲನಕ್ಕೆ ಬೆಂಬಲ ಹೆಚ್ಚಿದ್ದು ಈ ಪಾದಯಾತ್ರೆಯ ಅನುಭವಗಳಲ್ಲಿ ಒಂದು ಎಂದು ಸ್ಯಾಮುವೆಲ್ ರಾಜ್ ಹೇಳುತ್ತಾರೆ. ಹಣಸಂಗ್ರಹದಲ್ಲಿ ನೆರವು ಮತ್ತು ಇತರ ರೀತಿಗಳಲ್ಲಿ ಜನ ಸಹಾಯ ಮಾಡಿದರು. ಬಹಳಷ್ಟು ಮಂದಿ ಜಾತಿಯನ್ನು ಒಂದು ಅಡ್ಡಿಯಾಗಿ ಕಾಣುತ್ತಾರೆ. ಆದರೆ ಜಾತಿಯ ವಿರುದ್ಧ ಹೋರಾಡಬೇಕಾದರೆ ಒಂದು ನಿರಂತರ ಸ್ವರೂಪದ ಬೃಹತ್ ಜನತಾ ಆಂದೋಲನದ ಅಗತ್ಯವಿದೆ, ಆಗ ಮಾತ್ರವೇ ಜನಗಳ ಮನೋಭಾವದಲ್ಲಿ ಬದಲಾವಣೆ ಬರಲು ಸಾಧ್ಯ ಎಂದು ಅವರು ಹೇಳುತ್ತಾರೆ.

ಜೂನ್ 29ರಂದು ಟಿಎನ್‌ಯುಇಎಫ್ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿಯಾಗಿ 14 ಅಂಶಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದೆ.

ಕೇರಳ: ಪರಿಶಿಷ್ಟ ಜಾತಿ/ಬುಡಕಟ್ಟು ಅಭ್ಯರ್ಥಿಗಳ ವಿಶೇಷ ನೇಮಕಾತಿ

ಸರಕಾರದ ವಿವಿಧ ಇಲಾಖೆಗಳಲ್ಲಿ ಹಾಗು ಸರಕಾರೀ ಒಡೆತನದ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಬುಡಕಟ್ಟುಗಳ ಪ್ರಾತಿನಿಧ್ಯದಲ್ಲಿನ ಕೊರತೆಯನ್ನು ತ್ವರಿತವಾಗಿ ನೀಗಿಸುವಂತೆ, ಇದಕ್ಕಾಗಿ ಕೂಡಲೇ ವಿಶೇಷ ನೇಮಕಾತಿ ನಡೆಸುವಂತೆ ಕೇರಳದ ಮುಖ್ಯಮಂತ್ರಿಗಳು ನಿರ್ದೇಶನ ನೀಡಿದ್ದಾರೆ. ಒಂದು ಉನ್ನತ ಮಟ್ಟದ ಸಭೆಯ ನಂತರ ಈ ನಿರ್ದೇಶನವನ್ನು ನೀಡಲಾಗಿದೆ, ಈ ಸಮುದಾಯಗಳಿಗೆ ಸೇರಿದವರಿಗೆ ಬೆಳವಣಿಗೆ ಮತ್ತು ಸಾಮಜಿಕ ಪ್ರಗತಿಯ ಪರಿಸರವನ್ನು ನಿರ್ಮಿಸುವುದು ಎಲ್‌ಡಿಎಫ್ ಸರಕಾರದ ಗುರಿ ಎಂದು ಅವರು ಹೇಳಿದ್ದಾರೆ.

ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿನ ಖಾಲಿ ಮೀಸಲಾತಿ ಹುದ್ದೆಗಳ ವಿವರಗಳನ್ನು ರಾಜ್ಯ ಲೋಕ ಸೇವಾ ಆಯೋಗಕ್ಕೆ ವಿಳಂಬವಿಲ್ಲದೆ ಸಲ್ಲಿಸಬೇಕು, ಅಗತ್ಯವಿದ್ದಲ್ಲಿ ಹೆಚ್ಚುವರಿ ಹುದ್ದೆಗಳನ್ನು ನಿರ್ಮಿಸಬೇಕು ಎಂದು ನಿರ್ದೇಶನ ನಿಡಲಾಗಿದೆ.

ಲೋಕಸೇವಾ ಆಯೋಗಕ್ಕೆ ಕೂಡ ವರದಿಯಾಗಿರುವ, ಆದರೆ ಇನ್ನೂ ಭರ್ತಿಯಾಗದ ಮೀಸಲಾತಿ ಹುದ್ದೆಗಳ ಬಗ್ಗೆ ಮಾಹಿತಿ ನೀಡಲು ಹೇಳಲಾಗಿದೆ.

ಎಲ್ಲರನ್ನೂ ಒಳಗೊಳ್ಳುವ ಎಲ್‌ಡಿಎಫ್ ಸರಕಾರ ಧೋರಣೆಯ ಭಾಗವಾಗಿ ಇದನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಪಶ್ಚಿಮ ಬಂಗಾಲದಲ್ಲಿ ಕೋಮು ಧ್ರುವೀಕರಣದ ರಾಜಕೀಯದಲ್ಲಿ ಹತ್ತಿ ಉರಿದ ಬದುರಿಯ

ಪಶ್ಚಿಮ ಬಂಗಾಲದ ಉತ್ತರ 24 ಪರಗಣ ಜಿಲ್ಲೆಯ ಬದುರಿಯದಲ್ಲಿ ಜುಲೈ 4ರಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ರ್‍ಯಾಪಿಡ್ ಆಕ್ಷನ್ ಪೋರ್ಸ್ ಮತ್ತು ಬಿಎಸ್‌ಎಫ್‌ನ 400 ಸಿಬ್ಬಂದಿ ಈಗ ಅಲ್ಲಿ ಪರಿಸ್ತಿತಿಯನ್ನು ಹತೋಟಿಯಲ್ಲಿಡಲು ಹೆಣಗುತ್ತಿದ್ದಾರೆ ಎಂದು ವರದಿಯಾಗಿದೆ.

ಈ ನಡುವೆ ಪರಿಸ್ತಿತಿಯನ್ನು ಶಮನಗೊಳಿಸುವ ಪ್ರಶ್ನೆಯ ಬದಲು ರಾಜ್ಯದಲ್ಲಿ ಆಳುವ ಟಿಎಂಸಿ ಮತ್ತು ಕೇಂದ್ರದಲ್ಲಿ ಆಳುವ ಬಿಜೆಪಿ ನಡುವೆ ಕೆಸರೆರಚಾಟ ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಕೇಂದ್ರದಿಂದ ನೇಮಕಗೊಂಡ ರಾಜ್ಯಪಾಲರ ನಡುವೆ ಮಾತಿನ ಬಾಣಗಳು ಓಡಾಡುತ್ತಿವೆಯಷ್ಟೆ.

ಜುಲೈ 4ರಂದು ಫೇಸ್‌ಬುಕ್‌ನಲ್ಲಿ ಮುಸ್ಲಿಂ ಪವಿತ್ರ ಕ್ಷೇತ್ರವೊಂದರ ಬಗ್ಗೆ ಕೆಟ್ಟ ಟಿಪ್ಪಣಿಯ ನಂತರ ಇಂತಹ ಪರಿಸ್ಥಿತಿ ಉಂಟಾಗಿದೆ. ಹನ್ನೊಂದನೇ ತರಗತಿಯ ವಿದ್ಯಾರ್ಥಿಯೊಬ್ಬನ ಫೇಸ್‌ಬುಕ್‌ನಲ್ಲಿ ಈ ಟಿಪ್ಪಣಿ ಹರಿದಾಡಿದ ನಂತರ ಪೋಲಿಸರು ಆತನನ್ನು ಬಂಧಿಸಿದರು. ಆದರೆ ಅದರೊಂದಿಗೆ ಪರಿಸ್ತಿತಿ ಹತೋಟಿಗೆ ಬರುವ ಬದಲು ಅದು ಉದ್ವಿಗ್ನಗೊಂಡಿದೆ.

ಬಾಂಗ್ಲಾದೇಶ ಗಡಿಯ ಸಮೀಪವಿರುವ ಈ ಪ್ರದೇಶ ಹಿಂದುಗಳು ಮತ್ತು ಮುಸ್ಲಿಮರು ಪರಸ್ಪರ ಸೌಹಾರ್ದದಿಂದ ಬದುಕುತ್ತಿದ್ದ ಪ್ರದೇಶ. ಆದರೆ 2011ರ ವಿಧಾನಸಭಾ ಚಉನಾವಣೆಗಳ ನಂತರದಿಂದ ಇಲ್ಲಿ ಕೋಮು ಧ್ರುವೀಕರಣದ ಪ್ರಕ್ರಿಯೆ ಆರಂಬವಾಯಿತು. ಅದರ ದುಷ್ಫಲವೇ ಈ ಘಟನೆ ಎನ್ನಲಾಗಿದೆ.

ಆ ವಿದ್ಯಾರ್ಥಿ ಅಂತಹ ಟಿಪ್ಪಣಿ ಹಾಕಲು ಸಾಧ್ಯವಿಲ್ಲೆಂಬುದು ಆತನ ಕುಟುಂಬದ ಮುಸ್ಲಿಂ ನೆರೆ–ಕರೆಯವರ ಖಡಾಖಂಡಿತ ಆಭಿಪ್ರಾಯ. ಆತನೂ ಪೋಲೀಸರಿಗೆ ಹಾಗೆಯೇ ಹೇಳಿದ್ದಾನಂತೆ. ಇನ್ನೊಂದೆಡೆಯಲ್ಲಿ ಬಿಜೆಪಿ ಮಂದಿ ಈ ಗಲಭೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆಯೇ ಹೊರತು ಆ ಫೇಸ್‌ಬುಕ್ ಟಿಪ್ಪಣಿಯ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂಬುದನ್ನು ಹಲವರು ಗಮನಿಸಿದ್ದಾರೆ. ಅಲ್ಲದೆ ಕೇಸರಿಪಡೆಗಳ ಫೇಸ್‌ಬುಕ್ ಟಿಪ್ಪಣಿಗಳಲ್ಲಿ ಇಲ್ಲಿನ ಉದ್ವಿಗ್ನ ಪರಿಸ್ತಿತಿಯ ಬಗ್ಗೆ ಊಹಾಪೋಹಗಳು ಹರಿದಾಡುತ್ತಿವೆಯಂತೆ.

"ಎಲ್ಲಿದೆ ಆಡಳಿತ, ರಾಜ್ಯ ಸರಕಾರ ಇಲ್ಲಿಯ ಜನತೆಗೆ ರಕ್ಷಣೆ ಕೊಡುವಲ್ಲಿ ವಿಫಲವಾಗಿದೆ" ಎಂದು ಸಿಪಿಐ(ಎಂ)ನ ಹಿರಿಯ ಮುಖಂಡ ಹಾಗೂ ಸಂಸದ್ ಸದಸ್ಯ ಮಹಮ್ಮದ್ ಸಲೀಂ ಹೇಳಿದ್ದಾರೆ. ಮುಖ್ಯಮಂತ್ರಿ–ರಾಜ್ಯಪಾಲರ ನಡುವಿನ ಜಟಾಪಟಿಯನ್ನು ಟೀಕಿಸುತ್ತ 'ಇದೇನು ವೈಯಕ್ತಿಕ ವಿಷಯವೇ?' ಎಂದು ಪ್ರಶ್ನಿಸಿದ್ದಾರೆ. ಮುಖ್ಯಮಂತ್ರಿಗಳು ಕೋಮುವಾದಿ ರಾಜಕೀಯಕ್ಕೆ ನೆರವಾಗುತ್ತಿದ್ದಾರೆ, ತಕ್ಷಣ ಸರ್ವಪಕ್ಷ ಸಭೆಯನ್ನು ಕರೆಯಲಿ ಎಂದು ಆಗ್ರಹಿಸಿದ್ದಾರೆ.



ಇನ್ನೊಂದೆಡಯಲ್ಲಿ ಬಿಜೆಪಿ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವಂತೆ ಆಗ್ರಹಿಸುತ್ತಿದೆ. ಇದಕ್ಕೆ ಪ್ರತಿಕ್ರಿಯಿಸುತ್ತ ಎಡರಂಗದ ಅಧ್ಯಕ್ಷ ಬಿಮನ್ ಬಸು ಈಗ ಆಗಬೇಕಾದ್ದು ತಕ್ಷಣ ಈ ಪ್ರದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವ ಕೆಲಸ, ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂಬ ಆಗ್ರಹ ಬಿಜೆಪಿಯ ರಾಜಕೀಯ ಆಟವನ್ನು ತೋರಿಸುತ್ತದೆ ಎಂದಿದ್ದಾರೆ.

ಈ ನಡುವೆ ಜುಲೈ 7ರಂದು ರಾಜ್ಯದಾದ್ಯಂತ ಜನರು ಎಡರಂಗದ ಕರೆಯಂತೆ ಶಾಂತಿ ಮತ್ತು ಕೋಮುಸೌಹಾರ್ದಕ್ಕೆ ಬೀದಿಗಿಳಿದು ಮೆರವಣಿಗೆ ನಡೆಸುತ್ತಿದ್ದಾರೆ. ರಾಜಧಾನಿ ಕೊಲ್ಕತಾದ ಬೀದಿಗಳಿಂದ ಹಿಡಿದು ಜಂಗಲ್‌ಮಹಲ್‌ನ ಒಳನಾಡಿನ ವರೆಗೆ, ಬರ್ದ್ವಾನ್ ಪಟ್ಟಣದಿಂದ ಹಿಡಿದು ಸಿಮ್ರಪಾಲ್‌ನ ಹಳ್ಳಿಗಳ ವರೆಗೆ ಎಲ್ಲೆಲ್ಲೂ ಕೆಂಬಾವುಟಗಳನ್ನು ಹಿಡಿದು ಸಾಗಿರುವ ಮೆರವಣಿಗೆಗಳಲ್ಲಿ ರಾಜ್ಯ ದೀರ್ಘಕಾಲದ ಶಾಂತಿ ಮತ್ತು ಕೋಮು ಸೌಹಾರ್ದವನ್ನು ಉಳಿಸಿಕೊಳ್ಳಬೇಕೆಂಬ ಸಂದೇಶವನ್ನು ಸಾರುತ್ತಿದ್ದಾರೆ.

ಕೊಯಮತ್ತೂರಿನಲ್ಲಿ ಬಾಂಬೆಸೆದ ವಿಹೆಚ್‌ಪಿ ಪದಾಧಿಕಾರಿ ಬಂಧನ

ಕೊಯಮತ್ತೂರಿನಲ್ಲಿ ಸಿಪಿಐ(ಎಂ) ಕಚೇರಿಯ ಮೇಲೆ ಬಾಂಬೆಸೆದು ಪರಾರಿಯಾದ ವ್ಯಕ್ತಿ ಒಬ್ಬ ವಿಶ್ವ ಹಿಂದು ಪರಿಷದ್ ಪದಾಧಿಕಾರಿ ಎಂದು ಪತ್ತೆಯಾಗಿದ್ದು ಆತನನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ. 37 ವರ್ಷದ ಈ ವ್ಯಕ್ತಿ ಈ ಹಿಂದೆ ಲಡನ್‌ನಲ್ಲಿ ಇಂಜಿನಿಯರ್ ಆಗಿದ್ದು ಈಗ ಮೆಟ್ಟುಪಾಳ್ಯಂನಲ್ಲಿ ಯೋಗಶಿಕ್ಷಕನಂತೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಪಕ್ಷ

ತ್ರಿಪಕ್ಷೀಯ-ಮೈತ್ರಿಯ ಮರು ಸಂಯೋಜನೆಗೆ ಕರೆ



ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎ.ಎನ್.ಸಿ.) ಆಳವಾದ ಬಿಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿದೆ. ಇತ್ತೀಚಿನ ಸ್ಥಳೀಯ ಚುನಾವಣಾ ಫಲಿತಾಂಶಗಳನ್ನು ನೋಡಿದರೆ ನಿಜವಾದ ಕುಸಿತವನ್ನು ಕಾಣಲಾರಂಬಿಸಿದೆ. ಈ ಬಿಕ್ಕಟ್ಟು ಸಹಜವಾಗಿಯೇ ಪ್ರಸ್ತುತ ದಕ್ಷಿಣ ಆಫ್ರಿಕಾದ ತ್ರಿಪಕ್ಷೀಯ ಮೈತ್ರಿಕೂಟದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಈ ತ್ರಿಪಕ್ಷೀಯ ಮೈತ್ರಿಕೂಟದಲ್ಲಿ - ಆಡಳಿತರೂಢ ಎ.ಎನ್.ಸಿ., ಎಸ್.ಎ.ಸಿ.ಪಿ (ದಕ್ಷಿಣ ಆಫ್ರಿಕನ್ ಕಮ್ಯುನಿಸ್ಟ್ ಪಕ್ಷ), ಕೊಸಾಟು (ದಕ್ಷಿಣ ಆಫ್ರಿಕನ್ ಟ್ರೇಡ್ ಯೂನಿಯನ್ ಕಾಂಗ್ರೆಸ್) - ಮೂರು ಸಂಘಟನೆಗಳು ಇವೆ. ಕಮ್ಯುನಿಸ್ಟ್ ಪಕ್ಷ ಮತ್ತು ಕೊಸಾಟು ಗಳು ಇತ್ತೀಚೆಗೆ ಎ.ಎನ್.ಸಿ. ನೇತೃತ್ವದ ಸರ್ಕಾರದ ಕಾರ್ಯವೈಖರಿ ಬಗ್ಗೆ ಬಹಿರಂಗವಾಗಿಯೇ ಅಸಮಾದಾನ ವ್ಯಕ್ತಪಡಿಸಿವೆ. ಹಾಗೆಯೇ ಮೈತ್ರಿಕೂಟದ ಸಾಮಾನ್ಯ ಒಪ್ಪಂದದ ಗುರಿಯಾದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ (ಎನ್.ಡಿ.ಆರ್) ದಾರಿಯಿಂದ ತಪ್ಪುತ್ತಿರುವುದಕ್ಕೆ ಎಎನ್‌ಸಿ ನಾಯಕತ್ವವೇ ಜವಾಬ್ದಾರ ಎಂದಿವೆ. ಇದ್ಯಾವುದಕ್ಕೂ ಎ.ಎನ್.ಸಿ. ಸ್ಪಂದಿಸದಿರುವುದರಿಂದ ಕಮ್ಯುನಿಸ್ಟ್ ಪಕ್ಷ ಮೈತ್ರಿಕೂಟವನ್ನು ಮರು ಸಂಯೋಜನೆ ಮಾಡುವ ನಿಟ್ಟಿನಲ್ಲಿ ಕೆಲಸ ಆರಂಭಿಸಿದೆ. ಕಾರ್ಮಿಕ ವರ್ಗ ಮತ್ತು ಬಡ ಸಮುದಾಯಗಳಲ್ಲಿ ಭದ್ರ ನೆಲೆ ಹೊಂದಿ, ಜನಸಮೂಹಗಳನ್ನು ಸಜ್ಜುಗೊಳಿಸುವ ಕೆಲಸ ಕೈಗೆತ್ತಿಕೊಂಡಿದೆ.

ವರ್ಣಬೇಧ ನೀತಿಗಳ ವಿರುದ್ಧ - ತ್ರಿಪಕ್ಷೀಯ ಮೈತ್ರಿಕೂಟ

ವರ್ಣಬೇಧ ನೀತಿಗಳ ವಿರುದ್ಧ ಜತೆಗೂಡಿ ಹೋರಾಡಿದ ಎ.ಎನ್.ಸಿ, ಕಮ್ಯುನಿಸ್ಟ್ ಪಕ್ಷ ಮತ್ತು ಕೊಸಾಟು 1994 ರಲ್ಲಿ ವರ್ಣಬೇಧ ನೀತಿಗಳ ವಿರುದ್ಧ ಸ್ವಾತಂತ್ರ್ಯ ಪಡೆದ ನಂತರ, ದೇಶವನ್ನು ಆಳುವ ತ್ರಿಪಕ್ಷೀಯ ಒಕ್ಕೂಟದಲ್ಲಿ ಒಂದಾಗಲು ನಿರ್ಧರಿಸಿದ್ದವು.

1955 ರಲ್ಲಿಯೇ "ಫ್ರೀಡಂ ಚಾರ್ಟರ್" (ಸ್ವಾತಂತ್ರ್ಯ ಸನ್ನದು)ನಲ್ಲಿ ಅಂಗೀರಿಸಿದ ನೀತಿಗಳು ಆಡಳಿತ ನಡೆಸುವುದಕ್ಕೆ ಆಧಾರವಾಗಿರುವ ಬಗ್ಗೆ ಎಲ್ಲರೂ ಒಪ್ಪಂದಕ್ಕೆ ಬಂದಿದ್ದರು. ಈ 'ಫ್ರೀಡಂ ಚಾರ್ಟರ್' ಸಮಾಜವಾದಿ ದಸ್ತಾವೇಜು ಆಗಿರಲಿಲ್ಲ. ಆದರೆ ಕಾರ್ಯ ನಿರ್ವಹಿಸಲು ಉತ್ತಮ ದಸ್ತಾವೇಜು ಆಗಿತ್ತು. ಭೂಮಿ ಪುನರ್-ಹಂಚಿಕೆ ಮತ್ತು ಖನಿಜ ಸಂಪತ್ತು ಮತ್ತು ಏಕಸ್ವಾಮ್ಯ-ಮಾಲಿಕತ್ವದ ಉದ್ಯಮಗಳ ರಾಷ್ಟ್ರೀಕರಣವನ್ನು ಒಳಗೊಂಡಿತ್ತು. ನೆಲ್ಸನ್ ಮಂಡೇಲಾರು ಇದೊಂದು ಕ್ರಾಂತಿಕಾರಿ ದಾಖಲೆ ಎಂದು ಕರೆದಿದ್ದರು. ದಕ್ಷಿಣ ಆಫ್ರಿಕಾದ ಹಿಂದಿನ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ತೆ-ೂಡೆದು ಹಾಕದ ಹೊರೆತು, ಈ ಬದಲಾವಣೆಗಳನ್ನು ಸಾಧಿಸಲಾಗುವುದಿಲ್ಲ ಎಂದಿದ್ದರು.

ವರ್ಣಬೇಧೋತ್ತರ ದಕ್ಷಿಣ ಆಫ್ರಿಕಾದ ಸಂವಿಧಾನ ಜನಾಂಗೀಯ ಮತ್ತು ಭಾಷೆಯ ಸಮಾನತೆಯ ಬಗೆಗಿನ 'ಫ್ರೀಡಂ ಚಾರ್ಟರ್' ಅಂಶಗಳನ್ನು ಒಳಗೊಂಡಿತು. ಆದರೆ ಸಂವಿಧಾನವು ಉದ್ಯಮ-ಗಣಿಗಳ ರಾಷ್ಟ್ರೀಕರಣಕ್ಕೆ ಅಥವಾ ಭೂಮಿ ಮರುಹಂಚಿಕೆಗೆ ಸಂಬಂಧಿಸಿದಂತೆ, ಅಂಶಗಳನ್ನು ಒಳಗೊಂಡಿರಲಿಲ್ಲ. ಈ ಮಿತಿಗಳ ನಡುವೆಯೂ ಕಮ್ಯುನಿಸ್ಟ್ ಪಕ್ಷ ಆಳುವ ಮೈತಿಕೂಟದ ಭಾಗವಾಗಿರಲು ನಿರ್ಧರಿಸಿತ್ತು. ಮೈತ್ರಿಕೂಟದ ಪ್ರಮುಖ ಅಂಗವಾದ ಎ.ಎನ್.ಸಿ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಪ್ರಧಾನ ಗುರಿಯಿಂದ ದೂರ ಸರಿಯದಂತೆ ನೋಡಿಕೊಳ್ಳುವುದು ಇದಕ್ಕೆ ಪ್ರಮುಖ ಕಾರಣವಾಗಿತ್ತು.

'ಫ್ರೀಡಂ ಚಾರ್ಟರ್' ನಿಂದ ದೂರ ಸರಿದ ಎ.ಎನ್.ಸಿ.

1996 ರ ನಂತರ, ಮೆಬೆಕಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ, ಎಎನ್‌ಸಿ ಅನುಸರಿಸಿದ ನೀತಿಗಳು 'ಫ್ರೀಡಂ ಚಾರ್ಟರ್' ನಿಂದ ದೊಡ್ಡ ಪ್ರಮಾಣದಲ್ಲಿ ದೂರ ಸರಿದಿವೆ. ಗಿಯರ್(ಜಿ.ಇ.ಎ.ಆರ್.) ಎಂದು ಕರೆಯಲಾದ ಈ ನೀತಿಗಳಲ್ಲಿ ಸ್ವಲ್ಪ ಮಟ್ಟಿನ ಬೆಳವಣಿಗೆ, ಉದ್ಯೋಗವಕಾಶಗಳ ಹೆಚ್ಚಳ ಮತ್ತು ಸಂಪತ್ತಿನ ಪುನರ್ ವಿತರಣೆ ಇದ್ದಾಗ್ಯೂ ಸಹ, ಪ್ರಧಾನವಾಗಿ ಇವು ನವ-ಉದಾರವಾದ ಕಾರ್ಯತಂತ್ರದ ನೀತಿಗಳಾಗಿದ್ದು, ಈಗಾಗಲೇ ಅಸ್ತಿತ್ವದಲ್ಲಿರುವ ಆದಾಯದ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸಿವೆ. 2000 ದ ದಶಕದ ಆರಂಭದಲ್ಲಿ "ಜಾಗತಿಕ ಮತ್ತು ದೇಶಿಯ ಬಂಡವಾಳ ವಿಭಾಗಗಳ ನಡುವಿನ ವರ್ಗ ಮೈತ್ರಿಯ" ಪರಿಣಾಮವಾಗಿ ಈ ನೀತಿಗಳು ಜಾರಿಯಾದವು. ದೇಶಿಯ ಬಂಡವಾಳ ವಿಭಾಗ 'ಕರಿಯ ಬೂರ್ಜ್ವಾ' ಮತ್ತು ಸರಕಾರಿ ಅಧಿಕಾರಸ್ಥರ ಸಹಭಾಗಿತ್ವದ ಕೂಟವಾಗಿತ್ತು. ದೇಶೀಯ ಬಂಡವಾಳಗಾರರು ಹೆಚ್ಚಾಗಿ ಕುದುರಿಕೊಳ್ಳಲು ಗಿಯರ್ ಅವಕಾಶ ಒದಗಿಸಿದೆ. ಈ ನೀತಿಗಳಿಗೆ ಕಾರಣರಾದ ಎ.ಎನ್.ಸಿ, ನಾಯಕತ್ವವನ್ನು ಸೋಲಿಸಿ ದೂರ ಮಾಡುವುದರಿಂದ, 'ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿ' ಯ ಪಥದತ್ತ ಸಾಗಲು ತೊಡಕು ನಿವಾರಿಸಬಹುದು ಎಂದು ಕಮ್ಯುನಿಸ್ಟ್ ಪಕ್ಷ ಆಗ ನಂಬಿತ್ತು.

ಈ ಹಿನ್ನೆಲೆಯಲ್ಲಿ ಎಎನ್‌ಸಿ ಯ 52 ನೇ ಸಮ್ಮೇಳನವು "ಪೋಲೋಕ್ವಾನೆ" ಯಲ್ಲಿ 2007 ರಲ್ಲಿ ಜರುಗಿತು. "ಮೆಬೆಕಿ' ನೇತೃತ್ವದ ಗುಂಪು ಸೋಲನ್ನು ಅನುಭವಿಸಿತು. ಜುಮಾ ಎ.ಎನ್.ಸಿ ಯ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡರು.

ಮುಂದುವರೆದ 'ಮೆಬೆಕಿ' ನೀತಿಗಳು

ಅಧ್ಯಕ್ಷ ಜುಮಾ ರವರು ಆರಂಭದಲ್ಲಿ ಹಿಂದಿನ ಮೆಬೆಕಿ ಆಡಳಿತ ಅನುಸರಿಸಿದ ನವ-ಉದಾರವಾದ ನೀತಿಗಳನ್ನು ರದ್ದು ಮಾಡುವ ಭರವಸೆಯನ್ನು ನೀಡಿದರಾದರೂ ಸಹ, ನಿಧಾನವಾಗಿ ಎಎನ್‌ಸಿ ಮತ್ತು ಸರ್ಕಾರದ ಮೇಲಿನ ತಮ್ಮ ಹಿಡಿತವನ್ನು ಗಟ್ಟಿಗಳಿಸಿಕೊಂಡ ನಂತರ, 'ಫ್ರೀಡಂ ಚಾರ್ಟರ್' ಅಜೆಂಡಗಳನ್ನು ತಿರುಚಲು ಮುಂದಾದರು. ತಮ್ಮ ಸ್ವಂತ 'ಕಪ್ಪು ಬೂರ್ಜ್ವಾ' ವಿಭಾಗಗಳ ಹಿತಾಸಕ್ತಿಗಳನ್ನು ಉತ್ತೇಜಿಸಲು ಆರಂಭಿಸಿದರು. ನಿರ್ದಿಷ್ಟವಾಗಿ ಹೆಸರಿಸುವುದಾದರೆ, ಭಾರತೀಯ ಮೂಲದ ಉದ್ಯಮಿ ಗುಪ್ತ ಅವರನ್ನು ಬೆಳೆಸಲು ಕುಮ್ಮಕ್ಕು ಕೊಟ್ಟರು. ಇದು ಕಮ್ಯುನಿಸ್ಟ್ ಪಕ್ಷಕ್ಕೆ ಇರಿಸು-ಮುರಿಸು ಉಂಟುಮಾಡಿತು. ಅಧ್ಯಕ್ಷ ಜುಮಾ ರವರು ಅಪಾಯಕಾರಿ ಚಮಚಾ ಬಂಡವಾಳಶಾಹಿಗಳ ಜಾಲದ ಕೇಂದ್ರಬಿಂದುವಾಗಿದ್ದಾರೆ. ಈ ಜಾಲ ಹಣ ಮತ್ತು ಸಾರ್ವಜನಿಕ ಸಂಪನ್ಮೂಲಗಳನ್ನು ದುಬೈ ಮತ್ತು ಇತರೆಡೆ ಇರುವ ಖಾಸಗಿಯವರಿಗೆ ಹಸ್ತಾಂತರಿಸುವ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ನಾಶ ಮಾಡುವುದರಲ್ಲಿ ತೊಡಗಿದೆ. ರಾಜಕೀಯ ಆಶ್ರಯ ಮತ್ತು ಹಣದ ಬಲದಿಂದ ಎ.ಎನ್.ಸಿ ಯ ಆಂತರಿಕ ಪ್ರಜಾಸತ್ತೆಯನ್ನು ಕೆಡಿಸಲಾಗುತ್ತಿದೆ. ಮಂತ್ರಿಮಂಡಲ ಮತ್ತು ಪಾರ್ಲಿಮೆಂಟಿನ ಮೇಲ್ವಿಚಾರಣೆಗೆ ನಿಲುಕದ ಕಾರ್ಪೋರೇಟ್ ವಶವಾದ ಬದಲಿ ಪ್ರಭುತ್ವ ಅಧಿಕಾರ ಚಲಾಯಿಸುತ್ತಿದೆ ಎಂದು ಕಮ್ಯುನಿಸ್ಟ್ ಪಕ್ಷ ತೀರ್ಮಾನಕ್ಕೆ ಬಂದಿದೆ. ಜುಮಾ ಅಧ್ಯಕ್ಷೀಯ ಅವಧಿಯಲ್ಲಿ ಎ.ಎನ್.ಸಿ. ವೇದಿಕೆಗಳಿಂದ ಸರಕಾರದ ನೀತಿಗಳ ಬಗ್ಗೆ ತನ್ನ ಟೀಕೆಯನ್ನು ನಿಲುವುಗಳನ್ನು ಹೇಳಲಾರಂಭಿಸಿತು. ಅದಕ್ಕೆ ಸ್ಪಂದನೆ ಸಿಗದಿದ್ದಾಗ ಸಾರ್ವಜನಿಕವಾಗಿಯೇ ಟೀಕಿಸಲು ಆರಂಭಿಸಿತು. ಅಧ್ಯಕ್ಷ ಜುಮಾ ಅವರ ರಾಜಿನಾಮೆ ಕೇಳಲು ಆರಂಭಿಸಿತು. ಈಗ 'ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿ' ಸಾಧಿಸಲು ತ್ರಿಪಕ್ಷೀಯ ಮೈತ್ರಿಕೂಟ ಅಸಮರ್ಥವಾಗಿದೆ ಎಂಬ ನಿರ್ಣಯಕ್ಕೆ ಬಂದಿದೆ.

'ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿ' ರಕ್ಷಿಸಿ ಆಳಗೊಳಿಸುವ ಹೋರಾಟ ಒಂದು ನಿರ್ಣಾಯಕ ಹಂತ ಮುಟ್ಟಿದೆ. ಈ ಹೋರಾಟದ ಕ್ಷೇತ್ರ ಸರಕಾರದ ಒಳಗೂ, ತ್ರಿಪಕ್ಷೀಯ ಮೈತ್ರಿಕೂಟದಲ್ಲೂ, ರಾಷ್ಟ್ರೀಯ ಪ್ರಾಂತೀಯ ಸ್ಥಳೀಯ ಮಟ್ಟದಲ್ಲೂ ಎಲ್ಲೆಲ್ಲೂ ಹರಡಿಕೊಂಡಿದೆ. ಸರಕಾರ, ಪಕ್ಷ, ಸಂಘಟನೆಗಳ ಕಾರ್ಯಕರ್ತರ ಕ್ರಾಂತಿಕಾರಿ ರಾಜಕೀಯದ ಬೇರುಗಳನ್ನು ಅಲುಗಾಡಿಸುವ ಮಟ್ಟಿಗೆ, ಸಾರ್ವಜನಿಕರ ಬದಲು ಸ್ವಂತದ ಖಾಸಗಿಯವರ ಹಿತಾಸಕ್ತಿ ಎತ್ತಿ ಹಿಡಿಯುವ ರೋಗ ಹರಡುತ್ತಿದೆ. ಎ.ಎನ್.ಸಿ. ನಾಯಕತ್ವ ಒಳಜಗಳಗಳಿಂದ ಬಾಧಿತವಾಗಿದ್ದು, ಈ ರೋಗವನ್ನು ಗುಣಪಡಿಸುವ ಶಕ್ತಿ ಉಳಿಸಿಕೊಂಡಿಲ್ಲ. ಎ.ಎನ್.ಸಿ.ಯ ಚುನಾವಣಾ ಜನಬೆಂಬಲ ಕುಸಿಯುತ್ತಿದ್ದು, ಕಳೆದ ಸ್ಥಳೀಯ ಚುನಾವಣೆಗಳ ನಂತರ ವಿಘಟನೆಗೊಳ್ಳುತ್ತಿದ್ದು, ಮುಂದಿನ ಚುನಾವಣೆಗಳಲ್ಲಿ ಅದು ಬಹುಮತ ಗಳಿಸುವ ಸಾಧ್ಯತೆ ಸಹ ಕಡಿಮೆಯಿದೆ ಎಂದು ಕಮ್ಯುನಿಸ್ಟ್ ಪಕ್ಷದ ಈ ವರ್ಷ ನಡೆಯಲಿರುವ 14ನೇ ಮಹಾಧಿವೇಶನದ ಮೊದಲಿನ ಕೇಂದ್ರ ಸಮಿತಿ ಅಂದಾಜಿಸಿದೆ.

ತ್ರಿಪಕ್ಷೀಯ ಆಡಳಿತ ಇದೀಗ ಬಿರುಕು

ದಕ್ಷಿಣ ಆಫ್ರಿಕಾದ ಎರಡುವರೆ ದಶಕಗಳ ಈ ತ್ರಿಪಕ್ಷೀಯ ಆಡಳಿತವು ವರ್ಣಬೇಧ ನೀತಿಗಳ ತಾರತಮ್ಯದಿಂದ ಬಳಲುತ್ತಿದ್ದ ಜನರಿಗೆ ಹಲವು ಪರಿಹಾರವನ್ನು ಜಾರಿಗೆ ತರುವಲ್ಲಿ ಸ್ವಲ್ಪ ಮಟ್ಟಿನ ಯಶಸ್ಸನ್ನು ಕಂಡುಕೊಂಡಿದ್ದು ನಿಜ. ಆದಾಗ್ಯೂ ಒಂದು ಕಡೆ ಕಾರ್ಮಿಕ ವರ್ಗದ ಬಲಾಬಲಗಳನ್ನು ರೂಪಾಂತರಿಸಲು ಗಮನಾರ್ಹವಾದ ಯಶಸ್ಸು ಕಂಡಿರಲಿಲ್ಲ. ಆದರೆ, ಮತ್ತೊಂದೆಡೆ, ಬಲವಾದ ಕರಿಯ ಬಂಡವಾಳಶಾಹಿ ವರ್ಗ ಎಎನ್‌ಸಿ ಯ ಮೂಲಕ ಪ್ರಭುತ್ವದ ಮೇಲೆ ಹಿಡಿತ ಸಾಧಿಸಲು ಬಯಸುತ್ತಿದ್ದಾರೆ ಎಂಬ ವಾಸ್ತವತೆ ಇದೀಗ ಬಯಲಿಗೆ ಬರುತ್ತಿದೆ. ಈ ವರ್ಗವು 'ಫ್ರೀಡಂ ಚಾರ್ಟರ್' ಅಥವಾ ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿಯ ಪಥಕ್ಕೆ ಅಂಟಿಕೊಳ್ಳುವ ಬದಲು, ಇದಕ್ಕೆ ತದ್ವಿರುದ್ಧವಾಗಿ ದೇಶವನ್ನು ಆ ಪಥದಿಂದ ದೂರವಿಡಲು ಬಯಸುತ್ತಿದೆ. ಈ ಬೆಳವಣಿಗೆಗಳು ಆಡಳಿತ ತ್ರಿಪಕ್ಷೀಯ ಮೈತ್ರಿಕೂಟಕ್ಕೆ ಅಪಾಯಕಾರಿಯಾಗಿವೆ.

ಈ ಕರಿಯ ಬಂಡವಾಳಶಾಹಿ ವರ್ಗ ತನ್ನ ಯಜಮಾನಿಕೆಯ ವಿರುದ್ಧ ಯಾವುದೇ ಸವಾಲನ್ನು ತಡೆಗಟ್ಟುವ ದೃಷ್ಠಿಯಿಂದ, ಬಲಪಂಥೀಯ 'ಆಫ್ರಿಕಾನ್' ಪ್ರತ್ಯೇಕತಾ ಧೋರಣೆಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆ. ಈ ಪ್ರಕ್ರಿಯೆಯಲ್ಲಿ ವರ್ಣಬೇಧ ನೀತಿಗಳ ವಿರುದ್ಧ ನಡೆಸಿದ ಹೋರಾಟದ ಸಾಧನೆಗಳನ್ನು ಹಾಗೂ ಮೌಲ್ಯಗಳನ್ನು ಅಂಶಗಳನ್ನು ಸಂವಿಧಾನದಿಂದ ಕಿತ್ತುಹಾಕುವ ಸಾಧ್ಯತೆಯೂ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಹಾಗೂ ಸಂವಿಧಾನಾತ್ಮಕ ಅಗತ್ಯಗಳ ರಕ್ಷಣೆ ಮಾಡಬೇಕಾದ ಸನ್ನಿವೇಶ ಎದುರಾಗಿದೆ. ಇಂತಹ ಸವಾಲಿನ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಅರಿತುಕೊಂಡು, ತ್ರಿಪಕ್ಷೀಯ ಮೈತ್ರಿಕೂಟವನ್ನು ಪುನರ್ ಸಂಯೋಜಿಸುವ ಅವಶ್ಯಕತೆ ಬಗ್ಗೆ ಕಾರ್ಯ ಪ್ರವೃತ್ತವಾಗಿದೆ.

ಎ.ಎನ್.ಸಿ. ತಕ್ಕ ಸರಿಪಡಿಸುವಿಕೆ ಮಾಡಿಕೊಳ್ಳದಿದ್ದರೆ ಅದಕ್ಕೆ ಬದಲಿಯಾಗಿ ಹೊಸ ಬಹು-ವರ್ಗಿಯ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗವೊಂದನ್ನು ಕಟ್ಟುವ ಬಗ್ಗೆ 33 ಸಂಘಟನೆಗಳ 230 ಪ್ರತಿನಿಧಿಗಳು ಸೇರಿ ಒಂದು ಸಮಾವೇಶವನ್ನು ಸಂಘಟಿಸಲು ಕಮ್ಯುನಿಸ್ಟ್ ಪಕ್ಷ ಮುಂದಾಗಿದೆ. ಎ.ಎನ್.ಸಿ.ಯ ಬದಲಾದ ವರ್ಗ ಸ್ವರೂಪದ ಹಿನ್ನೆಲೆಯಲ್ಲಿ ಎಷ್ಟರ ಮಟ್ಟಿಗೆ ಇದು ಸಾಧ್ಯ ಎಂದು ಕಾದು ನೋಡಬೇಕಾಗಿದೆ. ಎ.ಎನ್.ಸಿ.ಯ ಬದಲಾದ ವರ್ಗ ಸ್ವರೂಪದ ಹಿನ್ನೆಲೆಯಲ್ಲಿ ತ್ರಿಪಕ್ಷೀಯ ಮೈತ್ರಿಕೂಟವನ್ನು ಪುನರ್ ಸಂಯೋಜಿಸುವ ಅಗತ್ಯ ಬಿದ್ದರೆ ಅದರಿಂದ ಹೊರಬರುವ ನಿರ್ಣಾಯಕ ಘಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷ ಸರಿಯಾದ ನಿರ್ಧಾರವನ್ನು ತೆಗೆದುಕೊಂಡು 'ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿ' ರಕ್ಷಿಸಿ ಆಳಗೊಳಿಸುವ ಹೋರಾಟವನ್ನು ದೃಢವಾಗಿ ಮುನ್ನಡೆಸುತ್ತದೆ ಎಂದು ಆಶಿಸಬೇಕಾಗಿದೆ. ●

ನಾಳಿನ ಕಾರ್ಯಕ್ರಮಗಳು

ರೈತರು, ದಲಿತರು, ಕೃಷಿ ಕಾರ್ಮಿಕರ ಬೃಹತ್ ಸಮಾವೇಶ ಜುಲೈ 10, ಶಿಕ್ಷಕರ ಸದನ, ಬೆಂಗಳೂರು

ವಿದ್ಯುತ್ ಗುತ್ತಿಗೆ ಕಾರ್ಮಿಕರ ರಾಜ್ಯ ಸಮ್ಮೇಳನ ಜುಲೈ 19-20 ಬೆಂಗಳೂರು

ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಪ್ರಸಾರಾಂದೋಲನ, ಸಮಾವೇಶಗಳು ಜುಲೈ 23ರಿಂದ ಅಗಸ್ಟ್ 6

ಬೀಡಿ ಕಾರ್ಮಿಕರ 6ನೇ ರಾಜ್ಯ ಸಮ್ಮೇಳನ ಜುಲೈ 24-25 ಮೂಡಬಿದರೆ

ಕ್ಯೂಬಾ ಚೆ ಕ್ಯಾಸ್ಟ್ರೊ ಜುಲೈ 26 ಬೆಂಗಳೂರು

ಸಮಾಜವಾದಿ ಕ್ರಾಂತಿ ಮತ್ತು ವಿಜ್ಞಾನ ಜುಲೈ 29 ಬೆಂಗಳೂರು

ಕಾರ್ಮಿಕರ ರಾಜ್ಯ ಜಾಥಾ ಜುಲೈ 29- ಅಗಸ್ಟ್ 13, ಸಿಐಟಿಯು, ರಾಜ್ಯಾದ್ಯಂತ


ಬುಡಕಟ್ಟು ಮಹಾಕಾವ್ಯಗಳು ಅಗಸ್ಟ್ 9 ಸಮುದಾಯ, ಧಾರವಾಡ

ಕಾರ್ಮಿಕರ ಅಹೋರಾತ್ರಿ ಧರಣಿ ಅಗಸ್ಟ್ 14 ಸಿಐಟಿಯು, ರಾಜ್ಯಾದ್ಯಂತ

ಜನಶಕ್ತಿ ರಾಜ್ಯ ಮಟ್ಟದ ಉತ್ಸವ 2017 ಅಗಸ್ಟ್ 19 ಬೆಂಗಳೂರು

ಸಮಾಜವಾದಿ ಕ್ರಾಂತಿ ಮತ್ತು ಸಂಸ್ಕೃತಿ ಅಗಸ್ಟ್ 20 ಬೆಂಗಳೂರು

ಸಾರ್ವತ್ರಿಕ ಮಹಾಮುಷ್ಕರ ಸೆಪ್ಟೆಂಬರ್ 14





ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ ಕುರಿತು ಸಂವಾದ ಕಾರ್ಯಕ್ರಮ

ಸಿದ್ಧಮಾದರಿ ಒಡೆಯೋಣ, ಪರ್ಯಾಯ ಮಾದರಿ ಕಟ್ಟೋಣ

ಜುಲೈ 2 ರ ಭಾನುವಾರ ಬೆಂಗಳೂರು ಶಾಸಕ ಭವನದ ಸಮ್ಮೇಳನ ಸಭಾಂಗಣದಲ್ಲಿ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. "ಸಿದ್ಧಮಾದರಿ ಒಡೆಯೋಣ, ಪರ್ಯಾಯ ಮಾದರಿ ಕಟ್ಟೋಣ" ಘೋಷಣೆಯಡಿಯಲ್ಲಿ ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ ಕುರಿತು ಚರ್ಚೆ ನಡೆಸಲಾಯಿತು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಲೇಖಕಿಯರ ಸಂಘ ಹಾಗೂ ಬೆಂಗಳೂರು ವಿವಿ ಟೀಚರ್ಸ್ ಅಸೋಸಿಯೇಶನ್ ಸಂಯುಕ್ತವಾಗಿ ಸಂವಾದ ಕಾರ್ಯಕ್ರಮ ಆಯೋಜಿಸಿದ್ದವು. ವಿವಿಧ ಮಾಧ್ಯಮಗಳಲ್ಲಿ ಕೆಲಸ ಮಾಡುತ್ತಿರುವವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಂವಾದದಲ್ಲಿ ಕೇಳಿಬಂದಿದ್ದು

ಮಹಿಳೆಯರು ಪತ್ರಿಕೆ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ತಮ್ಮ ಸೀಮಿತ ಅವಕಾಶದಲ್ಲಿ ಸಂವೇದನಾಶೀಲತೆ ಕಾಪಾಡಿಕೊಳ್ಳುವ, ಸಿದ್ಧಮಾದರಿ ಅಭಿಪ್ರಾಯಗಳನ್ನು ದಾಟಿ ವರದಿ ರೂಪಿಸುವ ಸವಾಲುಗಳ ಬಗ್ಗೆ ಹಾಗೂ ಪ್ರಯತ್ನಗಳ ಬಗ್ಗೆ ಪತ್ರಕರ್ತರು ಮಾತನಾಡಿದರು. ಇದರ ಜೊತೆಗೇ ಜಾಹೀರಾತುದಾರರ ಧೋರಣೆಯನ್ನು ಸಹಿಸಿಕೊಳ್ಳಬೇಕಾದ ಮಿತಿಯ ಬಗ್ಗೆಯೂ ಚರ್ಚೆಗಳಾದವು. ಅದರಾಚೆಗೂ ಕಾನೂನು ಹೋರಾಟಗಳನ್ನು ರೂಪಿಸಿ ಲಿಂಗ ತಾರತಮ್ಯ ಎತ್ತಿಹಿಡಿಯುವ ಸ್ಟಿರಿಯೋಟೈಪ್ ಜಾಹೀರಾತುಗಳನ್ನು ಮಟ್ಟಹಾಕುವ ಬಗ್ಗೆಯೂ ಚರ್ಚೆ ನಡೆಯಿತು.

ಇದರ ನಡುವೆ ವೀಕ್ಷಕರು ಏನನ್ನು ಬಯಸುತ್ತಾರೋ ಅದನ್ನು ಕೊಡಬೇಕಾಗುತ್ತದೆ. ವೀಕ್ಷಕರು ಸಿದ್ಧಮಾದರಿ ಅಭಿಪ್ರಾಯದ ಸುದ್ದಿ, ಜಾಹೀರಾತು, ಮನರಂಜನೆಯನ್ನೇ ಬಯಸುತ್ತಾರೆ ಅನ್ನುವ ಧೋರಣೆಯೂ ಕೆಲವರಿಂದ ವ್ಯಕ್ತವಾಯಿತು. ಇದಕ್ಕೆ ಪ್ರತಿಯಾಗಿ, ವೀಕ್ಷಕರಲ್ಲಿ ಸದಭಿಪ್ರಾಯ ರೂಪುಗೊಳಿಸಬೇಕಾದ ಮಹತ್ತರ ಜವಾಬ್ದಾರಿ ಹೊಂದಿರುವ ಮಾಧ್ಯಮಗಳು ಆಯ್ಕೆಯ ಕುರಿತು ವೀಕ್ಷಕರನ್ನೇ ದೂರುವುದು ಸರಿಯಲ್ಲ, ಈ ದೂರುವಿಕೆ ಸಿದ್ಧಮಾದರಿಗಳನ್ನು ಶಾಶ್ವತವಾಗಿ ಸ್ಥಾಪಿಸುವ ಹುನ್ನಾರವಷ್ಟೆ ಅನ್ನುವ ಅಭಿಪ್ರಾಯ ಕೇಳಿಬಂತು.



ಪೋಸ್ಟರ್ ಪ್ರದರ್ಶನ

ಸಿದ್ಧಮಾದರಿ ಚಿಂತನೆಗಳನ್ನು ಪ್ರಶ್ನಿಸುವ ಹಾಗೂ ಅವುಗಳ ಮೀರುವಿಕೆಯನ್ನು ಸಂಕೇತಿಸುವ ಪೋಸ್ಟರ್'ಗಳನ್ನು ಸಿದ್ಧಪಡಿಸಿ ಪ್ರದರ್ಶಿಲಾಯಿತು. ಸುಮಾರು 50ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಪೋಸ್ಟರ್‌ಗಳು ಮಾಧ್ಯಮ ಹಾಗೂ ಜನಸಾಮಾನ್ಯರು ಹೊತ್ತುಕೊಂಡಿರುವ ಸಿದ್ಧಮಾದರಿಯನ್ನು ಒಡೆಯುವ ಬರಹಗಳಿಂದ ಕೂಡಿದ್ದು, ನೋಡುಗರ ಗಮನ ಸೆಳೆದವು. ಈ ಪೋಸ್ಟರ್‌ಗಳಿಗಾಗಿ ಪ್ರತ್ಯೇಕ ಫೋಟೋಶೂಟ್ ಮಾಡಿ ರೂಪಿಸಿದ್ದು ವಿಶೇಷವಾಗಿತ್ತು. ಮುಂದಿನ ದಿನಗಳಲ್ಲಿ ವಿವಿಧ ಶಾಲಾಕಾಲೇಜುಗಳಲ್ಲಿ ಈ ಪೋಸ್ಟರ್'ಗಳ ಪ್ರದರ್ಶನ ಏರ್ಪಡಿಸಲು ಜನವಾದಿ ಮಹಿಳಾ ಸಂಘಟನೆ ಉದ್ದೇಶಿಸಿದೆ.

ಐದು ಸುತ್ತಿನ ಚರ್ಚೆಯ ನಿರ್ಣಯಗಳು

- ಜಾಹೀರಾತುಗಳು ಹುಟ್ಟುಹಾಕುತ್ತಿರುವ / ಹರಡುತ್ತಿರುವ ಸ್ಟಿರಿಯೋಟೈಪ್ಸ್ ಕುರಿತು ಜನರಲ್ಲಿ, ಅದೇ ವೇಳೆಗೆ ಜಾಹೀರಾತು ಉತ್ಪಾದಕರಲ್ಲಿ ಜಾಗೃತಿ ಮೂಡಿಸಲು ಯತ್ನಿಸುವುದು.
- ಮಾಧ್ಯಮಗಳಲ್ಲಿ ಭಾಷೆಯ ಪ್ರಯೋಗವನ್ನು ಸೂಕ್ಷ್ಮವಾಗಿಸಲು ಪ್ರಯತ್ನಿಸುವುದು
- ಮಹಿಳಾ ಪುರವಣಿಗಳು, ಕಾರ್ಯಕ್ರಮಗಳು ಅನ್ನುವ ಪ್ರತ್ಯೇಕತೆಯನ್ನು ತೊಡೆದು ಮುಖ್ಯ ವಾಹಿನಿ ಚರ್ಚೆಯಲ್ಲೇ ಒಳಗೊಳಿಸಲು ಒತ್ತಾಯಿಸುವುದು
- ಮಾಧ್ಯಮ ಉದ್ಯೋಗಿಗಳು ಮಹಿಳೆಯರು ಹಾಗೂ ಲಿಂಗ ಸಮಾನತೆಗೆ ಸಂಬಂಧಿಸಿದ ಕಾನೂನುಗಳ ಅರಿವು ಹೊಂದಿರುವುದನ್ನು ಕಡ್ಡಾಯಗೊಳಿಸುವುದು
- ಪರ್ಯಾಯ ಮಾಧ್ಯಮ ಹಾಗೂ ಮಾರ್ಗಗಳ ಮೂಲಕ; ಹಾಗೆಯೇ ಚಾಲ್ತಿಯಲ್ಲಿರುವ ಮಾರ್ಗಗಳನ್ನೇ ಸೂಕ್ಷ್ಮಗೊಳಿಸುವ ಮೂಲಕ ಜನರನ್ನು ತಲುಪುವುದು, ಆಮೂಲಕ ಸಿದ್ಧ ಮಾದರಿಗಳನ್ನು ಒಡೆಯುವುದು

ಮಹಿಳೆಯ ದೇಹವಲ್ಲ, ಅಸ್ಮಿತೆಯ ಚಿತ್ರಣ ಆಗಬೇಕು

ಸ್ತ್ರೀಯರ ಸ್ಥಾನಮಾನ ಮತ್ತು ಸಬಲೀಕರಣಗಳನ್ನು ಎತ್ತಿಹಿಡಿಯಲು ಮಾಧ್ಯಮಗಳು ಸಿದ್ಧಮಾದರಿಗಳನ್ನು ಮುರಿದು ಸ್ತ್ರೀಯರ ಬಗೆಗಿನ ನಿಲುವುಗಳಿಗೆ ಹೊಸ ಆಯಾಮ ನೀಡಬೇಕು. ವಿಶ್ವಸಂಸ್ಥೆಯು 1970ರ ದಶಕವನ್ನು ವಿಶ್ವ ಮಹಿಳೆಯರ ದಶಕ ಎಂದು ಘೋಷಿಸಿದ ನಂತರ ಮಾಧ್ಯಮಗಳು ಮಹಿಳೆಯರ ಕುರಿತು ಕಾಳಜಿ ತೋರತೊಡಗಿದವು. ಆದರೆ ಇತ್ತೀಚಿನ ದಿನಗಳಲ್ಲಿ ಕಾರ್ಪೋರೇಟ್ ಲಾಬಿಗೆ ಮಣಿದು ಮಹಿಳೆಯರನ್ನು ಕೇವಲ ವ್ಯಾಪಾರದ ಸರಕಾಗಿ ಬಿಂಬಿಸಲಾಗುತ್ತಿದೆ. ಮಾಧ್ಯಮಗಳಲ್ಲಿ ಮಹಿಳೆಯನ್ನು ಮಹಿಳೆಯಾಗಿ ನೋಡುವುದಕ್ಕಿಂತ ಮನುಷ್ಯಳನ್ನಾಗಿ ನೋಡಿದರೆ ಸಮಸ್ಯೆಗಳು ನಿವಾರಣೆಯಾಗುತ್ತವೆ.

~ ಮಾಲಿನಿ ಭಟ್ಟಾಚಾರ್ಯ,
ಅಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ

ಮಾಧ್ಯಮಗಳಲ್ಲಿ ಮಹಿಳೆಯರ ಕುರಿತು ಇರುವ ಲೈಂಗಿಕ ದೃಷ್ಟಿಕೋನ, ವ್ಯಂಗ್ಯ, ಅಪಹಾಸ್ಯಗಳ ಪರಿಭಾಷೆಯನ್ನು ನಿಯಂತ್ರಿಸಬೇಕು. ಮಹಿಳೆಯ ದೇಹವಲ್ಲ, ಅಸ್ಮಿತೆಯ ಚಿತ್ರಣ ಆಗಬೇಕು. ಮಹಿಳಾ ಹಕ್ಕುಗಳಿಗೆ ಮಾರಕವಾಗುವ ವರದಿ ಮತ್ತು ಜಾಹೀರಾತುಗಳ ವಿರುದ್ಧ ಕಾನೂನಾತ್ಮಕ ಹೋರಾಟ ರೂಪಿಸಬೇಕು.

~ ಮಂಜೀತ್ ರತಿ,
ಮಾಧ್ಯಮ ಉಪಸಮಿತಿ ಸಂಚಾಲಕಿ,
ಜನವಾದಿ ಮಹಿಳಾ ಸಂಘಟನೆ

ನಾಗಶೆಟ್ಟಿಹಳ್ಳಿಯಿಂದ ರಾಮನಗರಕ್ಕೆ ಜಾಥಾ



ನಾಗಶೆಟ್ಟಿಹಳ್ಳಿ ದಲಿತರಿಗೆ ನೀಡಿದ್ದ ನಿವೇಶನದ ಎದುರು ಡಾ॥ ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕುವ ಮೂಲಕ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಉದ್ಘಾಟಿಸಿ ಮಾತನಾಡಿದರು. ಜಾತಿ ತಾರತಮ್ಯ, ಅಸ್ಪೃಶ್ಯತೆ ಆಚರಣೆ ಮಾಡುತ್ತಿರುವ ಕೆಲವು ಲಿಂಗಾಯಿತ ಜಾತಿವಾದಿ ಮುಖಂಡರುಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಅಲ್ಲದೆ ಸರ್ಕಾರಕ್ಕೆ ವಂಚಿಸಿ ಮಂಡಲ ಪಂಚಾಯಿತಿಯವರು ಈ ಜಾಗಗಳನ್ನು ಖಾತೆ ಮಾಡಿಕೊಟ್ಟಿರುವುದು ಕಾನೂನು ಬಾಹಿರವಾಗಿದೆ. ಅದನ್ನು ಸರ್ಕಾರ ಕೂಡಲೇ ರದ್ದುಪಡಿಸಿ ಹಕ್ಕುಪತ್ರ ಹೊಂದಿರುವ ದಲಿತರಿಗೆ ಖಾತೆ ಮಾಡಿಕೊಟ್ಟು ನಿವೇಶನ ಹಿಂದಿರುಗಿಸಲು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಎನ್. ಉಮೇಶ್ ಮಾತನಾಡಿ ಬಸವಣ್ಣನವರ ಹೆಸರಿನಲ್ಲಿ ದೇವಸ್ಥಾನ ಕಟ್ಟಿ ಅಪಚಾರ ಮಾಡುತ್ತಿದ್ದಾರೆ. ತುಮಕೂರಿನ ಸಿದ್ದಲಿಂಗಸ್ವಾಮಿ ಹೆಸರಿನಲ್ಲಿ ಬೋರ್ಡ್ ಹಾಕಿ ಅವರಿಗೆ ಅವಮಾನ ಮಾಡುತ್ತಿದ್ದಾರೆ. ಸಿದ್ದಲಿಂಗಸ್ವಾಮಿಯವರನ್ನು ನಾವು, ಪೊಲೀಸಿನವರು, ಕೃತ್ಯವೆಸಗಿರುವ ಜಂಗ ದ್ರೋಹಿಗಳೂ ಒಟ್ಟಿಗೆ ಹೋಗಿ ಕೇಳೋಣ ಬನ್ನಿ. ಆಗ ನಿಮ್ಮ ಬಣ್ಣ ಬಯಲಾಗುತ್ತದೆ ಎಂದರು. ದಲಿತರಿಗೆ ಸರ್ಕಾರ ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯಿಸಿ. ಸಮುದಾಯದ ರಾಜ್ಯ ಉಪಾಧ್ಯಕ್ಷರಾದ ಟಿ. ಸುರೇಂದ್ರರಾವ್, ಡಿಹೆಚ್ಎಸ್ ಬೆಂಗಳೂರು ದಕ್ಷಿಣ ಜಿಲ್ಲಾ ಸಂಚಾಲಕರಾದ ಬಿ. ರಾಜಶೇಖರ ಮೂರ್ತಿ, ಎಸ್ಎಫ್ಐ ರಾಜ್ಯ ಉಪಾಧ್ಯಕ್ಷರಾದ ಚಿಕ್ಕರಾಜ್ ಇವರುಗಳು ಮಾತನಾಡಿದರು.

ಈ ಜಾಥಾದಲ್ಲಿ ಬೆಂ. ದಕ್ಷಿಣ ಸಮಿತಿಯಿಂದ ಡಿಹೆಚ್ಎಸ್ ರಾಜ್ಯ ಸಮಿತಿ ಸದಸ್ಯರಾದ ರಾಜಣ್ಣ.ಎನ್, ಡಿಹೆಚ್ಎಸ್ ರಾಜಾಜಿನಗರ ವಲಯ ಸಮಿತಿ ಮುಖಂಡರಾದ ರಾಜಣ್ಣ (ಬಿಎಸ್ಎನ್ಎಲ್), ಶಂಕರ್ (ಕಮಲನಗರ), ಚೆಲುವಯ್ಯ (ಕಮಲನಗರ), ಚಂದ್ರಶೇಖರ್ (ಶ್ರೀರಾಮಪುರ), ಶ್ರೀನಿವಾಸ್ (ನಿವೃತ್ತ ಆರ್‌ಬಿಐ ನೌಕರರು), ಪಾರ್ಥಿಬನ್ ಭಾಗವಹಿಸಿದರು.

ಮಂಡ್ಯ ಜಿಲ್ಲಾ ಸಂಚಾಲಕರು ಕೃಷ್ಣ .ಆರ್, ಶಂಕರ್ (ಶ್ರೀರಂಗಪಟ್ಟಣ), ಯಶವಂತ (ಕೆಪಿಆರ್ಎಸ್ ಮಂಡ್ಯ), ಜೆಎಂಎಸ್ ಮುಖಂಡರಾದ ಗೌರಮ್ಮ ಮತ್ತಿತರರು ಭಾಗವಹಿಸಿದ್ದರು.

ನೇತೃತ್ವವನ್ನು ಮಾಗಡಿ ತಾಲೂಕ್ ವನಜ, ನಾಗಶೆಟ್ಟಿಹಳ್ಳಿ ಮುಖಂಡರಾದ ಗಂಗಹೊನ್ನಸ್ವಾಮಯ್ಯ (ಮಾಸ್ತರು), ಗೋವಿಂದರಾಜ್ ವಹಿಸಿದರು. ಬೆಂ. ದಕ್ಷಿಣ ಜಿಲ್ಲಾ ಸಮಿತಿಯಿಂದ ನಂದಿಸ್, ಮಾದೇಶ್ (ಅನೇಕಲ್) ವಹಿಸಿದ್ದರು.

ರಾಮನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹರ್ಣ ಅಧಿಖಾರಿ ಶ್ರೀಮತಿ ಶೈಲಜಾ ರವರಿಗೆ ಮತ್ತು ಜಿಲ್ಲಾಧಿಕಾರಿಯವರಿಗೆ ಮನವಿ ನೀಡಲಾಯಿತು. ಜುಲೈ 13 ನೇ ತಾರಿಖು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ





ನಡೆಸಿ ನಿರ್ಣಯ ಕೈಗೊಳುವುದಾಗಿ ರಾಮನಗರ ಸಿಇಓ ತಿಳಿಸಿದ್ದಾರೆ.

– ಗೋಪಾಲಕೃಷ್ಣ ಹರಳಹಳ್ಳಿ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**